ಶುಕ್ರವಾರ, ಆಗಸ್ಟ್ 4, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಶೋ ನವದೆಹಲಿಯಲ್ಲಿ ನಡೆದ ಫ್ಯಾಷನ್ ಶೋನಲ್ಲಿ ಪಾಲ್ಗೊಂಡಿದ್ದ ರೂಪದರ್ಶಿ

ಕೇಂದ್ರೀಕೃತ ಅನುಷ್ಠಾನಕ್ಕೆ ಆಕ್ಷೇಪ • ರಾಜ್ಯಕ್ಕೆ ಕೇಂದ್ರ ಸರ್ಕಾರದ ಮೂವರು ಕಾರ್ಯದರ್ಶಿಗಳ ಜಂಟಿ ಪತ್ರ

ಗ್ರಾಮಸ್ಥರಿಲ್ಲದ 'ಜಲ ಜೀವನ್' ಅಪೂರ್ಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಗ್ರಾಮೀಣ ಪ್ರದೇಶಕ್ಕೆ ಶುದ್ಧ ಕುಡಿಯುವ ನೀರು ಪೂರೈಸುವ ಜಲಜೀವನ್ ಮಿಷನ್ (ಜೆಜೆಎಂ) ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿ, ಗ್ರಾಮ ಸಭೆಗಳ ಒಳಗೊಳ್ಳುವಿಕೆ ಕಡ್ಡಾಯ ಎನ್ನುವುದನ್ನು ಕೇಂದ್ರ ಸರ್ಕಾರ ಮತ್ತೊಮ್ಮೆ ನೆನಪಿಸಿದೆ.

ಈ ಕುರಿತು ಜಂಟಿ ಪತ್ರ ಬರೆದಿರುವ ಕೇಂದ್ರ ಪಂಚಾಯಿತಿ ರಾಜ್, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮೂವರೂ ಕಾರ್ಯದರ್ಶಿಗಳು, 2019ರಲ್ಲಿ ಆರಂಭವಾಗಿದ್ದ ಯೋಜನೆಯಡಿ ಮನೆ ಮನೆಗೆ ಕಲ್ಪಿಸುವ ನಲ್ಲಿ ಸಂಪರ್ಕ ಶೇ 70ರಷ್ಟು ಗುರಿ ಸಾಧಿಸಲಾಗಿದ್ದರೂ ಜೆಜೆಎಂ ನಿಯಮದಂತೆ ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಸಭೆಗಳ ಮೂಲಕ ಯೋಜನೆಯನ್ನು ಅನುಷ್ಠಾನ ಮಾಡದೇ, ಕೇಂದ್ರೀಕೃತ ವ್ಯವಸ್ಥೆಯ ಮೂಲಕ ಕಾರ್ಯಗತಗೊಳಿಸುತ್ತಾ ಬಂದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಗ್ರಾಮ ಪಂಚಾಯಿತಿಗಳೇ ತಮ್ಮ ಗ್ರಾಮಕ್ಕೆ ಬೇಕಾದ ನೀರಿನ ಮೂಲವನ್ನು ಗುರುತಿಸಿ, ಕ್ರಿಯಾಯೋಜನೆ ರೂಪಿಸಬೇಕು. ನಂತರ ಅದು ಗ್ರಾಮದ ಜನರನ್ನು ಒಳಗೊಂಡ ಗ್ರಾಮ ಸಭೆಯಲ್ಲಿ ಅನುಮೋದನೆಗೊಳ್ಳಬೇಕು. ಜಿಲ್ಲಾ ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಇಲಾಖೆ, ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರಿಂಗ್ ವಿಭಾಗಗಳು ಯೋಜನೆಯ ಅನುಷ್ಠಾನಕ್ಕೆ ಬಾಹ್ಯ ಸಹಕಾರ ನೀಡಬೇಕು. ಮೇಲುಸ್ತುವಾರಿ ನೋಡಿಕೊಳ್ಳಬೇಕು. ಅನುಷ್ಠಾನಕ್ಕೆ ತಾಂತ್ರಿಕ ಅನುಮೋದನೆ ನೀಡುವುದಷ್ಟೇ ಗ್ರಾಮೀಣಾಭಿವೃದ್ಧಿ ಇಲಾಖೆ ಕೆಲಸ' ಎಂದು ಕಾರ್ಯದರ್ಶಿಗಳಾದ ವಿನಿ ಮಹಾಜನ್ (ಕುಡಿಯುವ ನೀರು ಮತ್ತು ನೈರ್ಮಲ್ಯ), ಶೈಲೇಶ್ ಕುಮಾರ್ ಸಿಂಗ್ (ಗ್ರಾಮೀಣಾಭಿವೃದ್ಧಿ) ಹಾಗೂ ಸುನೀಲ್ ಕುಮಾರ್ (ಪಂಚಾಯಿತಿ ರಾಜ್) ತಾಕೀತು ಮಾಡಿದ್ದಾರೆ.

ನಿಯಮದಂತೆ ನೀರು ಸರಬರಾಜು, ಅನುಷ್ಠಾನ, ನಿರ್ವಹಣೆ, ನೀರಿನ ಸೇವಾ ಶುಲ್ಕ ಸಂಗ್ರಹ ಸಂಪೂರ್ಣ ಗ್ರಾಮ

ಸಮುದಾಯಗಳಿಗೆ ಬಿಡಲಾಗಿದೆ. ಗ್ರಾಮಸಭೆಗಳಲ್ಲಿ ನಿರ್ಧಾರ ತೆಗೆದುಕೊಂಡು ಅದಕ್ಕಾಗಿ ನೀರು ಬಳಕೆದಾರರ ಸಮಿತಿಗಳನ್ನು ರಚಿಸಬೇಕು. ಈ ಗುಂಪುಗಳಿಗೆಶಕ್ತಿತುಂಬಲುಪಂಚಾಯಿತಿ ರಾಜ್ ಇಲಾಖೆ ಅಧಿಸೂಚನೆಗಳನ್ನು ಹೊರಡಿಸಬೇಕು. ಗ್ರಾಮದ ಒಳಗಿನ ಕಾಮಗಾರಿಗಳ ಅನುಷ್ಠಾನಕ್ಕೆ ಅಗತ್ಯವಾದ ಅನುದಾನವನ್ನು ಗ್ರಾಮ ಸಮಿತಿಗಳ ಒಪ್ಪಿಗೆ ಪಡೆದು ಬಿಡುಗಡೆ ಮಾಡಬೇಕು. ಇದರಿಂದ ಮುಂದಿನ ದಿನಗಳಲ್ಲಿ ತೆರಿಗೆ ಸಂಗ್ರಹ ಕಾರ್ಯ

ಪಂಚಾಯಿತಿಗಳನ್ನು ಹೊರಗಿಟ್ಟು ಯೋಜನೆ ಕಾರ್ಯಗತಗೊಳಿಸಲಾಗಿದೆ. ಜೆಜೆಎಂನ ನಿರ್ವಹಣೆ ಹಾಗೂ ತೆರಿಗೆ ಸಂಗ್ರಹಣೆಯ ಹೊಣೆಗಾರಿಕೆ ನಿರಾಕರಿಸಲು ನಿರ್ಧರಿಸಿದ್ದೇವೆ

ಕಾಡಶೆಟ್ಟಿಹಳ್ಳಿ ಸತೀಶ್
ಅಧ್ಯಕ್ಷ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ಸುಲಭವಾಗಲಿದೆಎಂದುವಿವರಿಸಿದ್ದಾರೆ.

ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ತಾಂತ್ರಿಕತೆ, ದೃಢವಾದ ನಿರ್ವಹಣಾ ವ್ಯವಸ್ಥೆ ರೂಪಿಸಲು ಸ್ಥಳೀಯ ಉದ್ಯಮಿಗಳು, ಸ್ವಸಹಾಯ ಗುಂಪುಗಳು ಸೇರಿದಂತೆ ಸಂಘ-ಸಂಸ್ಥೆಗಳ ನೆರವು ಪಡೆಯಬೇಕು ಎಂದು ಸಲಹೆ ನೀಡಿದ್ದಾರೆ.

ನೀರಿನ ಕಂದಾಯ ನೀಡಲು ನಿರಾಕರಣೆ

ರಾಜ್ಯದಲ್ಲಿ 1.16 ಕೋಟಿ ಮನೆಗಳಿದ್ದು, ಈಗಾಗಲೇ 70 ಲಕ್ಷ ಮನೆಗಳಿಗೆ ನೀರಿನ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಗ್ರಾಮದ ಹೊರಗೆ ಕೈಗೊಳ್ಳುವ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ 50ರಷ್ಟು ಅನುದಾನ ಒದಗಿಸುತ್ತಿವೆ. ಗ್ರಾಮದ ಒಳಗೆ ನೀರು ಸರಬರಾಜಿಗೆ ಅಗತ್ಯವಾದ ಮೂಲಸೌಕರ್ಯ ಕೈಗೊಳ್ಳಲು ತಗಲುವ ವೆಚ್ಚದ ಶೇ 10 ರಷ್ಟು ಗ್ರಾಮಸ್ಥರು ನೀಡಬೇಕಿದೆ. ನಿಯಮದಂತೆ ಸ್ಥಳೀಯರನ್ನು ಒಳಗೊಳ್ಳದೆ ಯೋಜನೆ ಅನುಷ್ಠಾನ ಮಾಡಿದ್ದರಿಂದ ಕಾಮಗಾರಿ ಪೂರ್ಣಗೊಂಡು ನಲ್ಲಿ ಸಂಪರ್ಕ ಕಲ್ಪಿಸಿರುವ ಬಹುತೇಕ ಗ್ರಾಮಗಳಲ್ಲಿ ವಂತಿಗೆ ಹಾಗೂ ನೀರಿನ ಕಂದಾಯ ನೀಡಲು ಗ್ರಾಮಸ್ಥರು ನಿರಾಕರಿಸಿದ್ದಾರೆ.

ಅಂಕಿ-ಅಂಶಗಳು

₹59 ಸಾವಿರ ಕೋಟಿ
ಯೋಜನೆಗೆ ನಿಗದಿ ಮಾಡಿದ ವೆಚ್ಚ

₹30,790 ಕೋಟಿ
ಗ್ರಾಮಗಳ ಹೊರಗಿನ ಕಾಮಗಾರಿಗೆ ಮಾಡಿದ ವೆಚ್ಚ

1.01 ಕೋಟಿ
ರಾಜ್ಯದ ಗ್ರಾಮೀಣ ಭಾಗದ ಮನೆಗಳು

70 ಲಕ್ಷ
ನಲ್ಲಿ ಸಂಪರ್ಕ ಪಡೆದ ಮನೆಗಳು

31 ಲಕ್ಷ
ಸಂಪರ್ಕ ಪಡೆಯದ ಮನೆಗಳು

ಸುದ್ದಿ 2 ನಿಮಿಷ

ಡಯಾಲಿಸಿಸ್: 45 ದಿನಗಳಲ್ಲಿ ವೇತನ– ದಿನೇಶ್ ಗುಂಡೂರಾವ್

ಬೆಂಗಳೂರು: 'ಡಯಾಲಿಸಿಸ್ ಘಟಕಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 45 ದಿನಗಳೊಳಗೆ ವೇತನ ಪಾವತಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು . ಇದರಿಂದಾಗಿ ಸಿಬ್ಬಂದಿ ಮುಷ್ಕರ ಕೈಬಿಟ್ಟಿದ್ದಾರೆ.

ಸಕಾಲದಲ್ಲಿ ವೇತನ ಪಾವತಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ರಾಜ್ಯ ಡಯಾಲಿಸಿಸ್ ನೌಕರರ ಸಂಘದ ನೇತೃತ್ವದಲ್ಲಿ ಡಯಾಲಿಸಿಸ್ ಸಿಬ್ಬಂದಿ ಬುಧವಾರದಿಂದ ಮುಷ್ಕರ ಕೈಗೊಂಡಿದ್ದರು. ಸಂಘದ ಪ್ರತಿನಿಧಿಗಳ ಜತೆಗೆ ದಿನೇಶ್ ಗುಂಡೂರಾವ್ ಅವರು ಗುರುವಾರ ಸಭೆ ನಡೆಸಿ, ಬೇಡಿಕೆಗಳನ್ನು ಈಡೇರಿಸುವುದಾಗಿ ತಿಳಿಸಿದರು.

'ಕೇಂದ್ರಗಳನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಯು ಸಮಯಕ್ಕೆ ಸರಿಯಾಗಿ ವೇತನ ನೀಡುತ್ತಿಲ್ಲ. ಅಲ್ಲದೇ, ಹೆಚ್ಚುವರಿ ಭತ್ಯೆಗಳು ವರ್ಷದಿಂದ ಬಾಕಿಯಿವೆ. ಭವಿಷ್ಯನಿಧಿಯೂ ಪಾವತಿಯಾಗಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಮುಷ್ಕರ ಮುಂದುವರಿಸುವುದು ಅನಿವಾರ್ಯ' ಎಂದು ಡಯಾಲಿಸಿಸ್ ಕೇಂದ್ರಗಳ ಪ್ರತಿನಿಧಿಗಳು ತಿಳಿಸಿದರು.

ಸಿಬ್ಬಂದಿಯ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಆರೋಗ್ಯ ಸಚಿವರು, 'ವೇತನ ಪಾವತಿಗೆ ಸಂಬಂಧಿಸಿದಂತೆ ಸಂಸ್ಥೆಯ ಜತೆಗೆ ಮಾತುಕತೆ ನಡೆಸಿ, 45 ದಿನಗಳ ಒಳಗೆ ವೇತನ ನೀಡಲಾಗುವುದು. ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಒದಗಿಸುವ ಬಗ್ಗೆಯೂ ಇದೇ 31ರೊಳಗೆ ಕ್ರಮಕೈಗೊಳ್ಳಲಾಗುವುದು' ಎಂದು ಹೇಳಿದರು.

ಇದರಿಂದಾಗಿ ಮುಷ್ಕರ ಕೈಬಿಟ್ಟು, ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವುದಾಗಿ ಡಯಾಲಿಸಿಸ್ ಸಿಬ್ಬಂದಿ ತಿಳಿಸಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್ ಹಾಗೂ ಅಧಿಕಾರಿಗಳು ಇದ್ದರು.

ಪ್ರಾಚಾರ್ಯ ಲೋಕಾಯುಕ್ತ ಬಲೆಗೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ಮುಡಬಿ ಗ್ರಾಮದ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯ ಪ್ರಾಚಾರ್ಯ ಶಂಕರ ಜೋಗೆ ₹25 ಸಾವಿರ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಯಲ್ಲದಗುಂಡಿ ಗ್ರಾಮದ ನಾಗನಾಥ ಪೂಜಾರಿಯ ಮಗನ 6ನೇ ತರಗತಿ ಪ್ರವೇಶಕ್ಕೆ ಪ್ರಾಚಾರ್ಯರು ₹40 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ನಾಗನಾಥ ಪೂಜಾರಿ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು. ಗುರುವಾರ ಹಣ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೆಲ್ಫಿ ವೇಳೆ ನೀರಿಗೆ ಬಿದ್ದ ಪ್ರವಾಸಿಗ ನಾಪತ್ತೆ

ಕುಶಾಲನಗರ (ಕೊಡಗು ಜಿಲ್ಲೆ): ಇಲ್ಲಿನ ಹಾರಂಗಿ ಜಲಾಶಯದ ಕೆಳಭಾಗದ ಸೇತುವೆ ಮೇಲೆ ಗುರುವಾರ ಸಂಜೆ ಸೆಲ್ಫಿ ತೆಗೆದುಕೊಳ್ಳುತ್ತಿದ್ದ ಬೆಂಗಳೂರಿನ ವಿದ್ಯಾರಣ್ಯಪುರಂ ಸಂದೀಪ (46) ಕಾಲು ಜಾರಿ ನೀರಿಗೆ ಬಿದ್ದು ನಾಪತ್ತೆಯಾಗಿದ್ದಾರೆ. ಅಗ್ನಿಶಾಮಕ–ತುರ್ತು ಸೇವೆಗಳ ಇಲಾಖೆಯ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ.

'ಬೆಂಗಳೂರಿನಲ್ಲಿ ಟ್ಯಾಟೂ ಕಲಾವಿದರಾಗಿದ್ದು, ಸಾಕುನಾಯಿಗಳ ಮಾರಾಟವನ್ನೂ ಮಾಡುತ್ತಿದ್ದ ಸಂದೀಪ ಅವರು, ಮೂವರು ಸ್ನೇಹಿತರೊಂದಿಗೆ ಪ್ರವಾಸಕ್ಕೆಂದು ಬಂದಿದ್ದರು.

ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ ಸಂತ್ರಸ್ತೆ

ಉಡುಪಿ: ಇಲ್ಲಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ಸಂತ್ರಸ್ತೆ ಗುರುವಾರ ಜಿಲ್ಲಾ ನ್ಯಾಯಾಲಯಕ್ಕೆ ಹಾಜರಾಗಿ ಹೇಳಿಕೆ ನೀಡಿದರು.

'ಜುಲೈ 18ರಂದು ಕಾಲೇಜಿನಲ್ಲಿ ನಡೆದ ಘಟನೆಯನ್ನು ಸಂತ್ರಸ್ತೆ ನ್ಯಾಯಾಧೀಶರ ಮುಂದೆ ತಿಳಿಸಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದ್ದು ಮೊಬೈಲ್‌ನಿಂದ ಡಿಲೀಟ್ ಆಗಿದೆ ಎನ್ನಲಾದ ವಿಡಿಯೊವನ್ನು ಮರು ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ವಿಎಚ್‌ಪಿ ಆರೋಪ: 'ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಆರೋಪಿತ ಯುವತಿಯರ ಮೊಬೈಲ್‌ನಲ್ಲಿ ಮತ್ತೊಂದು ವಿಡಿಯೊ ಲಭ್ಯವಾಗಿದೆ' ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಆರೋಪಿಸಿದರು.

ಸೆ.17 ರಂದು ಮೀಸಲಾತಿ ಹಕ್ಕೊತ್ತಾಯ ಮಂಡನೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಮೀಸಲಾತಿಗಾಗಿ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡನೆ ಕಾರ್ಯಕ್ರಮವನ್ನು ಕೂಡಲಸಂಗಮದಲ್ಲಿ ಸೆಪ್ಟೆಂಬರ್ 17ರಂದು ಹಮ್ಮಿಕೊಳ್ಳಲಾಗಿದೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 'ಶ್ರಾವಣ ಮಾಸದ ಪ್ರಯುಕ್ತ 2ಎ ಮೀಸಲಾತಿಗಾಗಿ ಸಂಕಲ್ಪಿಸಿ ಇಷ್ಟಲಿಂಗ ಪೂಜಾ ಕಾರ್ಯಕ್ರಮ ರಾಜ್ಯದಾದ್ಯಂತ ಆಗಸ್ಟ್ 21ರಿಂದ ಸೆಪ್ಟೆಂಬರ್ 17ರವರೆಗೆ ಮಾಡಲಾಗುವುದು' ಎಂದರು.

ಹಿಂದೂ ದೇವರ ಅವಹೇಳನ ಆರೋಪಿ ಬಂಧನ

ಮಂಗಳೂರು: ಹಿಂದೂ ದೇವರ ಬಗ್ಗೆ ಅಶ್ಲೀಲವಾದ ಸಂದೇಶವನ್ನು ಇನ್‌ಸ್ಟಾಗ್ರಾಂ ಖಾತೆಯೊಂದರಲ್ಲಿ ಹಂಚಿಕೊಂಡ ಆರೋಪಿಯನ್ನು ನಗರದ ಸೆನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ನಗರದ ಬಿಕರ್ನಕಟ್ಟೆಯ ಮಸೀದಿ ಹಿಲ್ ರಸ್ತೆ ಬಳಿಯ ನಿವಾಸಿ ಮೊಹಮ್ಮದ್ ಸಲ್ಮಾನ್ (22) ಬಂಧಿತ. ಆರೋಪಿಯು ಹಿಂದೂ ದೇವರ ಬಗ್ಗೆ ಇನ್‌ಸ್ಟಾಗ್ರಾಂ ಖಾತೆಯೊಂದರಲ್ಲಿ ಅಶ್ಲೀಲವಾಗಿ ಕಮೆಂಟ್ ಮಾಡಿದ್ದ ಬಗ್ಗೆ ಸೆನ್ ಠಾಣೆಯಲ್ಲಿ ದೂರು ದಾಖಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯನ್ನು ನಗರದ 7ನೇ ಜೆ.ಎಂ.ಎಫ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗ್ರಾಮೀಣ ವಿದ್ಯಾರ್ಥಿಗಳ ತಪ್ಪದ ಪರದಾಟ, ಹೊಸ ಸರ್ಕಾರದ ಮೇಲೆ ನಿರೀಕ್ಷೆ

ಇನ್ನೂ ಆರಂಭಗೊಳ್ಳದ ಪಿಯು ಕಾಲೇಜುಗಳು

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಹಿಂದಿನ ಬಿಜೆಪಿ ಸರ್ಕಾರ ಕಳೆದ ವರ್ಷ ರಾಜ್ಯಕ್ಕೆ ಮಂಜೂರು ಮಾಡಿದ್ದ 50 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಈವರೆಗೆ ಕಾರ್ಯಾರಂಭ ಮಾಡದ ಕಾರಣ ಈ ವರ್ಷವೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಪಿಯು ಶಿಕ್ಷಣಕ್ಕೆ ಪಟ್ಟಣಗಳಿಗೆ ಹೋಗಬೇಕಿದೆ.

ರಾಜ್ಯದ ಬಹುತೇಕ ಹಳ್ಳಿ, ಪಟ್ಟಣಗಳಿಗೆ ಸಮರ್ಪಕ ಬಸ್ ಸೌಕರ್ಯವಿಲ್ಲ. ಆರ್ಥಿಕ ಸಂಕಷ್ಟ, ಸುರಕ್ಷತೆ ಮತ್ತಿತರ ಕಾರಣಕ್ಕೆ ಹಲವರು ಪಿಯು ಶಿಕ್ಷಣ ಮೊಟಕುಗೊಳಿಸಿದ ಉದಾಹರಣೆಗಳಿವೆ. ಇದನ್ನು ಅರಿತ ಸರ್ಕಾರ, 2022ರ ಸೆಪ್ಟೆಂಬರ್‌ನಲ್ಲಿ ರಾಜ್ಯದ ವಿವಿಧೆಡೆ 50 ಸರ್ಕಾರಿ ಪಿಯು ಕಾಲೇಜು ಮಂಜೂರು ಮಾಡಿತು. ಇದಕ್ಕೆ ಪೂರಕವಾಗಿ ಕ್ರಮ ಕೈಗೊಳ್ಳಲು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ನಿರ್ದೇಶಕರಿಗೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪತ್ರ ಬರೆದರು.

ರಾಜ್ಯದಲ್ಲಿ 101 ಸ್ಥಳಗಳಲ್ಲಿ ಹೊಸ ಸರ್ಕಾರಿ ಪಿಯು ಕಾಲೇಜುಗಳ ಆರಂಭಕ್ಕೆ ಅಗತ್ಯವಿರುವ ಸೌಕರ್ಯಗಳ ಕುರಿತು ರಾಜ್ಯ ಸರ್ಕಾರಕ್ಕೆ ವರದಿ ನೀಡಬೇಕಿದೆ

ಸಿಂಧೂ ರೂಪೇಶ, ನಿರ್ದೇಶಕಿ
ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)

ಇದರ ಬೆನ್ನಲ್ಲೇ ರಾಜ್ಯದಲ್ಲಿನ 29 ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ, ಹೊಸ ಪಿಯು ಕಾಲೇಜುಗಳನ್ನು ಆರಂಭಿಸಲು ಬೇಕಾದ ಮೂಲಸೌಕರ್ಯಗಳ ಕುರಿತು ಆಯಾ ಜಿಲ್ಲೆಗಳ ಉಪನಿರ್ದೇಶಕರಿಂದ ಸರ್ಕಾರ ಮಾಹಿತಿ ಪಡೆದಿತ್ತು. '2023–24ನೇ ಸಾಲಿನಿಂದಲೇ ಈ ಕಾಲೇಜು ಆರಂಭವಾಗಲಿವೆ' ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ವಿಧಾನಸಭೆ ಚುನಾವಣೆ ಮತ್ತಿತರ ಕಾರಣಗಳಿಂದ ಹೊಸ ಕಾಲೇಜುಗಳ ಆರಂಭ ನನೆಗುದಿಗೆ ಬಿತ್ತು.

ಬೆಳಗಾವಿ ಜಿಲ್ಲೆಗೆ ಮಂಜೂರಾ ಗಿದ್ದ ಪಿಯು ಕಾಲೇಜುಗಳಿಗೆ ಅಗತ್ಯವಿರುವ ಸೌಕರ್ಯದ ಮಾಹಿತಿಸರ್ಕಾರಕ್ಕೆ ನೀಡಲಾಗಿದೆ. ಶೀಘ್ರ ಕಾಲೇಜು ಆರಂಭವಾದರೆ ವಿದ್ಯಾರ್ಥಿಗಳಿಗೆ ಅನುಕೂಲ

ಎಂ.ಎಂ.ಕಾಂಬಳೆ, ಡಿಡಿಪಿಯು, ಬೆಳಗಾವಿ

ಈ ಮಧ್ಯೆ, ರಾಜ್ಯದಲ್ಲಿನ 101 ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ ಹೊಸ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಆರಂಭಿಸುವ ಕುರಿತು ಸರ್ಕಾರವು 2023ರ ಏಪ್ರಿಲ್‌ನಲ್ಲಿ ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ)ಯಿಂದ ಮಾಹಿತಿ ಕೇಳಿದೆ.

ನಿರಾಸೆ ಮೂಡಿಸಿದೆ: 'ನಮ್ಮೂರಿನಲ್ಲಿ ಸರ್ಕಾರಿ ಪಿಯು ಕಾಲೇಜು ಆರಂಭಗೊಳ್ಳುವ ನಿರೀಕ್ಷೆ ಇತ್ತು. ಆದರೆ, ಕಾರ್ಯಾರಂಭ ಮಾಡ ದಿರುವುದು ನಿರಾಸೆ ತಂದಿದೆ. 6 ಕಿ.ಮೀ ದೂರದ ಕಟಕೋಳ ಮತ್ತು 26 ಕಿ.ಮೀ ದೂರದ ರಾಮದುರ್ಗಕ್ಕೆ ವಿದ್ಯಾರ್ಥಿಗಳು ಹೋಗಬೇಕಿದೆ. ಬೆಳಗಿನ ಹೊತ್ತು ಸಕಾಲಕ್ಕೆ ಬಸ್ ಸಿಗದ ಕಾರಣ ತುಂಬಾ ಸಮಸ್ಯೆಯಾಗಿದೆ' ಎಂದು ರಾಮದುರ್ಗ ತಾಲ್ಲೂಕಿನ ಕೆ.ಚಂದರಗಿಯ ಉದಯ ಸೋಮನಟ್ಟಿ ತಿಳಿಸಿದರು.

'ಬೇಡಿಕೆ ಇರುವ ಕಡೆ ತ್ವರಿತವಾಗಿ ಸರ್ಕಾರಿ ಪಿಯು ಕಾಲೇಜು ಆರಂಭವಾದರೆ, ವಿದ್ಯಾರ್ಥಿಗಳಿಗೆ ಹಣ ಮತ್ತು ಸಮಯದ ಉಳಿತಾಯ ಆಗುತ್ತದೆ. ಸುರಕ್ಷತೆ ಕಾರಣಕ್ಕೆ ಹೆಣ್ಣುಮಕ್ಕಳು ಬೇರೆಡೆ ಅಧ್ಯಯನಕ್ಕೆ ತೆರಳಲಾಗದೆ, ಪಿಯು ಶಿಕ್ಷಣ ಮೊಟಕುಗೊಳಿಸುವುದು ತಪ್ಪುತ್ತದೆ' ಎನ್ನುತ್ತಾರೆ ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ನಿವೃತ್ತ ಉಪನಿರ್ದೇಶಕ ಜಿ.ಎ.ತಿಗಡಿ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.46	4,361	4,944
ಹಾರಂಗಿ	2,859	2,858.15	2,539	2,000
ಕಬಿನಿ	2284.00	2,283.27	4,442	6,000
ಹೇಮಾವತಿ	2,922	2,914.60	3,198	200
ಲಿಂಗನಮಕ್ಕಿ	1,819	1,788.60	9,921	3,105
ಸೂಪಾ (ಮೀ)	564	545.45	10,577	3,041
ಮಾಣಿ	595	580.96	1,949	00
ತುಂಗಭದ್ರಾ	1,633	1,626.99	20,550	2,253
ಮಲಪ್ರಭಾ	2079.5	2,064.60	4,430	194
ಘಟಪ್ರಭಾ	2175	2,157.48	12,248	1,854
ಭದ್ರಾ	186	163.90	5,850	191
ಆಲಮಟ್ಟಿ (ಮೀ)	519.6	519.02	96,054	62,606
ನಾರಾಯಣಪುರ (ಮೀ)	492.25	491.55	60,000	36,510

* ನೆಲಮಟ್ಟದಿಂದ

ಧ್ವಜ ತಯಾರಿಕೆ ಸ್ವಾತಂತ್ರ್ಯೋತ್ಸವ ಸಮೀಪಿಸುತ್ತಿದ್ದು ಹುಬ್ಬಳ್ಳಿಯ ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಸಂಸ್ಥೆಯ ರಾಷ್ಟ್ರ ಧ್ವಜ ತಯಾರಿಕಾ ಘಟಕದಲ್ಲಿ ಗುರುವಾರ ಕಾರ್ಮಿಕರು ರಾಷ್ಟ್ರ ಧ್ವಜ ತಯಾರಿಕೆಯಲ್ಲಿ ನಿರತರಾಗಿದ್ದರು –ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ನಟಿ ಮಮತಾ ಗುಡೂರ ನಿಧನ

ಪ್ರಜಾವಾಣಿ ವಾರ್ತೆ

ಅಮೀನಗಡ (ಬಾಗಲಕೋಟೆ ಜಿಲ್ಲೆ): ಇಳಕಲ್ ತಾಲ್ಲೂಕಿನ ಗುಡೂರ ನಿವಾಸಿ ರಂಗಭೂಮಿ, ಚಲನಚಿತ್ರ ನಟಿ ಮಮತಾ ಗುಡೂರ (75) ಗುರುವಾರ ನಿಧನರಾದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಗುಬ್ಬಿ ಕಂಪನಿ, ಕಮತಗಿಯ ಬಿ.ಆರ್. ಅರಿಶಿನಗೋಡಿ ಹುಚ್ಚೇಶ್ವರ ನಾಟ್ಯ ಸಂಘ, ದಾವಣಗೆರೆಯ ಕೆ. ಬಿ. ಆರ್.ಡ್ರಾಮಾ ಕಂಪನಿ, ಆಶಾಪುರ ಸಂಗಮೇಶ್ವರ ನಾಟ್ಯ ಸಂಘ, ಬೆಳಗಾವಿಯ ಕಲಾವೈಭವ ನಾಟ್ಯ ಸಂಘ, ಗುಡಗೇರಿ ಸಂಗಮೇಶ್ವರ ನಾಟ್ಯ ಸಂಘ ಸೇರಿ ಹಲವು ಕಂಪನಿಗಳ ನಾಟಕಗಳಲ್ಲಿ ನಟಿಸಿದ್ದರು.

'ಸೆರೆ ಅಂಗಡಿ ಸಂಗವ್ವ' ನಾಟಕದ ಸಂಗವ್ವನ ಪಾತ್ರ ಅವರಿಗೆ ದೊಡ್ಡ ಹೆಸರು ತಂದಿತ್ತು. 'ಎಂಥಾ ಮೋಜಿನ ಕುದುರೆ', 'ರಕ್ತರಾತ್ರಿ', 'ಹುಚ್ಚೇಶ್ವರ ಮಹಾತ್ಮೆ', 'ಎಚ್ಚರ ತಂಗಿ ಎಚ್ಚರ', 'ಊರು ಹೊಕ್ಕ ಹುಲಿ', 'ಚನ್ನಪ್ಪ ಚನ್ನಗೌಡ' ಸೇರಿ ಹಲವು ಪ್ರಮುಖ ನಾಟಕಗಳಲ್ಲಿ ಅವರು ಅಭಿನಯಿಸಿದ್ದರು. ಆಶಾ, ಗೆದ್ದಮಗ, ಅವಳ ನೆರಳು, ಶಿವಶಂಕರ, ಮನೆಗೆ ಬಂದ ಮಹಾಲಕ್ಷ್ಮಿ, ದೇವರ ಮನೆ, ರಣಭೇರಿ ಸೇರಿ 20ಕ್ಕೂ ಚಲನಚಿತ್ರಗಳಲ್ಲಿ ನಟಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು.

ಕರಕಲಾಗಿದ್ದು ನಿಮ್ಮ ಬುದ್ಧಿ: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸುಟ್ಟು ಕರಕಲಾಗಿದ್ದು ನಿಮ್ಮ ಬುದ್ಧಿಯೇ ಹೊರತು ಕಲ್ಯಾಣ ಕರ್ನಾಟಕದ ಜನರಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರಿಗೆ ತಿರುಗೇಟು ನೀಡಿದ್ದಾರೆ.

ಆರಗ ಜ್ಞಾನೇಂದ್ರ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮೈಬಣ್ಣ ಹಾಗೂ ಕಲ್ಯಾಣ ಕರ್ನಾಟಕ ಕುರಿತು ನೀಡಿರುವ ಹೇಳಿಕೆಯನ್ನು ಖಂಡಿಸಿ ಪ್ರಿಯಾಂಕ್ ಟ್ವೀಟ್ ಮಾಡಿದ್ದಾರೆ.

'ಆರಗ ಜ್ಞಾನೇಂದ್ರ ಅವರೇ ನೀವು ಆಡಿರುವುದು ನಿಮ್ಮ ಮಾತುಗಳಲ್ಲ; ಅದು ಕೇಶವ ಕೃಪದ ಪ್ರಭಾವದ ಮಾತು. ಬಿಜೆಪಿಯ ಅಂತರ್ಯದೊಳಗೆ ಅಡಗಿದ್ದ ಶೋಷಿತರ ಬಗೆಗಿನ ಅಸಹನೆಯ ಮಾತು' ಎಂದು ಆಕ್ಷೇಪಿಸಿದ್ದಾರೆ.

'ಶತಶತಮಾನಗಳಿಂದ ವರ್ಣಾಶ್ರಮದ ಹೆಸರಲ್ಲಿ ಶೋಷಣೆ ನಡೆಸಿ ಶ್ರಮಜೀವಿಗಳ ಬೆವರಿನಲ್ಲಿ ಬಿಟ್ಟಿ ತಿಂದವರ ಚರ್ಮ ಬೆಳ್ಳಗಿರಬಹುದು. ಸ್ವಾಭಿಮಾನದಿಂದ ದುಡಿದು ತಿನ್ನುವವರ ಮೈ ಬಿಸಿಲಲ್ಲಿ ಸುಟ್ಟಿರುತ್ತದೆ. ಆರಗ ಜ್ಞಾನೇಂದ್ರ ಅವರು ಒಂದೇ ಒಂದು ದಿನ ಮಣ್ಣು ಹೊತ್ತರೆ ಅವರ ಮೈಬಣ್ಣವೂ ಕಪ್ಪಗಾಗುತ್ತದೆ' ಎಂದು ಹೇಳಿದದ್ದಾರೆ.

'ಮನುಸ್ಮೃತಿಯ ವರ್ಣಾಶ್ರಮವನ್ನು ಮುದ್ದಾಡುವ ಬಿಜೆಪಿಗೆ ದಲಿತರ ರಾಜಕೀಯ ಏಳಿಗೆಯ ಬಗ್ಗೆ ಅಸಹನೆ ಇರುವುದು ಇಂತಹ ಮಾತುಗಳಿಂದ ಹೊರಬರುತ್ತವೆ. ಇದು ಬಿಜೆಪಿಯನ್ನೇ ಸುಟ್ಟು ಕರಕಲು ಮಾಡುತ್ತದೆ. ಏಕೆಂದರೆ ಇದು ಮನುಸ್ಮೃತಿಯ ಕಾಲವಲ್ಲ. ಬಾಬಾ ಸಾಹೇಬರ ಸಂವಿಧಾನದ ಕಾಲ' ಎಂದಿದ್ದಾರೆ.

ಆರಗ ರಾಜೀನಾಮೆಗೆ ಕಿಮ್ಮನೆ ಒತ್ತಾಯ

ಬೆಂಗಳೂರು: 'ಮನುಷ್ಯನ ಬಣ್ಣದ ಬಗ್ಗೆ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಮಾತನಾಡಿರುವುದು ಘೋರ ಅಪರಾಧ. ಅವರು ಕ್ಷಮೆ ಕೇಳಿದರೆ ಉಪಯೋಗವಿಲ್ಲ. ಅವರಿಂದ ರಾಜೀನಾಮೆ ಪಡೆಯಬೇಕು' ಎಂದು ಕಾಂಗ್ರೆಸ್ ಮುಖಂಡ ಕಿಮ್ಮನೆ ರತ್ನಾಕರ್ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಬಿಜೆಪಿಯ ಯಾವುದೇ ನಾಯಕರು ಆರಗ ಜ್ಞಾನೇಂದ್ರ ಅವರ ಈ ಹೇಳಿಕೆಯನ್ನು ಏಕೆ ಖಂಡಿಸುತ್ತಿಲ್ಲ. ಅವರ ಮನಸ್ಸಿನಲ್ಲಿಯೂ ಅದೇ ಆಲೋಚನೆ ಇದೆಯೇ' ಎಂದು ಪ್ರಶ್ನಿಸಿದರು.

'ಮಲ್ಲಿಕಾರ್ಜುನ ಖರ್ಗೆ ಮತ್ತು ಈಶ್ವರ ಖಂಡ್ರೆ ಅವರ ಬಗ್ಗೆ ಹಗುರವಾಗಿ ಮಾತನಾಡುವ ಜೊತೆಗೆ ಬಣ್ಣದ ಬಗ್ಗೆಯೂ ಅವಹೇಳನ ಮಾಡಿದ್ದಾರೆ. ಇದಕ್ಕಿಂತ ದೊಡ್ಡ ಅಪರಾಧ ಇನ್ನಿಲ್ಲ. ಈ ವಿಚಾರದಲ್ಲಿ ವಿಷಾದ ವ್ಯಕ್ತಪಡಿಸುವುದು ಬೇಕಿಲ್ಲ. ನೇರವಾಗಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ಮತ್ತು ಮಾನನಷ್ಟ ಮೊಕದ್ದಮೆ ಹೂಡಲಾಗುವುದು' ಎಂದೂ ಎಚ್ಚರಿಕೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಅನುದಾನ ₹10 ಸಾವಿರ ಕೋಟಿಗೆ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಕ್ಷಣಾ ಸಚಿವ ರಾಜನಾಥ ಸಿಂಗ್ ಹಾಗೂ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಗುರುವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಅವರುಸಂಸತ್‌ಭವನದಲ್ಲಿಮೋದಿ ಅವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿ ಸುಮಾರು 7 ನಿಮಿಷ ಮಾತುಕತೆ ನಡೆಸಿದರು. ಇದೊಂದು ಸೌಜನ್ಯದ ಭೇಟಿಯಾಗಿತ್ತು. ಬಳಿಕ ನಿರ್ಮಲಾ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಮೈಸೂರು ದಸರಾ ಮಹೋತ್ಸವದಲ್ಲಿ ಏರ್ ಶೋ ನಡೆಸಲು ರಾಜನಾಥ ಅವರಿಗೆ ಸಿದ್ದರಾಮಯ್ಯ ಮನವಿ ಮಾಡಿದರು.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಸಿದ್ದರಾಮಯ್ಯ ಅವರು ಗಡ್ಕರಿ ಅವರ ಗಮನ ಸೆಳೆದರು. ಹೆದ್ದಾರಿಯಲ್ಲಿ ಅಪಘಾತಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಚರ್ಚಿಸಿದರು. ಅಧಿಕಾರಿಗಳು ಹಾಗೂ ತಜ್ಞರ ತಂಡವೊಂದನ್ನು ಹೆದ್ದಾರಿ ವೀಕ್ಷಣೆಗೆ ಕಳುಹಿಸಿ ಲೋಪದೋಷ ಸರಿಪಡಿಸುವುದಾಗಿ ಗಡ್ಕರಿ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಶಿರಾಡಿ ಘಾಟ್‌ನಲ್ಲಿ 26 ಕಿ.ಮೀ. ಸುರಂಗ ನಿರ್ಮಾಣಕ್ಕೆ (ಮಾರನಹಳ್ಳಿಯಿಂದ ಅಡ್ಡಹೊಳೆ ವರೆಗೆ) ಅನುಮತಿ ನೀಡುವಂತೆ ಗಡ್ಕರಿ ಅವರಿಗೆ ಮನವಿ ಮಾಡಿದರು. ಇದಕ್ಕೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.

2023–24ನೇ ಆರ್ಥಿಕ ವರ್ಷದಲ್ಲಿ ರಾಷ್ಟ್ರೀಯ ಹೆದ್ದಾರಿ ಮೂಲ ಕಾಮಗಾರಿಗಳ ಅನುದಾನವನ್ನು ₹10 ಸಾವಿರ ಕೋಟಿಗೆ ಹೆಚ್ಚಿಸಬೇಕು. ಪ್ರವಾಹ ಹಾನಿ ಕಾಮಗಾರಿಗಳಿಗೆ ₹250 ಕೋಟಿ ಅನುದಾನ ನೀಡಬೇಕು. ಹೆದ್ದಾರಿಗಳ ನಿರ್ವಹಣೆ ಹಾಗೂ ದುರಸ್ತಿ ಕಾಮಗಾರಿಗಳ ಅನುದಾನವನ್ನು ₹50 ಕೋಟಿಗೆ ಏರಿಸಬೇಕು. ರಾಜ್ಯ ರಸ್ತೆಗಳ ಸುಧಾರಣೆಗಾಗಿ ಕೇಂದ್ರ ರಸ್ತೆ ಮೂಲಸೌಕರ್ಯ ನಿಧಿಯಿಂದ ₹1 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

ಕೊಳ್ಳೆಗಾಲ, ಗುಂಡ್ಲುಪೇಟೆ, ನಂಜನಗೂಡು, ಮೈಸೂರು ಹೆದ್ದಾರಿಯನ್ನು (150 ಕಿ.ಮೀ) ಚತುಷ್ಪಥ/ ಆರು ಪಥದ ಹೆದ್ದಾರಿಯನ್ನಾಗಿ ಪರಿವರ್ತಿಸಬೇಕು. ಕನಕಪುರ ರಸ್ತೆಯಿಂದ ತಮಿಳುನಾಡು ಗಡಿ ವರೆಗಿನ ಹೆದ್ದಾರಿಯನ್ನು ವಿಸ್ತರಣೆ ಮಾಡಲು ಅನುಮೋದನೆ ನೀಡಬೇಕು ಎಂದೂ ಮನವಿ ಮಾಡಿದರು.

ಖರ್ಗೆ, ರಾಹುಲ್ ಭೇಟಿ

ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಇದೇ ವೇಳೆ ಉಭಯ ನಾಯಕರು ಸಿದ್ದರಾಮಯ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಆರಗ ಜ್ಞಾನೇಂದ್ರ ವಿರುದ್ಧ ಎಫ್‌ಐಆರ್

ಕಲಬುರಗಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಸಂಬಂಧ ನೀಡಲಾದ ದೂರಿನ ಅನ್ವಯ, ನ್ಯಾಯಾಲಯದಿಂದ ಅನುಮತಿ ಪಡೆದು ಶಾಸಕ ಆರಗ ಜ್ಞಾನೇಂದ್ರ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತ ರಾಜೀವ್ ಜಾನೆ ಅವರು ಬುಧವಾರ ದೂರು ನೀಡಿದ್ದರು. ಗುರುವಾರ ನಗರದ 5ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದಿಂದ ಅನುಮತಿ ಪಡೆದು ಐಪಿಎಸ್ 504 (ಉದ್ದೇಶಪೂರ್ವಕ ಅವಹೇಳನಕಾರಿ ನಿಂದನೆ) ಅಡಿ ಪ್ರಕರಣ ದಾಖಲಾಗಿದೆ.

ಟೊಮೆಟೊ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಕೆಬ್ಬೇಪುರದಲ್ಲಿ ರೈತ ಮಂಜು ಅವರು ಎರಡು ಎಕರೆಯಲ್ಲಿ ಬೆಳೆದಿದ್ದ ಟೊಮೆಟೊ ಪೈಕಿ, ಒಂದು ಎಕರೆಯಲ್ಲಿ ಕಟಾವು ಹಂತಕ್ಕೆ ಬಂದಿದ್ದ ಬೆಳೆಯನ್ನು ದುಷ್ಕರ್ಮಿಗಳು ಬುಧವಾರ ರಾತ್ರಿ ನಾಶ ಮಾಡಿದ್ದಾರೆ.

'ಬೆಳೆ ಬೆಳೆಯಲು ಚಿನ್ನ ಅಡವಿಟ್ಟು ₹ 2 ಲಕ್ಷ ಸಾಲ ಮಾಡಿದ್ದೆ. ವ್ಯಾಪಾರಿಗಳು ಬಂದು ಬೆಳೆಯನ್ನು ಪರಿಶೀಲಿಸಿದ್ದರು. ಗಿನ ಬೆಲೆಯಲ್ಲಿ ಮಾರಾಟ ಮಾಡಿದ್ದರೆ ಸುಮಾರು ₹20 ಲಕ್ಷ ಆದಾಯ ಬರುತ್ತಿತ್ತು. ಪರಿಹಾರ ನೀಡದಿದ್ದರೆ ಆತ್ಮಹತ್ಯೆಯೇ ಗತಿ' ಎಂದು ಮಂಜುನಾಥ್ ಸುದ್ದಿಗಾರರಿಗೆ ತಿಳಿಸಿದರು.

ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪೊಲೀಸ್ ಶ್ವಾನ ದಳವನ್ನೂ ಕರೆಸಲಾಗಿತ್ತು. 'ಸ್ಥಳ ಪರಿಶೀಲಿಸಿ ದೂರು ದಾಖಲಿಸಿದ್ದು, ತನಿಖೆ ಆರಂಭಿಸಿದ್ದೇವೆ' ಎಂದು ಪ್ರಭಾರ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಿಂಡಿ ಅಣೆಕಟ್ಟು: ಅವೈಜ್ಞಾನಿಕ ಕಾಮಗಾರಿ ಆರೋಪ

ಎಂಟು ಎಕರೆಗೆ ನೀರುಣಿಸಲು ₹1.50 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಉಡುಪಿ: ಹೆಬ್ರಿ ತಾಲ್ಲೂಕಿನ ಶಿವಪುರ ಗ್ರಾಮದ ದೇವಸ್ಥಾನ ಬೆಟ್ಟುವಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಾಣಗೊಂಡಿರುವ ಕಿಂಡಿ ಅಣೆಕಟ್ಟು ಕಾಮಗಾರಿಯಲ್ಲಿ ಅಕ್ರಮ ನಡೆದಿರುವ ಶಂಕೆಯನ್ನು ಸ್ಥಳೀಯರು ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರದ ಪಶ್ಚಿಮ ವಾಹಿನಿ ಯೋಜನೆಯಡಿ ₹1.50 ಕೋಟಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ಆದರೆ, ಈ ಅಣೆಕಟ್ಟನಿಂದ ಅನುಕೂಲವಾಗುವುದು ಏಳೆಂಟು ಎಕರೆ ಕೃಷಿ ಭೂಮಿಗೆ ಮಾತ್ರ ಎನ್ನುವುದು ಸ್ಥಳೀಯರ ಆರೋಪ.

ಈ ಕಾಮಗಾರಿ ಮಂಜೂರಾಗಿದ್ದು 2019–20ರಲ್ಲಿ. ಪೂರ್ಣಗೊಂಡಿದ್ದು 2020–21ರಲ್ಲಿ.

'ಶಿವಪುರ ನದಿಗೆ ಸೇರುವ ಚಿಕ್ಕ ಉಪನದಿಗೆ ಈ ಕಿಂಡಿ ಅಣೆಕಟ್ಟು ನಿರ್ಮಿಸಲಾಗಿದೆ. ಹಿಂದೆ ನಾವು ಕಟ್ಟ ಕಟ್ಟಿಕೊಂಡು ಒಂದು ಬೆಳೆ ತೆಗೆಯುತ್ತಿದ್ದೆವು. ಡಿಸೆಂಬರ್ ಹೊತ್ತಿಗೆ ಇಲ್ಲಿ ನೀರು ಖಾಲಿ ಆಗುತ್ತಿತ್ತು. ಕಿಂಡಿ ಅಣೆಕಟ್ಟು ನಿರ್ಮಿಸಿದ್ದರೂ ಉಪಯೋಗ ಆಗಿಲ್ಲ. ಆಗಲೂ, ಈಗಲೂ ಒಂದೇ ಬೆಳೆ ತೆಗೆಯುತ್ತಿದ್ದೇವೆ. ಎರಡನೇ ಬೆಳೆ ಮಾಡಲು ನೀರು ಸಾಲುತ್ತಿಲ್ಲ' ಎಂದು 50 ವರ್ಷಗಳಿಂದ ಕೃಷಿ ಮಾಡುತ್ತಿರುವ ಸ್ಥಳೀಯ ಕೃಷಿಕರಾದ ಶಾರದಮ್ಮ ಹೇಳಿದರು.

ಉಡುಪಿ ಜಿಲ್ಲೆ ಹೆಬ್ರಿ ತಾಲ್ಲೂಕಿನ ಶಿವಪುರ ಗ್ರಾಮದ ದೇವಸ್ಥಾನಬೆಟ್ಟುವಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 1.5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಕಿಂಡಿ ಅಣೆಕಟ್ಟು

ಕಾಮಗಾರಿ ಕಳಪೆಯಾಗಿದ್ದರೆ ಇಲಾಖೆಯ ಅಧಿಕಾರಿಗಳಿಗೆ ದೂರು ಸಲ್ಲಿಸಬಹುದು. ಈ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತದೆ

ಎನ್.ಎಸ್.ಬೋಸರಾಜು, ಸಣ್ಣ ನೀರಾವರಿ ಸಚಿವ

'ಇಲ್ಲಿ ಅಣೆಕಟ್ಟು ನಿರ್ಮಿಸುವಂತೆ ನಾವ್ಯಾರೂ ಮನವಿ ಸಲ್ಲಿಸಿರಲಿಲ್ಲ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಬೇರೆ ಕಡೆಯಲ್ಲಿ ಅಣೆಕಟ್ಟು ನಿರ್ಮಿಸಬಹುದಿತ್ತು. ಅಣೆಕಟ್ಟಿನ ಮತ್ತೊಂದು ಭಾಗದಲ್ಲಿರುವ ರೈತರಿಗೆ ಸಹ ಇದರಿಂದ ಪ್ರಯೋಜನವಾಗಿಲ್ಲ. ಇದೊಂದು ಅವೈಜ್ಞಾನಿಕ ಯೋಜನೆ. ಇದಕ್ಕೆ ₹1.50 ಕೋಟಿ ವೆಚ್ಚವಾಗಿದೆ ಎಂದರೆ ನಂಬಲಾಗುತ್ತಿಲ್ಲ. ಕಾಮಗಾರಿ ಬಗ್ಗೆ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಚಿವಾಲಯಕ್ಕೆ ದೂರು ಸಲ್ಲಿಸಲಾಗಿದೆ' ಎಂದು ಸ್ಥಳೀಯ ಕೃಷಿಕ ಆರ್.ಎಸ್.ಮಂಜುನಾಥ್ ಹೇಳಿದರು.

'ನಿಯಮಗಳ ಪ್ರಕಾರ ದೇವಸ್ಥಾನ ಬೆಟ್ಟುವಿನಲ್ಲಿ ₹ 1.50 ಕೋಟಿ ವೆಚ್ಚದಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸಲಾಗಿದೆ' ಎಂದು ಸಣ್ಣ ನೀರಾವರಿ ಇಲಾಖೆಯ ಅಂತರ್ಜಲ ಅಭಿವೃದ್ಧಿ ಉಪ ವಿಭಾಗದ ಸಹಾಯಕ ಎಂಜಿನಿಯರ್ ರಾಥೋಡ್ ಪ್ರತಿಕ್ರಿಯಿಸಿದರು.

29 ಹೆಕ್ಟೇರ್ ಕೃಷಿ ಭೂಮಿಗೆ ನೀರು: 'ಈ ಕಿಂಡಿ ಅಣೆಕಟ್ಟು 29 ಹೆಕ್ಟೇರ್ ಕೃಷಿ ಭೂಮಿಗೆ ನೀರುಣಿಸುತ್ತಿದೆ. ಕೃಷಿಗೆ ನೀರು ಕೊಡುವುದು ಮಾತ್ರವಲ್ಲ; ಪರೋಕ್ಷವಾಗಿ ಅಂತರ್ಜಲ ವೃದ್ಧಿ, ಸುತ್ತಮುತ್ತಲಿರುವ ಕೆರೆ, ಬಾವಿಗಳ ಪುನಶ್ಚೇತನಗೊಳಿಸುವುದು ಕಿಂಡಿ ಅಣೆಕಟ್ಟು ನಿರ್ಮಾಣದ ಉದ್ದೇಶ. ಅಣೆಕಟ್ಟೆಗೆ ಸುಸಜ್ಜಿತ ನಾಲೆಯನ್ನೂ ನಿರ್ಮಾಣ ಮಾಡಲಾಗಿದೆ' ಎಂದು ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅರುಣ್ ಭಂಡಾರಿ ಹೇಳಿದರು.

ಶುಕ್ರವಾರ, ಆಗಸ್ಟ್ 4, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿತ್ರೋತ್ಸವ
ನವದೆಹಲಿಯಲ್ಲಿ ಗುರುವಾರ ನಡೆದ ಜಾಗರಣ್ ಚಿತ್ರೋತ್ಸವದಲ್ಲಿ ನಟಿ ಕಾಜೋಲ್ ಪಾಲ್ಗೊಂಡಿದ್ದರು

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಮಣಿಪುರ ಜನಾಂಗೀಯ ಹಿಂಸಾಚಾರ: ನಿಯಮ 167ರ ಅಡಿ ಚರ್ಚೆಗೆ ಕೇಂದ್ರ ಸರ್ಕಾರದ ತಾತ್ವಿಕ ಒಪ್ಪಿಗೆ

ಪರಿಹಾರ ಸೂತ್ರ ಮಂಡಿಸಿದ 'ಇಂಡಿಯಾ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರದಲ್ಲಿ ನಡೆದಿರುವ ಹಿಂಸಾಚಾರ ವಿಷಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಬೇಕು ಎಂದು ಎರಡು ವಾರಗಳಿಂದ ಹಿಡಿದಿದ್ದ ಪಟ್ಟನ್ನು 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಗುರುವಾರ ಕೊಂಚಮಟ್ಟಿಗೆ ಸಡಿಲಿಸಿದ್ದಾರೆ.

ರಾಜ್ಯಸಭೆಯಲ್ಲಿ ಕಲಾಪದ ಹಾದಿಯನ್ನು ಸುಗಮಗೊಳಿಸಲು ಕಣಿವೆ ರಾಜ್ಯದ ಸಂಘರ್ಷ ಸೇರಿದಂತೆ ಪ್ರಮುಖ ವಿಷಯಗಳ ಬಗ್ಗೆ ನಿಯಮ 167ರ ಅಡಿ ಚರ್ಚೆ ಆರಂಭಿಸಬೇಕು ಎಂಬ 'ವಿಶಿಷ್ಟ ಪರಿಹಾರ ಸೂತ್ರ'ವನ್ನು ಮೈತ್ರಿಕೂಟದ ಸದಸ್ಯರು ಮಂಡಿಸಿದ್ದಾರೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿದ್ದು, ಮುಂದಿನ ವಾರದಿಂದ ಕಲಾಪ ಹಳಿಗೆ ಮರಳುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಮಣಿಪುರ ಸಂಘರ್ಷವು ಸಂಸತ್ ಕಲಾಪವನ್ನು ನುಂಗಿ ಹಾಕಿದೆ. ಮೋದಿ ಅವರು ಎರಡೂ ಸದನಗಳಲ್ಲಿ ಹೇಳಿಕೆ ನೀಡಬೇಕು ಎಂದು 'ಇಂಡಿಯಾ' ಬಿಗಿಪಟ್ಟು ಹಿಡಿದಿತ್ತು. ಇದಕ್ಕೆ ಆಡಳಿತಾರೂಢ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ನಿಯಮ 267ರ ಅಡಿ ಸಂಬಂಧಿಸಿದಂತೆ ಚರ್ಚೆ ನಡೆಯಬೇಕೆಂದು 'ಇಂಡಿಯಾ'ದ ಸದಸ್ಯರು ಸರ್ಕಾರದ ಮುಂದೆ ಬೇಡಿಕೆ ಇಟ್ಟಿತ್ತು. ಇದರನ್ವಯ ಕಲಾಪದಲ್ಲಿನ ಇತರ ವಿಷಯಗಳನ್ನು ಬದಿಗಿಟ್ಟು ಕಣಿವೆ ರಾಜ್ಯದ ಸಂಘರ್ಷದ ಬಗ್ಗೆ ಸುದೀರ್ಘ ಚರ್ಚೆ ನಡೆಸಬೇಕಿದೆ. ಆದರೆ, ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಕೇಂದ್ರವು ನಿಯಮ 176ರ ಅಡಿ ಚರ್ಚೆಗೆ ಸಿದ್ಧ ಎಂದು ಹೇಳಿತ್ತು. ಇದರಡಿ ಅಲ್ಪಾವಧಿಯ ಚರ್ಚೆಗೆ ಅವಕಾಶ ಇರುವುದರಿಂದ ಪ್ರತಿಪಕ್ಷಗಳು ಒಪ್ಪಿಕೊಂಡಿರಲಿಲ್ಲ.



ರಾಜ್ಯಸಭೆಯ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿದರು —ಪಿಟಿಐ ಚಿತ್ರ

ಪ್ರತಿಪಕ್ಷಗಳ ಗದ್ದಲದಿಂದ ಹೈರಾಣಾಗಿರುವ ಸರ್ಕಾರವು ಸುಗಮ ಕಲಾಪವನ್ನು ಅಪೇಕ್ಷಿಸಿದೆ. ಹಾಗಾಗಿ, ಮಧ್ಯಾಹ್ನ ಸಭಾನಾಯಕ ಆಡಳಿತ ಪಕ್ಷದ ನಾಯಕ ಪಿಯೂಷ್ ಗೋಯಲ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಈ ಕುರಿತು ಚರ್ಚಿಸಿದರು. ನಿಯಮ 167ರ ಅಡಿ ಚರ್ಚೆಗೆ ಸರ್ಕಾರ ಮತ್ತು ಪ್ರತಿಪಕ್ಷಗಳು ಸಮ್ಮತಿಸಿವೆ ಎಂದು ಮೂಲಗಳು ತಿಳಿಸಿವೆ.

ಮಣಿಪುರ ವಿಷಯ ಕುರಿತು ಚರ್ಚೆಗೆ ಎರಡೂ ಕಡೆಯಿಂದ ಸಹಮತ ಸಾಧಿಸಿದ್ದರೂ ಪ್ರಧಾನಿ ಮೋದಿ ಅವರು ಕಲಾಪಕ್ಕೆ ಹಾಜರಾಗಿ ಹೇಳಿಕೆ ನೀಡಬೇಕೆಂಬ ಬಿಕ್ಕಟ್ಟು ಇನ್ನೂ ಬಗೆಹರಿದಿಲ್ಲ. 'ನಿಯಮ 167ರ ಅಡಿ ಚರ್ಚೆಗೆ ಗೋಯಲ್ ತಾತ್ವಿಕ ಒಪ್ಪಿಗೆ ನೀಡಿದ್ದಾರೆ. ಆದರೆ, ಪಕ್ಷದ ವರಿಷ್ಠರೊಟ್ಟಿಗೆ ಚರ್ಚಿಸಿದ ಬಳಿಕ ಇದಕ್ಕೆ ಅಧಿಕೃತವಾಗಿ ಸಮ್ಮತಿಸಲು ನಿರ್ಧರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಖರ್ಗೆ ಹೇಳಿದ್ದೇನು?: 'ಮೋದಿ ಅವರು ಸಂಸತ್‌ಗೆ ಬಂದು ಹೇಳಿಕೆ ನೀಡಬೇಕು. ನಮ್ಮದು ಈ ನೇರ ದಾರಿಯಲ್ಲಿ ಪಯಣವಷ್ಟೇ. ನಾವು ಯಾವುದೇ ಒಳ ದಾರಿಗಳಲ್ಲಿ ನುಸುಳುತ್ತಿಲ್ಲ' ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ. 'ಪ್ರಜಾವಾಣಿ' ಜೊತೆಗೆ ಮಾತನಾಡಿದ ಅವರು, 'ಸದ್ಯ ಸರ್ಕಾರದ ಅಂಗಳಕ್ಕೆ ಚೆಂಡನ್ನು ಎಸೆದಿದ್ದೇವೆ. ಚರ್ಚೆಗೆ ಸಮಯ ನಿಗದಿ ಪಡಿಸುವುದು ಅವರಿಗೆ ಬಿಟ್ಟದ್ದು' ಎಂದರು.

ಡೆರೆಕ್ ಒಬ್ರಯಾನ್ ವಿರುದ್ಧ ಅಸಮಾಧಾನ

ರಾಜ್ಯಸಭೆಯಲ್ಲಿ ಬೆಳಿಗ್ಗೆ ಕಲಾಪದ ವೇಳೆ ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಒಬ್ರಯಾನ್, 'ಸರ್ಕಾರ ತನ್ನ ನಿಲುವು ಸಡಿಲಿಸಿದರೆ ಮಣಿಪುರದ ಚರ್ಚೆಗೆ ತಾವು ಸಿದ್ಧ' ಎಂದು ಸಚಿವ ಪಿಯೂಷ್ ಗೋಯಲ್ ಮುಂದೆ ಕೋರಿಕೆ ಇಟ್ಟರು. ಇದಕ್ಕೆ ಒಪ್ಪಿದ ಗೋಯಲ್, ಪ್ರತಿಪಕ್ಷದ ಸದಸ್ಯರನ್ನು ಚರ್ಚೆಗೆ ಆಹ್ವಾನಿಸಿದ್ದರು.

ಹಾಗಾಗಿ, ಸಭಾಪತಿ ಜಗದೀಪ್ ಧನಕರ್ ಅವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 1 ಗಂಟೆಗೆ ಸಭೆ ಕರೆಯಲಾಗಿತ್ತು. ಆದರೆ, ಖರ್ಗೆ ವಿರುದ್ಧ ಸಚಿವರು ನೀಡಿದ್ದ ಹೇಳಿಕೆ ಬಗ್ಗೆ ಅಸಮಾಧಾನಗೊಂಡಿದ್ದ 'ಇಂಡಿಯಾ' ಸದಸ್ಯರು ಕೊನೆಯ ಕ್ಷಣದಲ್ಲಿ ಹಿಂದೆ ಸರಿದಿದ್ದರು.

ಈ ನಡುವೆಯೇ ಒಬ್ರಯಾನ್ ಅವರೇ ಏಕಾಂಗಿ ಈ ಕಾರ್ಯತಂತ್ರವನ್ನು ಅಂತಿಮಗೊಳಿಸಿದ್ದ ಬಗ್ಗೆ ಪ್ರತಿಪಕ್ಷಗಳ ಕೆಲವು ನಾಯಕರು ಅಪಸ್ವರ ಎತ್ತಿದ್ದಾರೆ.

ಬೆಳಿಗ್ಗೆ ನಡೆದ 'ಇಂಡಿಯಾ' ಸಭೆಯಲ್ಲಿ ಈ ಸೂತ್ರದ ಬಗ್ಗೆ ಸಮಾಜವಾದಿ ಪಕ್ಷ, ಡಿಎಂಕೆ, ಸಿಪಿಎಂ ಹಾಗೂ ಸಿಪಿಐ ಪಕ್ಷಗಳ ಜೊತೆ ಚರ್ಚಿಸಿದ ಬಳಿಕ ಪ್ರಕಟಿಸಲು ನಿರ್ಧರಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ. ಕೊನೆಗೆ, ಎಲ್ಲಾ ನಾಯಕರ ಜೊತೆಗೆ ಚರ್ಚಿಸಿದ ಒಬ್ರಯಾನ್, ಈ ತಂತ್ರಗಾರಿಕೆಯ ಮಹತ್ವದ ಕುರಿತು ಮನವರಿಕೆ ಮಾಡಿಕೊಟ್ಟ ಬಳಿಕ ಒಪ್ಪಿಗೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಡಲಲ್ಲಿ ಖನಿಜ ಗಣಿಗಾರಿಕೆ ಗುತ್ತಿಗೆ: ಮಸೂದೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರ ವಿಚಾರವಾಗಿ ವಿರೋಧ ಪಕ್ಷಗಳ ಸದಸ್ಯರ ಸಭಾತ್ಯಾಗದ ಮಧ್ಯೆಯೇ, ಕಿನಾರೆ ಸಮೀಪದ ಕಡಲಿನಲ್ಲಿ ಖನಿಜಗಳ ಅನ್ವೇಷಣೆ, ಗಣಿಗಾರಿಕೆಗೆ 50 ವರ್ಷಗಳ ನಿಶ್ಚಿತ ಅವಧಿಗೆ ಗುತ್ತಿಗೆ ನೀಡುವುದಕ್ಕೆ ಅವಕಾಶ ಕಲ್ಪಿಸುವ ಮಸೂದೆಯನ್ನು ರಾಜ್ಯಸಭೆಯಲ್ಲಿ ಗುರುವಾರ ಅಂಗೀಕರಿಸಲಾಯಿತು.

ಭೋಜನ ವಿರಾಮದ ನಂತರ ಕಲಾಪ ಆರಂಭಗೊಂಡಾಗ ಮಣಿಪುರದಲ್ಲಿನ ಪರಿಸ್ಥಿತಿಯನ್ನು ಮತ್ತೆ ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಸದಸ್ಯರು, ಕಣಿವೆ ರಾಜ್ಯದ ಪರಿಸ್ಥಿತಿ ಕುರಿತ ಚರ್ಚೆ ನಡೆಸಬೇಕು ಎಂದು ಪಟ್ಟು ಹಿಡಿದರು.

ಈ ಗದ್ದಲ ನಡುವೆಯೇ, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಅವರು 'ತೀರ ಸಮೀಪದ ಕಡಲ ಖನಿಜಗಳ ಗಣಿಗಾರಿಕೆ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ–2023' ಮಂಡಿಸಿದರು.

ಕಡಲ ಕಿನಾರೆಯಲ್ಲಿ ಲಭ್ಯವಿರುವ ಖನಿಜಗಳ ಅನ್ವೇಷಣೆ, ಅವುಗಳ ಅಭಿವೃದ್ಧಿ ಹಾಗೂ ಹರಾಜಿಗೆ ಈ ಮಸೂದೆ ಅವಕಾಶ ಒದಗಿಸುತ್ತದೆ. ಈ ಗುತ್ತಿಗೆಯನ್ನು ಸ್ಪರ್ಧಾತ್ಮಕ ಬಿಡ್ಡಿಂಗ್ ಪ್ರಕ್ರಿಯೆ ಮೂಲಕ ಖಾಸಗಿ ವಲಯಕ್ಕೂ ನೀಡುವ ಅವಕಾಶವನ್ನು ಒದಗಿಸುತ್ತದೆ.

'ಗುತ್ತಿಗೆ ಪಡೆದ ನಂತರ, ಖನಿಜಗಳ ಉತ್ಪಾದನೆ ಮತ್ತು ಸಾಗಣೆಗೆ ನಾಲ್ಕು ವರ್ಷಗಳ ಸಮಯಾವಕಾಶ ಒದಗಿಸಲಾಗುತ್ತದೆ. ಉತ್ಪಾದನೆ ಮತ್ತು ಸಾಗಣೆ ಕಾರ್ಯ ಸ್ಥಗಿತಗೊಳಿಸುವ ಸಂದರ್ಭದಲ್ಲಿ ಅದನ್ನು ಪುನಃ ಆರಂಭಿಸುವ ಸಲುವಾಗಿ ಮತ್ತೆ ಎರಡು ವರ್ಷಗಳ ಅವಕಾಶ ನೀಡುವ ಉದ್ದೇಶವನ್ನೂ ಈ ಮಸೂದೆ ಒಳಗೊಂಡಿದೆ.

ಅಣುಶಕ್ತಿ ಕ್ಷೇತ್ರದಲ್ಲಿ ಬಳಸುವ ಖನಿಜಗಳ ಅನ್ವೇಷಣೆ ಅಥವಾ ಉತ್ಪಾದನೆಯ ಪರವಾನಗಿಯನ್ನು ಸರ್ಕಾರಿ ಇಲ್ಲವೇ ಸರ್ಕಾರದ ಅಧೀನದ ನಿಗಮಕ್ಕೆ ಮಾತ್ರ ನೀಡುವ ಅಂಶವೂ ಮಸೂದೆಯಲ್ಲಿದೆ.

ಈ ಮಸೂದೆಯನ್ನು ಲೋಕಸಭೆಯಲ್ಲಿ ಮಂಗಳವಾರ ಅಂಗೀಕರಿಸಲಾಗಿತ್ತು.

ವಕೀಲ ವೃತ್ತಿ ತಿದ್ದುಪಡಿ ಮಸೂದೆಗೆ ಅಂಗೀಕಾರ

ನವದೆಹಲಿ(ಪಿಟಿಐ): ಕಾನೂನು ವೃತ್ತಿಯನ್ನು ಒಂದೇ ಕಾಯ್ದೆಯ ಮೂಲಕ ನಿಯಂತ್ರಿಸುವ ಉದ್ದೇಶ ಹೊಂದಿರುವ ವಕೀಲ ವೃತ್ತಿ (ತಿದ್ದುಪಡಿ) ಮಸೂದೆ –2023ಕ್ಕೆ ರಾಜ್ಯಸಭೆ ಗುರುವಾರ ಅನುಮೋದನೆ ನೀಡಿತು.

ಮಸೂದೆ ಕುರಿತ ಚರ್ಚೆ ವೇಳೆ ಮಾತನಾಡಿದ ಕೇಂದ್ರ ಕಾನೂನು ಮತ್ತು ನ್ಯಾಯಾಂಗ ಸಚಿವ ಅರ್ಜುನ್ ರಾಮ್ ಮೇಘವಾಲ್, 'ವಕೀಲರ ವೃತ್ತಿ ಶ್ರೇಷ್ಠ ವೃತ್ತಿ. ಕಾನೂನು ವಿರೋಧಿ ಚಟುವಟಿಕೆಗಳನ್ನು ದೃಢವಾಗಿ ವಿರೋಧಿಸಿ ಹತ್ತಿಕ್ಕಬೇಕು' ಎಂದು ಹೇಳಿದರು.

1961ರ ಕಾಯ್ದೆಗೆ ತಿದ್ದುಪಡಿ ತರುವ ಈ ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಿದ ನಂತರ ಕಲಾಪವನ್ನು ಮುಂದೂಡಲಾಯಿತು.

ಸುದ್ದಿ 2 ನಿಮಿಷ

ನಂಗೆ ಮದ್ವೆಯಾಗಿ 45 ವರ್ಷ ಆಯ್ತು, ಸಿಟ್ಟು ಬರಲ್ಲ: ಧನಕರ್

ನವದೆಹಲಿ(ಪಿಟಿಐ): ಮಣಿಪುರ ಸಂಘರ್ಷಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಬಿಸಿ ಚರ್ಚೆಗೆ ಸಾಕ್ಷಿಯಾದ ರಾಜ್ಯಸಭೆಯ ಕಲಾಪದಲ್ಲಿ ಗುರುವಾರ ಹಾಸ್ಯದ ಬುಗ್ಗೆ ಉಕ್ಕಿತು.

ಸಭಾಪತಿ ಜಗದೀಪ್ ಧನಕರ್ ಅವರು, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡಿದರು. ಆಗ ಖರ್ಗೆ ಅವರು, 'ಪ್ರತಿಪಕ್ಷಗಳ ಸದಸ್ಯರ ಪ್ರಶ್ನೆಗೆ ಉತ್ತರಿಸುವಾಗ ನೀವು ಏಕೆ ಸಿಡಿಮಿಡಿಗೊಳ್ಳುತ್ತೀರಿ ಎಂಬುದೇ ಅರ್ಥವಾಗುತ್ತಿಲ್ಲ' ಎಂದು ಹೇಳಿ ಕುಳಿತುಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಧನಕರ್, 'ನಾನು ಮದುವೆಯಾಗಿ 45 ವರ್ಷಗಳಾಗಿವೆ. ಹಾಗಾಗಿ, ನನಗೆ ಕೋಪವೇ ಬರುವುದಿಲ್ಲ' ಎಂದರು.ಆಗ ಸದನವು ನಗೆಗಡಲಲ್ಲಿ ತೇಲಿತು.

'ಪಿ. ಚಿದಂಬರಂ ಅವರು ಹಿರಿಯ ವಕೀಲರಾಗಿದ್ದಾರೆ. ಅವರಿಗೆ ಎಲ್ಲವೂ ತಿಳಿದಿದೆ. ಪತ್ನಿ ಮೇಲೆ ಕೋಪಗೊಳ್ಳುವ ಹಕ್ಕು ನಮಗಿಲ್ಲ ಎಂದ ಧನಕರ್, 'ನನ್ನ ಪತ್ನಿ ಸದನದ ಸದಸ್ಯರಾಗಿಲ್ಲ. ಹಾಗಾಗಿ, ಅವರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಖರ್ಗೆ ಅವರೇ ನಿಮ್ಮ ಹೇಳಿಕೆಯನ್ನು ಬದಲಾಯಿಸಿಕೊಳ್ಳಿ' ಎಂದು ಹೇಳಿದರು.

ಆಗ ಖರ್ಗೆ ಅವರು, 'ನೀವು ಕೋಪವನ್ನು ತೋರಿಸುವುದಿಲ್ಲ. ಆದರೆ, ನಿಮ್ಮೊಳಗಿನಿಂದಲೇ ಸಿಟ್ಟಾಗುತ್ತೀರಿ' ಎಂದಾಗ ಪಕ್ಷಭೇದ ಮರೆತು ಎಲ್ಲಾ ಸದಸ್ಯರು ನಗೆಗಡಲಲ್ಲಿ ಮುಳುಗಿದರು.

ಈರುಳ್ಳಿ ವಾಸನೆ: ಕೊಚ್ಚಿಗೆ ಮರಳಿದ ಏರ್ ಇಂಡಿಯಾ ವಿಮಾನ

ಕೊಚ್ಚಿ (ಕೇರಳ) (ಪಿಟಿಐ): ಶಾರ್ಜಾಕ್ಕೆ ಹೊರಟಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ಸುಟ್ಟ ವಾಸನೆ ಬಂದ ಕಾರಣ, ಹಾರಾಟ ಆರಂಭಿಸಿದ ಕೆಲವೇ ಹೊತ್ತಿನಲ್ಲಿ ವಿಮಾನವು ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮರಳಿದೆ. ವಿಮಾನದ ಸರಕು ಇಡುವ ಜಾಗದಲ್ಲಿದ್ದ ಈರುಳ್ಳಿಯಿಂದ ಇಂತಹ ವಾಸನೆ ಬಂದಿರಬಹುದು ಎಂದು ಬಳಿಕ ವಿಮಾನಯಾನ ಸಂಸ್ಥೆ ಹೇಳಿದೆ.

175 ಮಂದಿ ಪ್ರಯಾಣಿಕರಿದ್ದ ವಿಮಾನವು ಬುಧವಾರ ರಾತ್ರಿ ಶಾರ್ಜಾಕ್ಕೆ ಹೊರಟಿತ್ತು. ಹಾರಾಟ ಆರಂಭಿಸಿದ ಕೆಲ ಹೊತ್ತಿನಲ್ಲಿ ಸುಟ್ಟವಾಸನೆ ಬರುತ್ತಿರುವುದಾಗಿ ಪ್ರಯಾಣಿಕರು ದೂರಿದ್ದರು. ಮುಂಜಾಗ್ರತಾ ಕ್ರಮವಾಗಿ ವಿಮಾನ ಕೊಚ್ಚಿಗೆ ಮರಳಿದೆ ಎಂದು ತಿಳಿಸಿದೆ. 'ಪ್ರಯಾಣಿಕರಲ್ಲಿ ಗೊಂದಲವುಂಟಾಗಿತ್ತು. ಬಳಿಕ ವಿಮಾನ ಸುರಕ್ಷಿತವಾಗಿ ಕೆಳಗಿಳಿದಿದೆ' ಎಂದು ವಿಮಾನದಲ್ಲಿದ್ದ ಕಾಂಗ್ರೆಸ್ ಶಾಸಕ ಮ್ಯಾಥ್ಯು ಕುಯಲ್‌ನಾಡನ್ ಹೇಳಿದ್ದಾರೆ. ವಿಮಾನವನ್ನು ಪರಿಶೀಲಿಸಿದ ಎಂಜಿನಿಯರ್‌ಗಳು ಯಾವುದೇ ತಾಂತ್ರಿಕ ದೋಷ ಕಂಡು ಬಂದಿಲ್ಲ ಎಂದಿದ್ದಾರೆ.

ಮಧ್ಯಪ್ರಾಚ್ಯ ದೇಶಗಳಿಗೆ ತೆರಳುವ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳಲ್ಲಿ ಹಣ್ಣುಗಳು, ತರಕಾರಿ ಮತ್ತು ಹೂವುಗಳನ್ನು ಕೊಂಡೊಯ್ಯಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ರಾಜೀವ್ ಗೌಬಾ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರ ಸೇವಾವಧಿಯನ್ನು ಮತ್ತೆ ಒಂದು ವರ್ಷ ವಿಸ್ತರಿಸಲಾಗಿದ್ದು, ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರವು ಗುರುವಾರ ನಿಯಮಗಳನ್ನು ಸಡಿಲಿಸಿದೆ.

ರಾಜೀವ್ ಅವರ ಅಧಿಕಾರಾವಧಿ ಇದೇ 30ರಂದು ಮುಕ್ತಾಯವಾಗುತ್ತಿತ್ತು. ಆದರೆ, ನಿಯಮಗಳನ್ನು ಸಡಿಲಿಸಿ ಮೂರನೇ ಬಾರಿಗೆ ಸೇವಾವಧಿ ವಿಸ್ತರಿಸಲಾಗಿದೆ. ರಾಜೀವ್ ಅವರು ಈ ಮುನ್ನ ಗೃಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 2019ರಲ್ಲಿ ಸಂಪುಟ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಇಲ್ಲಿಯವರೆಗೆ, ಬಿ.ಡಿ. ಪಾಂಡೆ ಅವರು ಅತಿ ದೀರ್ಘಕಾಲದವರೆಗೆ (1972ರ ನವೆಂಬರ್ 2ರಿಂದ 1977ರ ಮಾರ್ಚ್ 31) ಸಂಪುಟ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಅಧಿಕಾರಿಯಾಗಿದ್ದರು.

1,365 ಐಎಎಸ್, 703 ಐಪಿಎಸ್ ಹುದ್ದೆ ಖಾಲಿ

ನವದೆಹಲಿ (ಪಿಟಿಐ): ದೇಶದಲ್ಲಿ ಭಾರತೀಯ ಆಡಳಿತ ಸೇವೆಯಲ್ಲಿ (ಐಎಎಸ್) 1,365 ಹಾಗೂ ಭಾರತೀಯ ಪೊಲೀಸ್ ಸೇವೆಯಲ್ಲಿ (ಐಪಿಎಸ್) 703 ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಭಾರತೀಯ ಅರಣ್ಯ ಸೇವೆಯಲ್ಲಿ (ಐಎಫ್‌ಎಸ್) 1,042 ಹಾಗೂ ಭಾರತೀಯ ಕಂದಾಯ ಸೇವೆಯಲ್ಲಿ (ಐಆರ್‌ಎಸ್) 301 ಹುದ್ದೆಗಳು ಖಾಲಿ ಉಳಿದಿವೆ. ಈ ಹುದ್ದೆಗಳ ಭರ್ತಿಗೆ ಕೇಂದ್ರ ಸರ್ಕಾರ ಕ್ರಮವಹಿಸಿದ್ದು, ನೇಮಕಾತಿ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ರಾಜ್ಯಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಹಾಗೂ ರಾಜ್ಯ ಸರ್ಕಾರಗಳ ಆಯ್ಕೆ ಸಮಿತಿ ಸಭೆಯ ಮೂಲಕ ಐಎಎಸ್ ಹಾಗೂ ಐಪಿಎಸ್ ಹುದ್ದೆಗಳಿಗೆ ಸೇವಾ ಜ್ಯೇಷ್ಠತೆ ಆಧಾರದ ಮೇಲೆ ಅಧಿಕಾರಿಗಳಿಗೆ ಬಡ್ತಿ ನೀಡಲಾಗುತ್ತದೆ ಎಂದು ವಿವರಿಸಿದ್ದಾರೆ.

216 ಅಧಿಕಾರಿಗಳ ವಿರುದ್ಧ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ 216 ಅಧಿಕಾರಿಗಳ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪದ ಮೇಲೆ ಮಹಾರಾಷ್ಟ್ರ 39, ಜಮ್ಮು ಮತ್ತು ಕಾಶ್ಮೀರ 22, ದೆಹಲಿ 21, ಉತ್ತರ ಪ್ರದೇಶ 17 ಹಾಗೂ ಕರ್ನಾಟಕದಲ್ಲಿ 14 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್, ರಾಜ್ಯಸಭೆಗೆ ತಿಳಿಸಿದ್ದಾರೆ.

ಅಲ್ಲದೇ, ಇದೇ ಅವಧಿಯಲ್ಲಿ ಅಧಿಕಾರಿಗಳ ವಿರುದ್ಧ 135 ದೂರುಗಳನ್ನು ದಾಖಲಿಸಿ ಪ್ರಾಥಮಿಕ ವಿಚಾರಣೆಯನ್ನು ಪೂರ್ಣಗೊಳಿಸಿದೆ. ಈ ಪೈಕಿ 57 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ. ಆದರೆ, ಕಳೆದ ಎರಡು ವರ್ಷಗಳಿಂದಲೂ ರಾಜ್ಯ ಸರ್ಕಾರಗಳಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ಸಿಕ್ಕಿಲ್ಲ ಎಂದು ವಿವರಿಸಿದ್ದಾರೆ.

ಮಸೀದಿಗೆ ಬೆಂಕಿ; ಇಬ್ಬರ ಮೇಲೆ ದಾಳಿ

ಗುರುಗ್ರಾಮ (ಪಿಟಿಐ): ನೂಹ್ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಶಾರ್ಟ್ ಸರ್ಕೀಟ್‌ನಿಂದ ಒಂದು ಮಸೀದಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದರೆ, ಮತ್ತೊಂದು ಮಸೀದಿಯ ಮೇಲೆ ದುಷ್ಕರ್ಮಿಗಳು ಪೆಟ್ರೋಲ್ ಬಾಂಬ್ ಎಸೆದಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಈ ಎರಡೂ ಘಟನೆಗಳು ಬುಧವಾರ ರಾತ್ರಿ 11.30ರ ಸುಮಾರಿನಲ್ಲಿ ನಡೆದಿದ್ದು, ಯಾರೊಬ್ಬರಿಗೂ ಗಾಯಗಳಾಗಿಲ್ಲ ಎಂದು ಪೊಲಿಸರು ಹೇಳಿದ್ದಾರೆ. ಒಂದು ಮಸೀದಿ ವಿಜಯ್ ಚೌಕ್ ಬಳಿ ಇದ್ದರೆ, ಇನ್ನೊಂದು ಮಸೀದಿ ಪೊಲೀಸ್ ಠಾಣೆ ಬಳಿ ಇದೆ. ಎರಡೂ ಮಸೀದಿಗಳಿಗೆ ಬೆಂಕಿಯಿಂದ ಸ್ವಲ್ಪ ಹಾನಿಯಾಗಿದೆ. ಬೆಂಕಿ ತಗುಲಿದ ಮಾಹಿತಿ ಬಂದ ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮಸೀದಿಗೆ ಪೆಟ್ರೋಲ್ ಬಾಂಬ್ ಎಸೆದ ದುಷ್ಕರ್ಮಿಗಳನ್ನು ಹಿಡಿಯಲು ಶೋಧ ಕೈಗೊಳ್ಳಲಾಗಿದೆ. ಇದಕ್ಕಾಗಿ ಸಮೀಪದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ನೂಹ್ ಎಸ್‌ಪಿ ವರುಣ್ ಸಿಂಗ್ಲಾ ಹೇಳಿದ್ದಾರೆ.

ಇಬ್ಬರು ಮುಸ್ಲಿಂರ ಮೇಲೆ ಗುಂಪು ದಾಳಿ: ಗುರುಗ್ರಾಮದಲ್ಲಿ ನಿಸಾರ್ ಅಲಿ ಮತ್ತು ಅವರ ಸಹೋದರ ರುಸ್ತಮ್ ಅಲಿ ಎಂಬುವರ ಮೇಲೆ ಸುಮಾರು 30 ಜನರ ಗುಂಪು ಬುಧವಾರ ಸಂಜೆ ದಾಳಿ ನಡೆಸಿ ಥಳಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ನಗರವನ್ನು ತೊರೆಯುವಂತೆ ಗುಂಪು ಎಚ್ಚರಿಸಿದೆ' ಎಂದು ನಿಸಾರ್ ಅಲಿ ದೂರಿನಲ್ಲಿ ಹೇಳಿದ್ದಾರೆ. ಈ ಸಂಬಂಧ ಪೊಲೀಸರು ಅಪರಿಚಿತ ಯುವಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ನೂಹ್‌ನಲ್ಲಿ ಕರ್ಫ್ಯೂ ಸಡಿಲಿಸಿದ ಬಳಿಕ ಸ್ಥಳೀಯರು ಕಾಣಿಸಿಕೊಂಡಿದ್ದು ಹೀಗೆ —ಪಿಟಿಐ ಚಿತ್ರ

ಇಂಟರ್‌ನೆಟ್ ಸೇವೆ: ನೂಹ್ ಮತ್ತು ರಾಜ್ಯದ ಕೆಲವೆಡೆ ಆಗಸ್ಟ್ 5ರವರೆಗೂ ಸ್ಥಗಿತಗೊಳಿಸಲಾಗಿದ್ದ ಇಂಟರ್‌ನೇಟ್ ಸೇವೆಯನ್ನು ಗುರುವಾರ ಮಧ್ಯಾಹ್ನ 1ರಿಂದ 4 ಗಂಟೆಯವರೆಗೆ ಪುನರಾರಂಭಿಸಲಾಗಿತ್ತು.

ಈ ವಾರಾಂತ್ಯದಲ್ಲಿ ನಡೆಯಲಿರುವ ಹರಿಯಾಣ ಸಿಇಟಿ 'ಗ್ರೂಪ್ ಸಿ ಪರೀಕ್ಷೆ'ಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅನುಕೂಲ ಕಲ್ಪಿಸಲು ಹರಿಯಾಣ ಸರ್ಕಾರ ಇಂಟರ್‌ನೆಟ್ ಸೇವೆ ಸ್ಥಗಿತ ಆದೇಶವನ್ನು ಸಡಿಲಿಸಿತ್ತು. ಜಿಲ್ಲಾಡಳಿತವು ನೂಹ್‌ನಲ್ಲಿ ಕರ್ಫ್ಯೂ ಅನ್ನು ಸಡಿಲಿಸಿದೆ.

ಕೋಮು ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಹರಿಯಾಣ ಪೊಲೀಸರು ಇಲ್ಲಿಯವರೆಗೆ 176 ಜನರನ್ನು ಬಂಧಿಸಿದ್ದಾರೆ.

ಪತ್ರಿಕೆ, ನಿಯತಕಾಲಿಕ ನೋಂದಣಿ ಸರಳ

ನವದೆಹಲಿ (ಪಿಟಿಐ): 'ಮಾಧ್ಯಮ ಮತ್ತು ಪ್ರಕಾಶನ ಸಂಸ್ಥೆಗಳ ವ್ಯವಹಾರ ಸುಲಭಗೊಳಿಸುವ, ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸುವ ಸಂಬಂಧ ಹಾಲಿ ಇರುವ ಹಳೆಯದಾದ ಕಠಿಣ ನಿಯಮಗಳನ್ನು ತೆಗೆದುಹಾಕುವ' ಪತ್ರಿಕೆಗಳು ಮತ್ತು ನಿಯತಕಾಲಿಕಗಳ ನೋಂದಣಿ ಮಸೂದೆ–2023 ಅನ್ನು ರಾಜ್ಯಸಭೆ ಗುರುವಾರ ಧ್ವನಿ ಮತದಿಂದ ಅಂಗೀಕರಿಸಿದೆ.

ಮಸೂದೆ ಕುರಿತ ಚರ್ಚೆಗೆ ಉತ್ತರಿಸಿದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ 'ಮಾಧ್ಯಮ ಮತ್ತು ಪ್ರಕಾಶನ ಸಂಸ್ಥೆಗಳ ವ್ಯವಹಾರವನ್ನು ಸುಗಮಗೊಳಿಸಲು ಈ ಮಸೂದೆ ತರಲಾಗಿದೆ. ನೌಕರಶಾಹಿಯ ಹೊರೆಯು ಕಡಿಮೆಯಾಗಲಿದೆ' ಎಂದು ಹೇಳಿದರು.

'ಭಯೋತ್ಪಾದಕ ಚಟುವಟಿಕೆ ಅಥವಾ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ಪತ್ರಿಕೆ ಅಥವಾ ನಿಯತಕಾಲಿಕವನ್ನು ಆರಂಭಿಸಲು ಅನುಮತಿ ನೀಡುವುದಿಲ್ಲ' ಎಂದು ಅವರು ತಿಳಿಸಿದರು.

ಈ ಮಸೂದೆಯು ಪ್ರೆಸ್ ಮತ್ತು ರಿಜಿಸ್ಟ್ರೇಷನ್ ಆಫ್ ಬುಕ್ಸ್ (ಪಿಆರ್‌ಬಿ) ಕಾಯ್ದೆ–1867 ಅನ್ನು ಬದಲಿಸಲಿದೆ.

ಡಿಜಿಟಲ್ ದತ್ತಾಂಶ ಸಂರಕ್ಷಣೆ ಸಾಮಾನ್ಯ ಮಸೂದೆ: ಸಚಿವ

ಪ್ರಜಾವಾಣಿ ವಾರ್ತೆ

ಅಶ್ವಿನಿ ವೈಷ್ಣವ್

ನವದೆಹಲಿ: ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆಯನ್ನು ಕೇಂದ್ರ ಸರ್ಕಾರವು ಹಣಕಾಸು ಮಸೂದೆಯಾಗಿ ವರ್ಗೀಕರಿಸಿದೆ ಎಂಬ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಅವರ ಆರೋಪವನ್ನು ನಿರಾಕರಿಸಿರುವ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, ಇದು ಸಾಮಾನ್ಯ ಮಸೂದೆ ಎಂದು ಸ್ಪಷ್ಟಪಡಿಸಿದ್ದಾರೆ.

ದತ್ತಾಂಶ ಸಂರಕ್ಷಣಾ ಮಸೂದೆಯನ್ನು ಸಾಮಾನ್ಯ ಮಸೂದೆಯಾಗಿ ಪರಿಗಣಿಸಬೇಕು. ನಂತರ ಅದು ಜಂಟಿ ಸಂಸದೀಯ ಸಮಿತಿಯಲ್ಲಿ ಚರ್ಚೆಗೂ ಒಳಗಾಗಬೇಕು ಎಂದು ತಿವಾರಿ ಆಗ್ರಹಿಸಿದರು.

ನಾಗರಿಕರ ದತ್ತಾಂಶ ಸಂಗ್ರಹಣೆ, ಸಂಸ್ಕರಣೆ ಮತ್ತು ಪ್ರಕ್ರಿಯೆಗೆ ಸಂಬಂಧಿಸಿದಂತೆ ಇಂಟರ್‌ನೆಟ್ ಕಂಪನಿಗಳು, ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ವ್ಯಾಪಾರ ಸಂಸ್ಥೆಗಳಂತಹ ಘಟಕಗಳನ್ನು ಹೆಚ್ಚು ಜವಾಬ್ದಾರರನ್ನಾಗಿಸುವ ಮತ್ತು ಉತ್ತರದಾಯಿಗಳನ್ನಾಗಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ಈ ಮಸೂದೆಯನ್ನು ಗುರುವಾರ ಲೋಕಸಭೆಯಲ್ಲಿ ಮಂಡಿಸಿದ್ದು, ಶುಕ್ರವಾರ ಚರ್ಚೆಗೆ ಬರುವ ಸಾಧ್ಯತೆ ಇದೆ.

'ಬಿಜೆಪಿ ಅವಧಿಯಲ್ಲಿ ಟಿಟಿಡಿಗೆ ನಂದಿನಿ ತುಪ್ಪ ಪೂರೈಕೆ ಸ್ಥಗಿತ'

ಬೆಂಗಳೂರು: 'ಬಿಜೆಪಿ ಸರ್ಕಾರದ ಅವಧಿಯಲ್ಲೇ ತಿರುಪತಿ ತಿರುಮಲ ದೇವಸ್ಥಾನಕ್ಕೆ (ಟಿಟಿಡಿ) ಲಡ್ಡು ತಯಾರಿಸಲು ನಂದಿನಿ ತುಪ್ಪ ಪೂರೈಸಿರಲಿಲ್ಲ. ಹಾಗಿದ್ದರೆ ಅದು ಹಿಂದೂ ವಿರೋಧಿ ಸರ್ಕಾರವೇ' ಎಂದು ಕೆಎಂಎಫ್ ಅಧ್ಯಕ್ಷ ಭೀಮ ನಾಯ್ಕ ಪ್ರಶ್ನಿಸಿದ್ದಾರೆ.

'2020-21 ಹಾಗೂ 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ವೇಳೆ ತೀವ್ರ ಸ್ಪರ್ಧೆ ಏರ್ಪಟ್ಟ ಕಾರಣ ಒಂದು ಲೀಟರ್‌ನಷ್ಟು ನಂದಿನಿ ತುಪ್ಪವನ್ನೂ ತಿರುಪತಿ ತಿರುಮಲ ದೇವಸ್ಥಾನಕ್ಕೆ ಪೂರೈಸಿರಲಿಲ್ಲ. ಈ ಎರಡು ವರ್ಷಗಳಲ್ಲಿ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿತ್ತು' ಎಂದು ಟ್ವೀಟ್ ಮಾಡಿದ್ದಾರೆ.

ತಿರುಪತಿ– ತಿರುಮಲ ದೇವಸ್ಥಾನಕ್ಕೆ (ಟಿಟಿಡಿ) ನಂದಿನಿ ತುಪ್ಪ ಸರಬರಾಜಿಗೆ ಸಂಬಂಧಿಸಿದಂತೆ ವಿವರಿಸಿರುವ ಅವರು, 'ಕಳೆದ 20 ವರ್ಷಗಳಿಂದಲೂ ಕೆಎಂಎಫ್ ವತಿಯಿಂದ ತಿರುಪತಿ ತಿರುಮಲ ದೇವಸ್ಥಾನದ ಪ್ರಸಿದ್ಧ ಲಡ್ಡು ಪ್ರಸಾದ ತಯಾರಿಕೆಗೆ ನಮ್ಮ ನಂದಿನಿ ತುಪ್ಪವನ್ನು ಸರಬರಾಜು ಮಾಡಿಕೊಂಡು ಬರಲಾಗುತ್ತಿತ್ತು. ಆದರೆ ಕಳೆದ ಕೆಲವು ವರ್ಷಗಳಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಸ್ಪರ್ಧೆ ಏರ್ಪಟ್ಟ ಕಾರಣ ನಂದಿನಿ ತುಪ್ಪದ ಉತ್ಪಾದನಾ ವೆಚ್ಚವೂ ನಮಗೆ ದೊರಕುವುದು ತುಂಬಾ ಕಷ್ಟಕರವಾಗಿದೆ' ಎಂದು ವಿವರಿಸಿದ್ದಾರೆ.

'ಹೀಗಿದ್ದರೂ 2021-22ನೇ ಸಾಲಿನ ಟೆಂಡರ್ ಪ್ರಕ್ರಿಯೆಯಲ್ಲಿ 'ಎಲ್‌-3' ಸ್ಪರ್ಧೆದಾರರಾದರೂ ದೇವಾಲಯದಿಂದ 1,000 ಮೆಟ್ರಿಕ್ ಟನ್ ತುಪ್ಪಕ್ಕೆ ಬೇಡಿಕೆ ಇತ್ತು. ಆದ್ದರಿಂದ, 345 ಮೆಟ್ರಿಕ್ ಟನ್‌ನಷ್ಟು ನಂದಿನಿ ತುಪ್ಪವನ್ನು ಪ್ರತಿ ಲೀಟರ್‌ಗೆ ₹392ಗಳಂತೆ ತಿರುಪತಿ ತಿರುಮಲ ದೇವಸ್ಥಾನಕ್ಕೆ ಸರಬರಾಜು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

'ನಂದಿನಿ ತುಪ್ಪದ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡುವುದರಿಂದ ರಾಜ್ಯದ ರೈತರಿಗೆ ನ್ಯಾಯ ದೊರೆಯುವುದೇ' ಎಂದು ಕೇಳಿದ್ದಾರೆ.

ಲೋಕಾಯುಕ್ತ ಬಲೆಗೆ ಪೌರಾಯುಕ್ತೆ

ಪ್ರಜಾವಾಣಿ ವಾರ್ತೆ

ಟಿ.ಲೀಲಾವತಿ

ಚಿತ್ರದುರ್ಗ: ಮನೆಯ ಖಾತೆ ಬದಲಾವಣೆ ಮಾಡಿಕೊಡಲು ₹ 3 ಲಕ್ಷ ಲಂಚ ಪಡೆಯುತ್ತಿದ್ದ ಜಿಲ್ಲೆಯ ಚಳ್ಳಕೆರೆ ನಗರಸಭೆಯ ಆಯುಕ್ತೆ ಟಿ.ಲೀಲಾವತಿ ಹಾಗೂ ಬಿಲ್ ಕಲೆಕ್ಟರ್ ನಿಶಾನಿ ಕಾಂತರಾಜ್ ಅವರನ್ನು ಲೋಕಾಯುಕ್ತ ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ವೈ.ನಾಗರಾಜಾಚಾರಿ ಅವರು ಖಾತೆ ಬದಲಾವಣೆಗೆ ಮೇ 26ರಂದು ನಗರಸಭೆಗೆ ಅರ್ಜಿ ಸಲ್ಲಿಸಿದ್ದರು.

'ಖಾತೆ ಬದಲಾವಣೆಗೆ ಪೌರಾಯುಕ್ತರು ₹ 5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ನಾಗರಾಜಾಚಾರಿ ದೂರು ನೀಡಿದ್ದರು. ನಿಶಾನಿ ಕಾಂತರಾಜ್ ಕಚೇರಿಯ ಹೊರಗೆ ₹ 3 ಲಕ್ಷ ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಲಾಗಿದೆ' ಎಂದು ಲೋಕಾಯುಕ್ತ ಎಸ್.ಪಿ ಎನ್. ವಾಸುದೇವರಾಮ ತಿಳಿಸಿದರು.

ಸಿಬಿಎಸ್‌ಇ–ಐಸಿಎಸ್‌ಇ ಶಾಲೆಗಳಲ್ಲಿ ಕನ್ನಡ ಕಲಿಕೆ ಕಡ್ಡಾಯ ಆದೇಶ ಪ್ರಕರಣ

ಕೇಂದ್ರ, ರಾಜ್ಯಕ್ಕೆ ಹೈಕೋರ್ಟ್‌ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಮತ್ತು ಇಂಡಿಯನ್ ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಷನ್ (ಐಸಿಎಸ್‌ಇ) ಮಾನ್ಯತೆ ಪಡೆದಿರುವ ಶಾಲೆಗಳಲ್ಲಿ ಕನ್ನಡವನ್ನು ಒಂದು ವಿಷಯವನ್ನಾಗಿ ಕಲಿಸಬೇಕು' ಎಂಬುದನ್ನು ಕಡ್ಡಾಯಗೊಳಿಸಿರುವ ಆದೇಶವನ್ನು ಆಕ್ಷೇಪಿಸಲಾದ ಪ್ರಕರಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್‌ ಆದೇಶಿಸಿದೆ.

ಈ ಸಂಬಂಧ, ಸಿಬಿಎಸ್‌ಇ ಮತ್ತು ಐಸಿಎಸ್‌ಇ ಮಾನ್ಯತೆ ಪಡೆದ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕರಾದ ಸಿ. ಸೋಮಶೇಖರ್ ಸೇರಿದಂತೆ 19 ಜನರು ಹಾಗೂ ಶಿಕ್ಷಕರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಆಕ್ಷೇಪಾರ್ಹವಾದ ಕರ್ನಾಟಕ ಭಾಷೆ ಕಲಿಕಾ ಕಾಯ್ದೆ, ನಿಯಮಗಳು ಮತ್ತು ನಿರಾಕ್ಷೇಪಣಾ ಪತ್ರದ (ಎನ್‌ಒಸಿ) ನಿಯಮಗಳಿಗೆ ಮಧ್ಯಂತರ ತಡೆ ನೀಡಬೇಕು' ಎಂಬ ಅರ್ಜಿದಾರರ ಕೋರಿಕೆಯನ್ನು ನ್ಯಾಯಪೀಠ ನಿರಾಕರಿಸಿದೆ. ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ. ಶಿಕ್ಷಣ ಇಲಾಖೆ ಕಾರ್ಯದರ್ಶಿ, ಸಿಬಿಎಸ್‌ಇ ಅಧ್ಯಕ್ಷರು, ಐಸಿಎಸ್‌ಇ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಯನ್ನು ಪ್ರಕರಣದ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಕೋರಿಕೆ: 'ಸಿಬಿಎಸ್‌ಇ ಮತ್ತು ಐಸಿಎಸ್‌ಇ ಮಾನ್ಯತೆ ಪಡೆದ ಶಾಲೆಗಳಿಗೆ ಎನ್‌ಒಸಿ ನಿಯಮ 6 (2) ಅಸಾಂವಿಧಾನಿಕವಾಗಿದ್ದು ಆಕ್ಷೇಪಾರ್ಹ ಕಾಯ್ದೆ ಮತ್ತು ನಿಯಮಗಳು ಅನ್ವಯಿಸುವುದಿಲ್ಲ ಎಂದು ಘೋಷಿಸಬೇಕು. ಸಿಬಿಎಸ್‌ಇ ಮತ್ತು ಐಸಿಎಸ್‌ಇ ಮಾನ್ಯತೆ ಪಡೆದ ಶಾಲೆಗಳಲ್ಲಿ ಆಕ್ಷೇಪಾರ್ಹ ಕಾಯ್ದೆ ಮತ್ತು ನಿಯಮಗಳನ್ನು ಜಾರಿಗೊಳಿಸದಂತೆ ಪ್ರತಿವಾದಿಗಳಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆಕ್ಷೇಪಣೆ ಏನು?

'ನಿರಾಕ್ಷೇಪಣ ಪತ್ರ ನಿಯಮಗಳ ಪ್ರಕಾರ ಕನ್ನಡವನ್ನು ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಬೋಧಿಸಬೇಕು ಎಂಬುದಾಗಿದೆ. ಆದರೆ, ಕರ್ನಾಟಕ ಭಾಷೆ ಕಲಿಕಾ ಕಾಯ್ದೆ–2015ರ ಕಲಂ 3, ಕರ್ನಾಟಕ ಭಾಷೆ ಕಲಿಕಾ ನಿಯಮಗಳು–2017ರ ನಿಯಮ 3 ಮತ್ತು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನಿರಾಕ್ಷೇಪಣಾ ಪತ್ರ ನೀಡಿಕೆ ಮತ್ತು ನಿಯಂತ್ರಣ) ನಿಯಮಗಳ 6 (2) ಹೇರುವಿಕೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ' ಎಂಬುದು ಅರ್ಜಿದಾರರ ಆಕ್ಷೇಪ.

'ಕರ್ನಾಟಕದಲ್ಲಿ ತಮ್ಮ ಇಚ್ಛೆಗೆ ಅನುಗುಣವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ಹಕ್ಕಿಗೆ ಈ ಕಾಯ್ದೆಗಳು ಅಡ್ಡಿ ಉಂಟು ಮಾಡುತ್ತವೆ. ಇದು ಮಕ್ಕಳ ಶೈಕ್ಷಣಿಕ ಬದುಕಿನ ಮೇಲೆ ಪರಿಣಾಮ ಬೀರಲಿದ್ದು, ಭವಿಷ್ಯದಲ್ಲಿ ಅವರ ಔದ್ಯೋಗಿಕ ಅವಕಾಶಗಳಿಗೆ ಅಡಚಣೆಯಾಗುತ್ತದೆ. ಕನ್ನಡ ಹೊರತುಪಡಿಸಿ ಬೇರೆ ವಿಷಯಗಳನ್ನು ಬೋಧಿಸುವ ಶಿಕ್ಷಕರ ಜೀವನಕ್ಕೂ ಇದು ಸಮಸ್ಯೆಯಾಗಲಿದೆ' ಎಂದು ದೂರಿದ್ದಾರೆ.

ಸಿಇಟಿ: 9 ಸಾವಿರ ಸೀಟು ಹಿಂಪಡೆದ ಕೆಇಎ

ಬೆಂಗಳೂರು: 9 ಸಾವಿರ ಎಂಜಿನಿಯರಿಂಗ್ ಹಾಗೂ ಆರ್ಕಿಟೆಕ್ಚರ್ ಸೀಟುಗಳನ್ನು ಸಿಇಟಿ ಅಂತಿಮ ಹಂಚಿಕೆ ಪಟ್ಟಿಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕೈಬಿಟ್ಟಿದೆ.

ಹಲವು ಎಂಜಿನಿಯರಿಂಗ್ ಕಾಲೇಜುಗಳು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದಿಲ್ಲ. ಸರ್ಕಾರದಿಂದ ಅನುಮೋದನೆ ಪಡೆದಿಲ್ಲ. ಹಾಗಾಗಿ, ರಾಜ್ಯದ 90ಕ್ಕೂ ಹೆಚ್ಚು ಕಾಲೇಜುಗಳ ಸೀಟುಗಳನ್ನು ಹಂಚಿಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. ನಿಯಮದ ಪ್ರಕಾರ ದಾಖಲೆಗಳನ್ನು ಒದಗಿಸಿದ ನಂತರ ಮರು ಸೇರ್ಪಡೆ ಮಾಡಲಾಗುವುದು ಎಂದು ಕೆಇಎ ತಿಳಿಸಿದೆ.

ಆರ್.ವಿ ಎಂಜಿನಿಯರಿಂಗ್ ಕಾಲೇಜು, ಎಂ.ಎಸ್. ರಾಮಯ್ಯ, ದಯಾನಂದ ಸಾಗರ್, ಬಿಎಂಎಸ್ ಸೇರಿದಂತೆ ಹಲವು ಕಾಲೇಜುಗಳು ಸೀಟು ಕೈಬಿಡಲಾದ ಪಟ್ಟಿಯಲ್ಲಿವೆ.

'ಮೊದಲು ಪ್ರಕಟಿಸಿದ ಸೀಟುಗಳಿಗೂ, ಅಂತಿಮ ಪಟ್ಟಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ಭಿನ್ನಾಭಿಪ್ರಾಯ ಬಗೆಹರಿಯುವವರೆಗೆ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಬಾರದು' ಎಂದು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘವು (ಕುಪೆಕಾ) ಪ್ರಾಧಿಕಾರಕ್ಕೆ ಪತ್ರ ಬರೆದು ಒತ್ತಾಯಿಸಿದೆ.

ಅಕ್ರಮ ಮರಳು ಗಣಿಗಾರಿಕೆ ಆರೋಪ • ವರದಿ ಸಲ್ಲಿಸಲು 2 ತಿಂಗಳ ಗಡುವು ನೀಡಿದ ಎನ್‌ಜಿಟಿ ಪೀಠ

ಬ್ರಿಜ್ ಭೂಷಣ್ ವಿರುದ್ಧ ತನಿಖೆಗೆ ಸಮಿತಿ ರಚನೆ



ಬ್ರಿಜ್ ಭೂಷಣ್ ಸಿಂಗ್

ನವದೆಹಲಿ / ಗೊಂಡಾ (ಪಿಟಿಐ): ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ಅವರು ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಸಲ್ಲಿಸಿರುವ ಅರ್ಜಿಗಳ ಕುರಿತು ಪರಿಶೀಲನೆ ನಡೆಸಿ ಸೂಕ್ತ ಕ್ರಮಕೈಗೊಳ್ಳಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಬುಧವಾರ ಜಂಟಿ ಸಮಿತಿಯೊಂದನ್ನು ರಚಿಸಿದೆ.

ಅರ್ಜಿಗಳಲ್ಲಿನ ಆರೋಪಗಳ ಕುರಿತ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಮಿತಿ ರಚಿಸುವ ತೀರ್ಮಾನವನ್ನು ನ್ಯಾಯಮಂಡಳಿ ಸದಸ್ಯ ನ್ಯಾಯಮೂರ್ತಿ ಅರುಣ್ ಕುಮಾರ್ ತ್ಯಾಗಿ ಮತ್ತು ತಜ್ಞ ಸದಸ್ಯ ಎ. ಸೆಂಥಿಲ್ ವೇಲ್ ಅವರಿದ್ದ ಪೀಠವು ತೆಗೆದುಕೊಂಡಿದೆ.

ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಆರೋಪಗಳು ಮೇಲ್ನೋಟಕ್ಕೆ ಪರಿಸರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದೂ ಅಭಿಪ್ರಾಯಪಟ್ಟ ಪೀಠವು, ನ್ಯಾಯಮಂಡಳಿಯು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಧಿಕಾರಿಯನ್ನು ಒಳಗೊಂಡ ಜಂಟಿ ಸಮಿತಿಯನ್ನು ರಚಿಸಿತು.

ವಾಸ್ತವಾಂಶ ಏನು ಮತ್ತು ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ವರದಿಯನ್ನು ಜಂಟಿ ಸಮಿತಿಯು ಎರಡು ತಿಂಗಳೊಳಗೆ ಸಲ್ಲಿಸಬೇಕು ಎಂದು ಪೀಠವು ಗಡುವು ನೀಡಿ, ಮುಂದಿನ ವಿಚಾರಣೆಯನ್ನು ನವೆಂಬರ್ 7ಕ್ಕೆ ನಿಗದಿಪಡಿಸಿತು.

'ಕೈಸರ್‌ಗಂಜ್ ಕ್ಷೇತ್ರದ ಸಂಸದರಾದ ಸಿಂಗ್ ಅವರು ಗೊಂಡಾ ಜಿಲ್ಲೆಯ ತರಬ್‌ಗಂಜ್ ತಾಲ್ಲೂಕಿನ ಮಹರತ್, ಜೇತ್‌ಪುರ ಮತ್ತು ನವಾಬ್‌ಗಂಜ್ ಗ್ರಾಮಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸುತ್ತಿದ್ದಾರೆ. ಮರಳನ್ನು 700ಕ್ಕೂ ಹೆಚ್ಚು ಟ್ರಕ್‌ಗಳ ಮೂಲಕ ಅಕ್ರಮವಾಗಿ ಸಾಗಿಸಲಾಗುತ್ತಿದೆ. ಸುಮಾರು 20 ಲಕ್ಷ ಕ್ಯೂಬಿಕ್ ಮೀಟರ್ ಅಳತೆಯ ಮರಳು ಸಂಗ್ರಹಿಸಿ ಅಕ್ರಮವಾಗಿ ಮಾರಾಟ ಮಾಡಲಾಗಿದೆ. ಅತಿಯಾಗಿ ಮರಳು ಹೇರಿಕೊಂಡ ಟ್ರಕ್‌ಗಳ ಸಂಚಾರದಿಂದ ಪಟ್‌ಪಟ್‌ಗಂಜ್ ಸೇತುವೆ ಮತ್ತು ರಸ್ತೆಗೆ ಹಾನಿಯಾಗಿದೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

'ಅಕ್ರಮ ಮರಳು ಗಣಿಗಾರಿಕೆಯೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ. ಅತಿಯಾಗಿ ಮರಳು ತುಂಬಿದ ಟ್ರಕ್‌ಗಳು ಸಂಚರಿಸುತ್ತಿವೆ ಎಂಬ ವರದಿಗಳು ಸುಳ್ಳು' ಎಂದು ಸಂಸದ ಬ್ರಿಜ್ ಭೂಷಣ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ಭಾರತೀಯ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಅವರ ಮೇಲೆ ಮಹಿಳಾ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯದ ಆರೋಪವನ್ನು ಇತ್ತೀಚೆಗೆ ಹೊರಿಸಿದ್ದರು. ಬ್ರಿಜ್‌ಭೂಷಣ್ ವಿರುದ್ಧ ಕುಸ್ತಿಪಟುಗಳು ನಡೆಸಿದ್ದ ಪ್ರತಿಭಟನೆ ದೇಶದಾದ್ಯಂತ ಸುದ್ದಿಯಾಗಿತ್ತು.

ಶುಕ್ರವಾರ, ಆಗಸ್ಟ್ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 215 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಹೆಣ್ಣಿನ ತಣ್ಣಗಿನ ಸಮಸ್ಯೆಗೆ ಕನ್ನಡಿ’– ನಟ ರಾಗಿಣಿ ಸಂದರ್ಶನ

ಆಳ-ಅಗಲ
370ನೇ ವಿಧಿ: ಜಮ್ಮು-ಕಾಶ್ಮೀರ ಪ್ರತ್ಯೇಕ ಸಂವಿಧಾನ

₹ 812 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳ ಮಾರಾಟ 9

ಸೇವಾ ವಲಯ: 13 ವರ್ಷಗಳ ಗರಿಷ್ಠ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,241	19,381	₹61,080 (ಬೆಂಗಳೂರು)	₹74,500 (ಬೆಂಗಳೂರು)	82,74

ಕೇರಳ: ರಾಜ್ಯದ ನಾಲ್ವರು ಪೊಲೀಸರು ವಶಕ್ಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಂಚನೆ ಪ್ರಕರಣದ ಆರೋಪಿಗಳಿಂದ ಲಂಚ ಪಡೆದ ಆರೋಪದ ಮೇಲೆ ಕರ್ನಾಟಕದ ಒಬ್ಬ ಇನ್‌ಸ್ಪೆಕ್ಟರ್ ಹಾಗೂ ಮೂವರು ಪೊಲೀಸರನ್ನು ಕೇರಳ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಕರ್ನಾಟಕದಲ್ಲಿ ನಡೆದಿದ್ದ ಆನ್‌ಲೈನ್ ಕ್ರಿಪ್ಟೊಕರೆನ್ಸಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವ ಸಲುವಾಗಿ ಪೊಲೀಸರು ಆಗಸ್ಟ್ 1ರಂದು ಕೇರಳದ ಕೊಚ್ಚಿಗೆ ಬಂದಿದ್ದರು.

₹25 ಲಕ್ಷ ಲಂಚ ನೀಡಿದರೆ ಪ್ರಕರಣ ಇತ್ಯರ್ಥಗೊಳಿಸುವುದಾಗಿ ಅವರು ಆರೋಪಿಗಳಿಗೆ ಆಮಿಷ ಒಡ್ಡಿದ್ದರು. ಅಲ್ಲದೇ, ಅವರಿಂದ ₹3.95 ಲಕ್ಷ ಪಡೆದಿದ್ದರು ಎನ್ನಲಾಗಿದೆ.

9ನೇ ಪುಟ ನೋಡಿ

ಅನಿಶ್ಚಿತ ಮುಂಗಾರಿಗೆ ದಿಕ್ಕೆಟ್ಟ ಕಪ್ಪೆ, ಹಾವುಗಳ ಜೀವನ ಚಕ್ರ

• ಪವನ್ ಕುಮಾರ್ ಎಚ್.

ಮಲಬಾರ್ ಗುಳಿ ಮಂಡಲ ಹಾವು

ಮಲಬಾರ್ ಗ್ಲೈಡಿಂಗ್ ಕಪ್ಪೆ

ಆಗುಂಬೆ: ಜೂನ್ ಆರಂಭದೊಂದಿಗೆ ಭಾರತದಲ್ಲಿ ಮುಂಗಾರು ಕೂಡ ಆರಂಭವಾಗುವುದು ವಾಡಿಕೆ. ಆದರೆ, ಈ ಬಾರಿ ವಿಳಂಬವಾಗಿ ಬಂದ ಮುಂಗಾರು ಕೃಷಿರಂಗದ ಮೇಲೆ ಮಾತ್ರವಲ್ಲದೇ, ಪಶ್ಚಿಮ ಘಟ್ಟದಲ್ಲಿ ನೆಲೆಯಾಗಿರುವ ಜೀವಿಗಳ ಜೀವನ ಚಕ್ರದ ಮೇಲೂ ಗಂಭೀರ ಪರಿಣಾಮವನ್ನು ಬೀರಿದೆ!

ಕರ್ನಾಟಕದ ಪಶ್ಚಿಮ ಘಟ್ಟಕ್ಕೆ ಜೂನ್ ತಿಂಗಳ ಮೊದಲ ಹದಿನೈದು ದಿನಗಳಲ್ಲಿಯೇ ಮುಂಗಾರು ಪ್ರವೇಶವಾಗುವುದು ವಾಡಿಕೆ. ಅದರೊಂದಿಗೆ ನದಿ, ತೊರೆ, ಹಳ್ಳಗಳು ತುಂಬಿ ಹರಿಯುತ್ತವೆ. ಕಪ್ಪೆಗಳ ಸಂತಾನೋತ್ಪತ್ತಿಗೆ ಇಂಥ ಪರಿಸರ ಪ್ರಶಸ್ತ. ಆದರೆ, ಈ ಋತುವಿನಲ್ಲಿ ಮಳೆಯಿಲ್ಲದೇ, ನೀರಿಲ್ಲದೇ ಕಪ್ಪೆಗಳ ಸಂತಾನೋತ್ಪತ್ತಿಗೆ ತೀವ್ರ ತೊಡಕುಂಟಾಗಿದೆ ಎಂದು ಪರಿಸರ ತಜ್ಞರು ಹೇಳುತ್ತಾರೆ. ಜೂನ್ ಕೊನೆ ವಾರದಲ್ಲಿ ಪಶ್ಚಿಮ ಘಟ್ಟಪ್ರದೇಶಗಳಲ್ಲಿ ಭಾರಿ ಮಳೆಯಾಯಿತು. ಆಗ ಕಪ್ಪೆಗಳು ಇಟ್ಟ ಮೊಟ್ಟೆಗಳು ಜುಲೈ ಮೊದಲ ವಾರದ ಅತ್ಯಲ್ಪ ಮಳೆಯಿಂದಾಗಿ ನಾಶವಾಗಿವೆ ಎಂದೂ ಅವರು ವಿವರಿಸುತ್ತಾರೆ.

ವೈವಿಧ್ಯಮಯ ಕಪ್ಪೆ, ಹಾವುಗಳಿಗೆ ಪಶ್ಚಿಮ ಘಟ್ಟ ನೆಲೆವೀಡು. ಗಮನಿಸಬೇಕಾದ ಅಂಶವೆಂದರೆ ಈ ವರ್ಷ ಹಲವು ಬಗೆಯ ಕಪ್ಪೆಗಳು ಮತ್ತು ಹಾವುಗಳು ಈ ವರೆಗೆ ಅವುಗಳ ಆವಾಸ ಸ್ಥಾನದಲ್ಲಿಯೇ ಕಾಣಿಸಿಲ್ಲ. ತಮ್ಮ ಚಟುವಟಿಕೆಗಳ ಕುರುಹು ತೋರಿಸಿಲ್ಲ.

ಕರ್ನಾಟಕದಲ್ಲಿ ಕಪ್ಪೆಗಳ ಸಂತಾನೋತ್ಪತ್ತಿಗೆ ಪ್ರಶಸ್ತವಾಗಿರುವ ಹಲವು ಸ್ಥಳಗಳಲ್ಲಿ ಸಂತಾನೋತ್ಪತ್ತಿ ಚಟುವಟಿಕೆ ಕುಸಿತಗೊಂಡಿದೆ ಎಂದು ಕಪ್ಪೆಗಳ ಕುರಿತು ಅಧ್ಯಯನ ನಡೆಸಿರುವ ಗುರುರಾಜ ಕೆ. ವಿ. ಹೇಳುತ್ತಾರೆ. ನೈಸರ್ಗಿಕ ಆವಾಸಸ್ಥಾನಗಳಲ್ಲಿಯೇ ಕಪ್ಪೆಗಳ ಮಿಲನ ಕರೆ ಕೇಳಿಸುತ್ತಿಲ್ಲ ಎಂದೂ ಅವರು ವಿವರಿಸುತ್ತಾರೆ.

ಕಪ್ಪೆಗಳ ಜೀವನ ಚಕ್ರದಲ್ಲಿ ಮುಂಗಾರು ಋತು ಪ್ರಮುಖ ಪಾತ್ರ ವಹಿಸುತ್ತದೆ. ಮಿಲನ ಕ್ರಿಯೆಗೆ ಮತ್ತು ಮೊಟ್ಟೆ ಇಡುವ ಕ್ರಿಯೆಗೆ ಮುಂಗಾರಿನ ಋತು ಸಕಾಲ. ಪಶ್ಚಿಮ ಘಟ್ಟದ ಮಲಬಾರ್ ಕುಂಬಾರ, ಜೋಗ್ ನೈಟ್, ಮಲಬಾರ್ ಮರಗಪ್ಪೆ, ಬುಲ್, ಕ್ಯಾಸಲ್‌ರಾಕ್ ಇರುಳುಗಪ್ಪೆ ಪ್ರಭೇದಗಳು ಮತ್ತು ಇತರ ಪ್ರಭೇದಗಳ ಕಪ್ಪೆಗಳ ಮೊಟ್ಟೆಗಳು ತೊರೆಗಳಲ್ಲಿ ನೀರಿದ್ದರೆ ಮಾತ್ರ ಉಳಿದುಕೊಳ್ಳಲು ಸಾಧ್ಯ.

‘ಕಳೆದ ವರ್ಷಕ್ಕೆ ಹೋಲಿಸಿದರೆ ನಮ್ಮ ಸಂಶೋಧನಾ ಕ್ಷೇತ್ರದಲ್ಲಿ ಮಲಬಾರ್ ಪಿಟ್ ವೈಪರ್ ಹಾವುಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಂಡಿವೆ. ಆಗುಂಬೆಯಲ್ಲಿ ಈ ಬಾರಿಯ ಮುಂಗಾರು ಹಿಂದಿನದಕ್ಕಿಂತಲೂ ಭಿನ್ನವಾಗಿದೆ. ಈ ಬಾರಿ ಪೂರ್ವ ಮುಂಗಾರಿನಲ್ಲಿ ಮಳೆ ಆಗಿರಲಿಲ್ಲ. ಕಪ್ಪೆ, ಹಾವುಗಳ ಸಂತಾನೋತ್ಪತ್ತಿಗೆ ಪೂರ್ವ ಮುಂಗಾರೂ ಕೂಡ ಮುಖ್ಯ. ಇದರ ಜತೆಗೆ ವಿಳಂಬವಾಗಿ ಬಂದ ಮುಂಗಾರು ಅವುಗಳ ಸಂತಾನೋತ್ಪತ್ತಿ ಚಕ್ರದಲ್ಲಿ ಗೊಂದಲ ಉಂಟು ಮಾಡಿದೆ’ ಎಂದು ಆಗುಂಬೆಯ ಕಾಳಿಂಗ ಮಳೆಕಾಡು ಪರಿಸರ ವಿಜ್ಞಾನ ಕೇಂದ್ರದ ಸಂಶೋಧಕಿ ಪ್ರಿಯಾಂಕಾ ಸ್ವಾಮಿ ಹೇಳುತ್ತಾರೆ. ಮಳೆಗಾಲದಲ್ಲಿ ಸಕ್ರಿಯವಾಗಿರುವ ಮಲಬಾರ್ ಗುಳಿ ಮಂಡಲಗಳ ಟೆಲಿಮೆಟ್ರಿಕ್ ಅಧ್ಯಯನದಲ್ಲಿ ಪ್ರಿಯಾಂಕಾ ಸ್ವಾಮಿ ಅವರ ತಂಡ ತೊಡಗಿಸಿಕೊಂಡಿದೆ.

3ನೇ ಪುಟ ನೋಡಿ

4ಗಂಟೆ ಚರ್ಚೆ • ‘ಇಂಡಿಯಾ’ ಸದಸ್ಯರ ಸಭಾತ್ಯಾಗ • ಎಎಪಿ ಸರ್ಕಾರದ ವಿರುದ್ಧ ಹರಿಹಾಯ್ದ ಶಾ

ದೆಹಲಿ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ದೆಹಲಿಯ ಆಡಳಿತ ಸೇವೆಗಳಿಗೆ ಸಂಬಂಧಿಸಿದ ಅಧಿಕಾರವನ್ನು ತನ್ನಲ್ಲಿಯೇ ಉಳಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರ ಮಂಡಿಸಿದ ‘ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರದ (ತಿದ್ದುಪಡಿ) ಮಸೂದೆ’ಗೆ ಲೋಕಸಭೆಯಲ್ಲಿ ಗುರುವಾರ, ‘ಇಂಡಿಯಾ’ ಮೈತ್ರಿಕೂಟದ ಸದಸ್ಯರ ಸಭಾತ್ಯಾಗದ ನಡುವೆಯೇ ಅಂಗೀಕಾರದ ಮುದ್ರೆ ಬಿದ್ದಿದೆ.

ಸಂಸತ್‌ನ ಕೆಳಮನೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮಂಡಿಸಿರುವ ಈ ಮಸೂದೆಗೆ ಬಿಜು ಜನತಾದಳ, ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಹಾಗೂ ಟಿಡಿಪಿ ಬೆಂಬಲ ನೀಡಿದವು. ಸೋಮವಾರ ಈ ಮಸೂದೆಯು ರಾಜ್ಯಸಭೆಯಲ್ಲಿ ಮಂಡನೆಯಾಗಲಿದ್ದು, ಅಲ್ಲಿಯೂ ನಿರಾಯಾಸವಾಗಿ ಅಂಗೀಕಾರವಾಗುವ ನಿರೀಕ್ಷೆ ಇದೆ. ಮಸೂದೆ ಅನ್ವಯ ದೆಹಲಿ ಸರ್ಕಾರದ ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆಯ ಮೇಲೆ ಕೇಂದ್ರವು ಸಂಪೂರ್ಣ ಹಿಡಿತ ಹೊಂದಲಿದೆ.

ಮಸೂದೆಗೆ ಸಂಬಂಧಿಸಿದಂತೆ ನಾಲ್ಕು ಗಂಟೆಗಳ ಕಾಲ ಚರ್ಚೆ ನಡೆಯಿತು. ‘ಇಂಡಿಯಾ’ ಸದಸ್ಯರ ಟೀಕೆಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಕ್ರಿಯಿಸಿದರು. ಬಳಿಕ ಧ್ವನಿ ಮತದ ಮೂಲಕ ಒಪ್ಪಿಗೆ ನೀಡಲಾಯಿತು. ಬಳಿಕ ಸದನವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಅಮಿತ್ ಶಾ ಅವರು, ಸಂವಿಧಾನಕ್ಕೆ ಅಡಿಪಾಯ ಹಾಕಲು ಶ್ರಮಿಸಿದ ದೇಶದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ, ಡಾ.ಬಿ.ಆರ್. ಅಂಬೇಡ್ಕರ್, ಕಾಂಗ್ರೆಸ್ ನಾಯಕರಾದ ಸಿ. ರಾಜಗೋಪಾಲಾಚಾರಿ, ಸರ್ದಾರ್ ಪಟೇಲ್ ಅವರ ಸೇವೆಯನ್ನು ಚರ್ಚೆಯ ವೇಳೆ ಸ್ಮರಿಸಿದರು.

ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ‘ನೆಹರೂ ಹಾಗೂ ಕಾಂಗ್ರೆಸ್ ಪಕ್ಷವನ್ನು ಅಮಿತ್ ಶಾ ಅವರು ಹೊಗಳುತ್ತಿದ್ದಾರೆ. ನನಗೆ ಇದನ್ನು ನಂಬಲಾಗುತ್ತಿಲ್ಲ’ ಎಂದರು.

ಸಂವಿಧಾನದ ಆಶಯ ಪಾಲನೆ: ಅಮಿತ್ ಶಾ ಅವರು, ದೇಶದ ರಾಜಧಾನಿಯಲ್ಲಿ ಅಧಿಕಾರಶಾಹಿಯು ಯಾರ ನಿಯಂತ್ರಣದಲ್ಲಿ ಇರಬೇಕು ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟವಾಗಿ ಹೇಳಿದೆ. ಅದರ ಅನ್ವಯವೇ ಸರ್ಕಾರ ಮಸೂದೆ ಮಂಡಿಸಿದೆ ಎಂದು ಬಲವಾಗಿ ಸಮರ್ಥಿಸಿಕೊಂಡರು.

ಕೇಂದ್ರಾಡಳಿತ ಪ್ರದೇಶವಾದ ದೆಹಲಿಗೆ ಸಂಬಂಧಿಸಿದ ಯಾವುದೇ ವಿಷಯಗಳ ಮೇಲೆ ಕಾನೂನು ರಚಿಸಲು ಸಂಸತ್‌ಗೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸಂವಿಧಾನದಲ್ಲಿಯೂ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಶಾ ಹೇಳಿದರು.

ಒಮ್ಮೆ ಮಸೂದೆ ಅಂಗೀಕಾರವಾದರೆ ‘ಇಂಡಿಯಾ’ದ ಒಗ್ಗಟ್ಟು ಕೂಡ ಕುಸಿದು ಬೀಳಲಿದೆ ಎಂದು ಭವಿಷ್ಯ ನುಡಿದ ಅವರು, ‘ಕೇಜ್ರಿವಾಲ್ ಸರ್ಕಾರ ಸಾಂವಿಧಾನಿಕ ನಿಯಮಾವಳಿ ಅನ್ವಯ ಕಾರ್ಯ ನಿರ್ವಹಿಸುತ್ತಿಲ್ಲ. ವಿಧಾನಸಭಾ ಅಧಿವೇಶನವನ್ನೂ ಸರಿಯಾಗಿ ನಡೆಸುತ್ತಿಲ್ಲ. ಸಚಿವ ಸಂಪುಟ ಸಭೆಗಳು ಕೂಡ ನಿಯಮಿತವಾಗಿ ನಡೆಯುತ್ತಿಲ್ಲ ಎಂದು ಟೀಕಿಸಿದರು.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಹೊರಡಿಸಿದ್ದ ಸುಗ್ರೀವಾಜ್ಞೆ ವಿರುದ್ಧ ಸಂಸತ್‌ನ ಹೊರಗೆ ಹಾಗೂ ಒಳಗೆ ಎಎಪಿ ಸರ್ಕಾರವು ಹೋರಾಟ ನಡೆಸಿತ್ತು. ಇದಕ್ಕೆ ‘ಇಂಡಿಯಾ’ ಸದಸ್ಯರು ಕೈಜೋಡಿಸಿದ್ದರು.

ಸಾರ್ವಜನಿಕ ಭದ್ರತೆ, ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಸೇವೆಗಳ ವಿಚಾರದಲ್ಲಿ ದೆಹಲಿ ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ಹೊಂದಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದರ ವಿರುದ್ಧ ಕೇಂದ್ರವು ಸುಗ್ರೀವಾಜ್ಞೆ ಹೊರಡಿಸಿತ್ತು. ಈಗ ಇದಕ್ಕೆ ಕಾಯ್ದೆಯ ರೂಪ ನೀಡಲು ಮುಂದಾಗಿದ್ದು, ಮಸೂದೆಗೆ ಕೆಳಮನೆಯು ಒಪ್ಪಿಗೆ ನೀಡಿದೆ.

ಎಎಪಿ ಸಂಸದ ಅಮಾನತು: ಚರ್ಚೆ ವೇಳೆ ಎಎಪಿ ಸಂಸದ ಸುಶೀಲ್ ಕುಮಾರ್ ರಿಂಕು ಅವರು, ಸ್ಪೀಕರ್ ಕುರ್ಚಿಯತ್ತ ಮಸೂದೆಯ ಪ್ರತಿಯನ್ನು ಎಸೆದರು. ಅಶಿಸ್ತಿನ ವರ್ತನೆ ತೋರಿದ ಆರೋಪದ ಮೇಲೆ ಮುಂಗಾರು ಅಧಿವೇಶನದ ಮುಂದಿನ ಅವಧಿವರೆಗೆ ರಿಂಕು ಅವರನ್ನು ಅಮಾನತುಗೊಳಿಸಿ ಸ್ಪೀಕರ್ ಓಂ ಬಿರ್ಲಾ ಆದೇಶ ಹೊರಡಿಸಿದ್ದಾರೆ.

ರಾಜ್ಯಸಭೆಯಲ್ಲಿಯೂ ಅಶಿಸ್ತಿನ ವರ್ತನೆ ತೋರಿದ ಆರೋಪದ ಮೇಲೆ ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಈಗಾಗಲೇ ಅಮಾನತುಗೊಳಿಸಲಾಗಿದೆ.

‘ದೆಹಲಿ ಜನರ ಬೆನ್ನಿಗೆ ಇರಿದ ಕೇಂದ್ರ’

‘ಮಸೂದೆಗೆ ಅಂಗೀಕಾರ ಪಡೆಯುವ ಮೂಲಕ ಕೇಂದ್ರ ಸರ್ಕಾರವು, ದೆಹಲಿ ನಾಗರಿಕರ ಬೆನ್ನಿಗೆ ಇರಿದಿದೆ. ಮೋದಿ ಮತ್ತು ಬಿಜೆಪಿ ಹೇಳುವ ಮಾತುಗಳನ್ನು ಜನರು ನಂಬಬಾರದು’ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

‘ಮಸೂದೆಯು ಜನರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದು, ಅವರನ್ನು ಗುಲಾಮಗಿರಿ ವ್ಯವಸ್ಥೆಗೆ ದೂಡುತ್ತಿದೆ. ಮಸೂದೆಗೆ ಸಂಬಂಧಿಸಿದಂತೆ ಸರ್ಕಾರ ಸಮರ್ಥನೀಯವಾದ ಒಂದೂ ವಾದ ಮಂಡಿಸಿಲ್ಲ. ಈಗಾಗಲೇ, ಜನರು ಅಸಹಾಯಕರಾಗಿದ್ದಾರೆ. ಮತ್ತೆ ಅವರನ್ನು ಅದೇ ಕೂಪಕ್ಕೆ ದೂಡುತ್ತದೆ’ ಎಂದು ಟ್ವೀಟ್‌ನಲ್ಲಿ ದೂರಿದ್ದಾರೆ.

ಸಾಂವಿಧಾನಿಕ ಮೌಲ್ಯ ಹೊಂದಿರುವ ಈ ಮಸೂದೆಯಿಂದ ದೆಹಲಿ ನಾಗರಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ವಿಪಕ್ಷಗಳು ಇದಕ್ಕೆ ಸಹಕಾರ ನೀಡಬೇಕು

ಅಮಿತ್ ಶಾ
ಕೇಂದ್ರ ಗೃಹ ಸಚಿವ

ಸೌಜನ್ಯದ ಭೇಟಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂಬಾರಿ ಹೊತ್ತ ಆನೆಯ ಸ್ಮರಣಿಕೆ ನೀಡಿ ಗೌರವಿಸಿದರು –ಪಿಟಿಐ ಚಿತ್ರ

ಲ್ಯಾಪ್‌ಟಾಪ್, ಕಂಪ್ಯೂಟರ್ ಆಮದಿಗೆ ಕೇಂದ್ರ ನಿರ್ಬಂಧ

ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಕೆಲವು ಬಗೆಯ ಕಂಪ್ಯೂಟರ್‌ಗಳ ಆಮದಿನ ಮೇಲೆ ಕೇಂದ್ರ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಬಂಧ ವಿಧಿಸಿದೆ. ನಿರ್ಬಂಧ ಜಾರಿಗೊಳಿಸಿರುವುದಕ್ಕೆ ಭದ್ರತೆಯ ಕಾರಣ ಕೂಡ ಇದೆ ಎಂದು ಕೇಂದ್ರ ಹೇಳಿದೆ.



ಇವುಗಳ ದೇಶಿ ಉತ್ಪಾದನೆಯನ್ನು ಉತ್ತೇಜಿಸುವುದು ನಿರ್ಬಂಧ ವಿಧಿಸಿರುವುದಕ್ಕೆ ಇನ್ನೊಂದು ಕಾರಣ ಎಂದು ಕೇಂದ್ರವು ತಿಳಿಸಿದೆ.

ನಿರ್ಬಂಧಗಳ ಪರಿಣಾಮವಾಗಿ ಲ್ಯಾಪ್‌ಟಾಪ್, ಟ್ಯಾಬ್ ಮತ್ತು ಕೆಲವು ಬಗೆಯ ಕಂಪ್ಯೂಟರ್‌ಗಳು ಚೀನಾ ಹಾಗೂ ಕೊರಿಯಾದಂತಹ ದೇಶಗಳಿಂದ ಆಮದಾಗುವುದು ತಗ್ಗಲಿದೆ.

ಈ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವವರು ಇನ್ನು ಮುಂದೆ ಸರ್ಕಾರದ ಅನುಮತಿ ಅಥವಾ ಪರವಾನಗಿ ಪಡೆಯಬೇಕಾಗುತ್ತದೆ. ಆಮದಿಗೆ ನಿರ್ಬಂಧಗಳನ್ನು ವಿಧಿಸಿರುವುದರ ಹಿಂದೆ ಹಲವು ಕಾರಣಗಳಿದ್ದರೂ, ‘ನಮ್ಮ ಪ್ರಜೆಗಳ ಭದ್ರತೆಯನ್ನು ಖಾತರಿಪಡಿಸುವುದು ಪ್ರಮುಖ ಕಾರಣ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕೆಲವು ಹಾರ್ಡ್‌ವೇರ್‌ಗಳಲ್ಲಿ ಭದ್ರತೆಗೆ ಸಂಬಂಧಿಸಿದ ಲೋಪಗಳು ಇರಬಹುದು. ಅವು ಸೂಕ್ಷ್ಮ ಮಾಹಿತಿಯನ್ನು, ವೈಯಕ್ತಿಕ ಮಾಹಿತಿಯನ್ನು ಸೋರಿಕೆ ಮಾಡಬಹುದು’ ಎಂದು ಅಧಿಕಾರಿ ಹೇಳಿದ್ದಾರೆ.

8ನೇ ಪುಟ ನೋಡಿ

ಒಳ ಪುಟ
2031ಕ್ಕೆ ಭಾರತದ ಜಿಡಿಪಿ ದುಪ್ಪಟ್ಟು 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜ್ಞಾನವಾಪಿ: ಸಮೀಕ್ಷೆಗೆ ಅನುಮತಿ

ಆದೇಶಕ್ಕೆ ತಡೆ ಕೋರಿ ಸಲ್ಲಿಸಿದ್ದ ಮನವಿ ತಿರಸ್ಕರಿಸಿದ ಅಲಹಾಬಾದ್ ಹೈಕೋರ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ವಾರಾಣಸಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ (ಎಎಸ್‌ಐ) ಜ್ಞಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸಲು ವಾರಾಣಸಿ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ತಡೆ ನೀಡುವಂತೆ ಕೋರಿ ಮುಸ್ಲಿಂ ಅರ್ಜಿದಾರರು ಸಲ್ಲಿಸಿದ್ದ ಮನವಿಯನ್ನು ಅಲಹಾಬಾದ್ ಹೈಕೋರ್ಟ್ ಗುರುವಾರ ತಿರಸ್ಕರಿಸಿದ್ದು, ಸಮೀಕ್ಷೆ ನಡೆಸಲು ಅನುಮತಿ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರೀತಿಂಕರ್ ದಿವಾಕರ್ ಅವರಿದ್ದ ನ್ಯಾಯಪೀಠ, ‘ಜಿಲ್ಲಾ ನ್ಯಾಯಾಲಯದ ಆದೇಶ ನ್ಯಾಯಬದ್ಧ ಹಾಗೂ ಸಮರ್ಪಕವಾಗಿದ್ದು, ಈ ವಿಷಯದಲ್ಲಿ ಹೈಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯ ಇಲ್ಲ’ ಎಂಬ ಮಹತ್ವದ ತೀರ್ಪು ನೀಡಿದೆ.

ಅಲಹಾಬಾದ್ ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ವೈಜ್ಞಾನಿಕ ಸಮೀಕ್ಷೆಯನ್ನು ಶುಕ್ರವಾರವೇ ಆರಂಭಿಸುವ ಸಾಧ್ಯತೆ ಇದೆ. ಸಮೀಕ್ಷೆ ಕಾರ್ಯಕ್ಕೆ ನೆರವು ನೀಡುವಂತೆ ಕೋರಿ ಇಲಾಖೆಯು ವಾರಾಣಸಿ ಜಿಲ್ಲಾಡಳಿತವನ್ನು ಸಂಪರ್ಕಿಸಿದೆ ಎಂದು ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ವಾರಾಣಸಿ ಜಿಲ್ಲಾಧಿಕಾರಿ ಎಸ್.ರಾಜಲಿಂಗಮ್, ‘ಎಎಸ್‌ಐ ನಡೆಸಲಿರುವ ವೈಜ್ಞಾನಿಕ ಸಮೀಕ್ಷೆಗೆ ಸಾಧ್ಯವಾದ ಎಲ್ಲ ನೆರವನ್ನು ಜಿಲ್ಲಾಡಳಿತ ನೀಡಲಿದೆ’ ಎಂದಿದ್ದಾರೆ.

9ನೇ ಪುಟ ನೋಡಿ

‘ಸುಪ್ರೀಂ’ ಮೆಟ್ಟಿಲೇರಿದ ಮಸೀದಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾರಾಣಸಿಯ ಜ್ಞಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಗೆ ಅನುಮತಿ ನೀಡಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿರುವ ಆದೇಶಕ್ಕೆ ತಡೆ ನೀಡುವಂತೆ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಯು ಸುಪ್ರೀಂಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದೆ.

ಅಲಹಾಬಾದ್ ಹೈಕೋರ್ಟ್ ತೀರ್ಪು ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿಯೇ ಮಸೀದಿ ಸಮಿತಿಯು ಅರ್ಜಿ ಸಲ್ಲಿಸಿದೆ.

‘ಎಎಸ್‌ಐ ವೈಜ್ಞಾನಿಕ ಸಮೀಕ್ಷೆ ನಡೆಸದಂತೆ ತಡೆ ನೀಡಬೇಕು ಎಂದು ಕೋರಿ ರಜಾಕಾಲದ ವಿಶೇಷ ಅರ್ಜಿಯನ್ನು ಇ–ಮೇಲ್ ಮೂಲಕ ಸಲ್ಲಿಸಿದ್ದೇನೆ’ ಎಂದು ಮಸೀದಿ ಪರ ವಕೀಲ ಎಂ.ನಿಜಾಮುದ್ದೀನ್ ಪಾಷಾ ಹೇಳಿದ್ದಾರೆ.

9ನೇ ಪುಟ ನೋಡಿ



ಟ್ಯಾಂಕ್ ಬಿದ್ದು ಮೂವರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಅಂತಸ್ತಿನ ಕಟ್ಟಡದ ಮೇಲಿದ್ದ ನೀರಿನ ಟ್ಯಾಂಕ್ ಗೋಡೆ ಸಮೇತ ತಳ್ಳುಗಾಡಿಯ ಮೇಲೆ ಕುಸಿದು ಬಿದ್ದ ಪರಿಣಾಮ ಮೂವರು ಮೃತಪಟ್ಟಿದ್ದಾರೆ.

‘ತಮಿಳುನಾಡಿನ ಅರುಳ್ (40), ನೇಪಾಳದ ಕರಣ್ ತಾಪ್ (32) ಹಾಗೂ ಆಂಧ್ರಪ್ರದೇಶದ ಕೋಟಾ ನಾಗೇಶ್ವರ್ ರಾವ್ (32) ಮೃತರು. ಶಿವಾಜಿನಗರ ಬಸ್ ನಿಲ್ದಾಣ ಎದುರಿನ ಸೆಂಟ್ರಲ್ ಸ್ಟ್ರೀಟ್‌ನ ಓಕ್ ಟೌನ್ ಫರ್ನೀಚರ್ ಮಳಿಗೆ ಇರುವ ಕಟ್ಟಡದಲ್ಲಿ ಬುಧವಾರ ರಾತ್ರಿ 10.45 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಕಟ್ಟಡದ ಮಾಲೀಕರು ಹಾಗೂ ಇತರರ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅವಘಡದಲ್ಲಿ ತಳ್ಳುಗಾಡಿ ವ್ಯಾಪಾರಿ ದಾಸ್ ಸೇರಿ ಮೂವರು ತೀವ್ರ ಗಾಯಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಾಳುಗಳು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಸಹ ಪಡೆಯಲಾಗಿದೆ’ ಎಂದು ತಿಳಿಸಿದರು.

‘ಮೃತ ಅರುಳ್ ತರಕಾರಿ ವ್ಯಾಪಾರಿ. ಕರಣ್ ತಾಪ್ ಸ್ವಚ್ಛತೆ ಕೆಲಸಗಾರ. ನಾಗೇಶ್ವರರಾವ್ ಕಂಪನಿಯೊಂದರಲ್ಲಿ ಫೈನಾನ್ಸ್ ವಿಭಾಗದ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು’ ಎಂದು ಅವರು ಹೇಳಿದರು.

ಎಗ್‌ರೈಸ್ ತಿನ್ನಲು ಬಂದಿದ್ದರು: ‘ಸ್ಥಳೀಯ ನಿವಾಸಿ ದಾಸ್, ಓಕ್ ಟೌನ್ ಫರ್ನೀಚರ್ ಮಳಿಗೆ ಇರುವ ಕಟ್ಟಡದ ಎದುರು ಪಾದಚಾರಿ ಮಾರ್ಗದಲ್ಲಿ ತಳ್ಳುಗಾಡಿ ಇರಿಸಿಕೊಂಡು ಎಗ್‌ರೈಸ್ ಮಾರಾಟ ಮಾಡುತ್ತಿದ್ದರು. ನಿತ್ಯವೂ ಸಂಜೆಯಿಂದ ರಾತ್ರಿವರೆಗೂ ಅಂಗಡಿ ತೆರೆಯುತ್ತಿದ್ದರು. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಅರುಳ್, ಕರಣ್ ಹಾಗೂ ನಾಗೇಶ್ವರರಾವ್ ಅವರು ರಾತ್ರಿ 10.30ರ ಸುಮಾರಿಗೆ ಎಗ್‌ರೈಸ್ ತಿನ್ನಲು ತಳ್ಳುಗಾಡಿ ಬಳಿ ಬಂದಿದ್ದರು. ದಾಸ್ ಅವರು ಎಗ್‌ರೈಸ್ ಸಿದ್ಧಪಡಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಕಟ್ಟಡದ ಛಾವಣಿಯಲ್ಲಿದ್ದ ನೀರಿನ ಟ್ಯಾಂಕ್, ಕಾಂಕ್ರಿಟ್ ಗೋಡೆ ಸಮೇತ ಕುಸಿಯಿತು. ತಳ್ಳುಗಾಡಿ ಮೇಲೆ ನೀರಿನ ಟ್ಯಾಂಕ್ ಹಾಗೂ ಗೋಡೆಯ ಅವಶೇಷಗಳು ಬಿದ್ದವು’.

3ನೇ ಪುಟ ನೋಡಿ

ಕಲುಷಿತ ನೀರು: ಎಂಜಿನಿಯರ್ ಅಮಾನತಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಕವಾಡಿಗರಹಟ್ಟಿಯ ಕಲುಷಿತ ನೀರು ಪೂರೈಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರಸಭೆಯ ನೀರು ಪೂರೈಕೆ ಸಹಾಯಕರೊಬ್ಬರನ್ನು ಅಮಾನತುಗೊಳಿಸಲಾಗಿದೆ. ನೀರುಗಂಟಿ ಸೇವೆ ಸಲ್ಲಿಸುತ್ತಿದ್ದ ಇಬ್ಬರನ್ನು ಸೇವೆಯಿಂದ ವಜಾಗೊಳಿಸಿ ಜಿಲ್ಲಾಧಿಕಾರಿ ಗುರುವಾರ ಆದೇಶಿಸಿದ್ದಾರೆ. ಕರ್ತವ್ಯ ಲೋಪ ಎಸಗಿದ ಆರೋಪದಲ್ಲಿ ಇಬ್ಬರು ಎಂಜಿನಿಯರುಗಳನ್ನು ಅಮಾನತು ಮಾಡುವಂತೆ ಅವರು ಶಿಫಾರಸು ಮಾಡಿದ್ದಾರೆ.

ನಗರಸಭೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ ಆರ್.ಗಿರಡ್ಡಿ, ಕಿರಿಯ ಎಂಜಿನಿಯರ್ ಎಸ್.ಆರ್.ಕಿರಣ್ ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಅವರು ನಗರಾಭಿವೃದ್ಧಿ ಇಲಾಖೆಗೆ ಶಿಫಾರಸು ಮಾಡಿದ್ದಾರೆ.

ನೀರು ಹಂಚಿಕೆಯ ಹೊಣೆ ನಿಭಾಯಿಸುತ್ತಿದ್ದ ನಗರಸಭೆಯ ‘ಡಿ’ ಗ್ರೂಪ್ ನೌಕರ ಸಿ.ಎಚ್. ಪ್ರಕಾಶ ಬಾಬು ಎಂಬುವರನ್ನು ಅಮಾನತು ಮಾಡಲಾಗಿದೆ. ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ ಕವಾಡಿಗರಹಟ್ಟಿಯ ನೀರುಗಂಟಿಗಳಾದ ಸುರೇಶ್ ಮತ್ತು ಪ್ರಕಾಶ್ ಅವರನ್ನು ಕೆಲಸದಿಂದ ವಜಾಗೊಳಿಸಲಾಗಿದೆ.

9ನೇ ಪುಟ ನೋಡಿ

ಕುಡಿಯಲು ನೀರು ಯೋಗ್ಯವಾಗಿಲ್ಲ

ಕವಾಡಿಗರಹಟ್ಟಿಗೆ ಪೂರೈಕೆಯಾಗಿದ್ದ ನೀರು ಕುಡಿಯಲು ಯೋಗ್ಯವಾಗಿರಲಿಲ್ಲ ಎಂದು ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕ ವರದಿ ನೀಡಿದೆ. ಕಲುಷಿತ ನೀರು ಕುಡಿದು ಅಸ್ವಸ್ಥರಾದವರ ಮಲದ ಮಾದರಿಯಲ್ಲಿ ಕಾಲರಾ ಹರಡಬಹುದಾದ ಸೂಕ್ಷ್ಮಾಣು ಸಹ ಪತ್ತೆಯಾಗಿದೆ. ಹೆಚ್ಚಿನ ಪರೀಕ್ಷೆಗಾಗಿ ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಕಲುಷಿತ ನೀರು ಕುಡಿದು ಜನರು ಅಸ್ವಸ್ಥಗೊಂಡ ಪ್ರಕರಣ ಬಹಿರಂಗಗೊಂಡ ಬಳಿಕ ಕವಾಡಿಗರ ಹಟ್ಟಿಯ 50,000 ಲೀಟರ್ ಸಂಗ್ರಹ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್, ಮಿನಿ ಟ್ಯಾಂಕ್, ನಲ್ಲಿಯಿಂದ ಮನೆಗಳಿಗೆ ಪೂರೈಕೆ ಮಾಡಿದ ನೀರು ಹಾಗೂ ಶುದ್ಧ ಕುಡಿಯುವ ನೀರಿನ ಘಟಕದ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ನಾಲ್ಕು ತಿಂಗಳಿಂದ ಸಿಬ್ಬಂದಿಗೆ ಪಾವತಿಯಾಗದ ವೇತನ • ಸಮನ್ವಯಕಾರ ಹುದ್ದೆಯೂ ಖಾಲಿ

ಮುಚ್ಚುವ ಸ್ಥಿತಿಗೆ ಕನ್ನಡ ಜ್ಞಾನಕೋಶ ‘ಕಣಜ’

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕನ್ನಡ ಆನ್‌ಲೈನ್ ವಿಶ್ವಕೋಶ ಎಂದೇ ಬಿಂಬಿತವಾಗಿದ್ದ ‘ಕಣಜ’ ಅಂತರ್ಜಾಲ ಕನ್ನಡ ಜ್ಞಾನಕೋಶವು ಮುಚ್ಚುವ ಸ್ಥಿತಿ ತಲುಪಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇದನ್ನು ನಿರ್ವಹಿಸುತ್ತಿರುವ ಸಿಬ್ಬಂದಿಗೆ ಕಳೆದ ನಾಲ್ಕು ತಿಂಗಳಿಂದ ವೇತನ ಪಾವತಿಸಿಲ್ಲ.

ಕನ್ನಡ ಭವನದ ಮೊದಲ ಮಹಡಿಯಲ್ಲಿ ಕಣಜ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಕನ್ನಡ ಮತ್ತು ಕರ್ನಾಟಕದ ಬಗ್ಗೆ ಸಮಗ್ರ ಮಾಹಿತಿ ನೀಡಲು ಕರ್ನಾಟಕ ಜ್ಞಾನ ಆಯೋಗವು ‘ಕಣಜ’ವನ್ನು ಅಭಿವೃದ್ಧಿಪಡಿಸಿತ್ತು. ಇದನ್ನು 2015 ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಇತ್ತೀಚೆಗೆ ತಾಂತ್ರಿಕ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಮೇಲಿಂದ ಮೇಲೆ ಈ ಜಾಲತಾಣ ಸ್ಥಗಿತಗೊಳ್ಳುತ್ತಿತ್ತು. ಸಿಬ್ಬಂದಿ ಕೊರತೆಯಿಂದಾಗಿ ಜ್ಞಾನದ ಆಕರಗಳು ಸಹ ನಿಯಮಿತವಾಗಿ ಜಾಲತಾಣಕ್ಕೆ ಸೇರ್ಪಡೆ ಆಗಿಲ್ಲ. ಇದು ಸಾಂಸ್ಕೃತಿಕ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ.

ಪಾವತಿಯಾಗದ ಗೌರವಧನ

ಕಣಜಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಲು ವಿವಿಧ ವಿಶ್ವವಿದ್ಯಾಲಯಗಳು, ಅಧ್ಯಯನ ಸಂಸ್ಥೆಗಳ ನೆರವನ್ನೂ ಪಡೆಯಲಾಗುತ್ತಿದೆ. ಇದಕ್ಕಾಗಿ ಒಪ್ಪಂದಗಳನ್ನೂ ಮಾಡಿಕೊಳ್ಳಲಾಗಿದೆ. ಸಾಹಿತಿಗಳು, ಲೇಖಕರು, ಪತ್ರಕರ್ತರು ಬರೆದ ಮಾಹಿತಿಪೂರ್ಣ ಲೇಖನಗಳನ್ನು ಅವರ ಸಮ್ಮತಿ ಪಡೆದು ಪ್ರಕಟಿಸಲಾಗುತ್ತದೆ. ಸೂಚಿತ ಅನುವಾದ ಮತ್ತು ಸ್ವತಂತ್ರ ಬರವಣಿಗೆಗಳಿಗೆ ಗೌರವ ಸಂಭಾವನೆ ಪಾವತಿಸಬೇಕು. ಆದರೆ, ಈ ರೀತಿ ಬರವಣಿಗೆಗಳಿಗೆ ಈಗ ನಿಯಮಿತವಾಗಿ ಗೌರವ ಧನ ಪಾವತಿಯಾಗುತ್ತಿಲ್ಲ. ಇದು ಬರಹಗಾರರ ಅಸಮಾಧಾನಕ್ಕೆ ಕಾರಣವಾಗಿದೆ.

‘ಆಂಗ್ಲ ಭಾಷೆಯ ಕೃತಿಯೊಂದನ್ನು ಕನ್ನಡಕ್ಕೆ ಅನುವಾದಿಸಿ, ಕಣಜ ವಿಭಾಗಕ್ಕೆ ಹಲವು ದಿನಗಳ ಹಿಂದೆ ನೀಡಲಾಗಿತ್ತು. ಆದರೆ, ಗೌರವಧನವನ್ನು ಈವರೆಗೂ ನೀಡಿಲ್ಲ. ಕನ್ನಡ ಭವನಕ್ಕೆ ಅಲೆದಾಡಿ ಸಾಕಾಗಿದೆ. ಇಲಾಖೆಯು ಬರಹಗಾರರನ್ನು ಈ ರೀತಿ ನಡೆಸಿಕೊಳ್ಳುವುದು ಎಷ್ಟು ಸರಿ’ ಎಂದು ಲೇಖಕರೊಬ್ಬರು ಪ್ರಶ್ನಿಸಿದರು.

ಕಣಜ ವಿಭಾಗದ ಗುತ್ತಿಗೆ ಸಿಬ್ಬಂದಿಯ ವೇತನ ಬಾಕಿ ಇರುವುದು ನನ್ನ ಗಮನಕ್ಕೆ ಬಂದಿರಲಿಲ್ಲ. ಕೂಡಲೇ ಸಭೆ ನಡೆಸಿ, ವಾರದಲ್ಲಿ ವೇತನ ಪಾವತಿಗೆ ವ್ಯವಸ್ಥೆ ಮಾಡುವೆ

ವಿಶ್ವನಾಥ ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಕಣಜ ವಿಭಾಗಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಕವಾದ ಸಿಬ್ಬಂದಿಗೆ ಇಲಾಖೆಯು ಏಪ್ರಿಲ್ ತಿಂಗಳಿಂದ ವೇತನ ಪಾವತಿಸಿಲ್ಲ. ಕಣಜ ವಿಭಾಗ ನಿರ್ವಹಣೆಗೆ ಸಂಬಂಧಿಸಿದಂತೆ ಈವರೆಗೆ ಪ್ರತ್ಯೇಕ ಕಾರ್ಯಯೋಜನೆಯನ್ನೂ ರೂಪಿಸಿಲ್ಲ. ಇದರಿಂದಾಗಿ ಅನುದಾನ ಬಿಡುಗಡೆಯಾಗಿಲ್ಲ. ಹೀಗಾಗಿ, ಸಿಬ್ಬಂದಿಗೆ ವೇತನದ ಬಗ್ಗೆ ಖಚಿತತೆಯೂ ಇಲ್ಲವಾಗಿದೆ. ಈ ವಿಭಾಗ ನಿರ್ವಹಣೆ ಮಾಡುತ್ತಿದ್ದ ಸಮನ್ವಯಕಾರ ಹುದ್ದೆಯೂ ಕೆಲ ತಿಂಗಳಿಂದ ಖಾಲಿಯಿದ್ದು, ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಮಾಹಿತಿ ಸಂಗ್ರಹ ಸೇರಿ ವಿವಿಧ ಪ್ರಕ್ರಿಯೆ ಕುಂಟುತ್ತಾ ಸಾಗುತ್ತಿದೆ.

ಅನುದಾನದ ಕೊರತೆ: ಮೊದಲು ಕಣಜವನ್ನು ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿಬಿ) ನಿರ್ವಹಿಸುತ್ತಿತ್ತು. ಬಳಿಕ ಇಲಾಖೆಯೇ ಕಣಜ ಸಮಿತಿ ರಚಿಸಿತು. ಇಲಾಖೆಯ ಪ್ರಧಾನ ಕಾರ್ಯದರ್ಶಿ ಈ ಸಮಿತಿಯ ಅಧ್ಯಕ್ಷರಾಗಿದ್ದರೆ, ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಸದ್ಯ ಎರಡು ವರ್ಷಗಳ ಹಿಂದೆ ಖರೀದಿಸಿದ್ದ ಲೇಖನಗಳು, ಸಾಹಿತ್ಯ ಕೃತಿಗಳು ಸೇರಿ ವಿವಿಧ ಮಾಹಿತಿಗಳನ್ನೇ ಡಿಜಿಟಲೀಕರಣ ಮಾಡಲಾಗುತ್ತಿದೆ. ಇತ್ತೀಚಿನ ಮಾಹಿತಿಗಳು ಕಣಜಕ್ಕೆ ಅಳವಡಿಕೆಯಾಗುತ್ತಿಲ್ಲ. ಅನುದಾನದ ಕೊರತೆಯಿಂದ ವಿವಿಧ ವಿಶ್ವವಿದ್ಯಾಲಯ ಹಾಗೂ ಸಂಸ್ಥೆಗಳಿಂದಲೂ ಸಾಹಿತ್ಯ ಸೇರಿ ವಿವಿಧ ಕೃತಿಗಳ ಖರೀದಿ ನಡೆಯುತ್ತಿಲ್ಲ.

ಶುಕ್ರವಾರದ ಉಷ್ಣಾಂಶ
29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಬೀಳುವ ಸಾಧ್ಯತೆ

ಹವಾಮಾನ

ಶನಿವಾರ	ಭಾನುವಾರ	ಸೋಮವಾರ
29° 20°	29° 20°	29° 20°

ವಾಸುದೇವರಾವ್ ಸೇರಿ 12 ಮಂದಿಗೆ ಪ್ರಶಸ್ತಿ

ಬೆಂಗಳೂರು: ಸುರ್ವೆ ಕಲ್ಚರಲ್ ಅಕಾಡೆಮಿ 31ನೇ ವಾರ್ಷಿಕ ಪ್ರಶಸ್ತಿ ಘೋಷಿಸಿದ್ದು, ‘ರಾಷ್ಟ್ರೀಯ ಕಲಾ ವಿಭೂಷಣ ರಾಷ್ಟ್ರ ಪ್ರಶಸ್ತಿ’ಗೆ ಮೃದಂಗ ಕಲಾವಿದ ಎಂ. ವಾಸುದೇವರಾವ್ ಮೋಹಿತೆ ಆಯ್ಕೆಯಾಗಿದ್ದಾರೆ.

ಸಮಾಜಸೇವೆ ಕ್ಷೇತ್ರದಲ್ಲಿ ಲಕ್ಷ್ಮೀ ದೇವಿ, ಗ್ರಂಥಾಲಯ-ರಾಮ್‌ಕಲಾಲ್, ಶಿಕ್ಷಣ- ರವೀಂದ್ರನಾಥ ವಿ. ದೇಮಶೆಟ್ಟಿ, ಬಾಳಪ್ಪ ನ. ಬಶೆಟ್ಟಿ, ಖಾಜಪ್ಪ ಬಿ.ಬೋಳೆಗಾಂವ ಕೃಷಿ- ಅಂಬರೀಷ್ ಜಿ. ಗೊಂದಾಳ್, ತಾಂತ್ರಿಕ -ರವೀಂದ್ರ ನವಲೆ, ಸಾಮಾಜಿಕ-ಕೀರ್ತಿ ಗರಗ, ಜಾನಪದ-ನೀಲಪ್ಪ ಚಂ.ಹಡಪದ, ಸಹಕಾರ-ಅಶೋಕ್ ಗ.ಹವಳೆ, ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಗಂಗಾಧರ್ ಬ. ನಾಗಣಿ ಆಯ್ಕೆಯಾಗಿದ್ದಾರೆ.

ವಾಸುದೇವ ರಾವ್ ಮೋಹಿತೆ

ಇದೇ 11ರಂದು ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಸಂಸ್ಥಾಪನಾಧ್ಯಕ್ಷ ರಮೇಶ ಸುರ್ವೆ ತಿಳಿಸಿದ್ದಾರೆ.

PUBLIC NOTICE

My client intends to purchase the property mentioned in the Schedule here below from its owners; **Shri. M. Keshava Murthy,** son of Late K. Muniswamappa, **Smt. Krishnaveni**, wife of Shri. M. Keshava Murthy, **Shri. K. Mohan Kumar,** son of Shri. M. Keshava Murthy, **Shri. Aryan Mohan Kumar,** son of Shri. K. Mohan Kumar and **Shri. K. Pradeep Kumar**, son of Shri. M. Keshava Murthy,represented by their duly constituted General Power Attorney holder N. Narayanaswamy. The Owners represent that they are the absolute owners of the Schedule Property and have good marketable, right, title and interest therein. The owners further represent that, they have executed the General Power of Attorney dated 03-09-2016, in favour of **Shri. N. Narayanaswamy,** son of Late Narayanappa, registered vide Document No. JAL-4-00113/2016-17 of Book IV, stored in C. D. No. JALD 221, in the office of the Sub-Registrar, Gandhinagar (Jala), Bengaluru, which is still valid and subsisting and has not been cancelled or revoked and there are no other person/s having any right or claim over the Schedule Property. The Owners and General Power of Attorney Holder, represent that, except for the aforementioned General Power of Attorney executed in favour of Shri. N. Narayanaswamy, they have neither conveyed nor have entered into any Agreement of Sale/Memorandum of Understanding nor have entered into any sort of arrangement with any person/s for sale/transfer/development with respect to the Schedule Property and that neither they nor their General Power of Attorney holder have encumbered, mortgaged, created any charge or lien on the Schedule Property in any manner and apart from them, there are no other person/s, firm or company having any sort of right, title or claim over the Schedule Property. Any person/s having objection/s or claim/s shall with documentary evidence, lodge their objection(s)/claim(s) **within fifteen (15) days** from the date of publication of this Notice with the Undersigned failing which, my client shall proceed with the above-mentioned transactions.

SCHEDULE

All that piece and parcel of the agricultural dry land bearing **Survey No. 75**, measuring **05 acres**, situated at **Navarathna Agrahara Village, Jala Hobli, Yelahanka** (earlier Bengaluru North) **Taluk, Bengaluru Rural District** and the is bounded on the:

East by : Road
West by : Property bearing Survey No. 72
North by : Property bearing Survey No. 73
South by : Properties bearing Survey Nos. 69, 70 and 71

Vinay K. S. Advocate
Jayanth Pattanshetti Associates LLP
102, Ground Floor, "Rams Infantry Manor", No. 70, Infantry Road, Bengaluru-560 001 Ph.: 080 41238516/41238367
Bengaluru Date: 03-08-2023

PUBLIC NOTICE

The General Public are hereby notified that my clients propose to purchase the Schedule Property from **Mr.V.Vijay** and **Mr.Sirisha Kumar.V, Sons of Mr.Venugopal.G,** residents of No.129, 1st Cross, 14th Block, II Stage, Nagarabhavi, Bangalore – 560 072.

Any person or persons having any claims in respect of the Schedule Property or objections for the proposed sale transaction, may lodge their claims/objections within 10 (Ten) Days from the date of publication of this notice with supporting documents duly attested with the undersigned, failing which, thereafter my client shall conclude the transaction and No claims/objections filed beyond the stipulated period will be entertained.

SCHEDULE PROPERTY

ITEM No.1: All that piece and parcel of the **undeveloped Commercial Land** comprised of in **Survey No.110/2** (Portion of old Survey No.110) situated at Bullahalli Village, Vijayapura Hobli, Devanahalli Taluk, within the revenue administrative jurisdiction of Harohalli Gram Panchayath **measuring 1 Acre 03 Guntas** and including all rights, appurtenances, privileges, thereto and bounded as follows :

East by : Land bearing Survey No.110/1
West by : Land bearing Survey No.109
North by : Land bearing Survey No.107
South by : Land bearing Survey No.111

ITEM No.2: All that piece and parcel of the **undeveloped Industrial Land** comprised of in **Survey No.110/1** (Portion of old Survey No.110) situated at Bullahalli Village, Vijayapura Hobli, Devanahalli Taluk , within the revenue administrative jurisdiction of Harohalli Gram Panchayath, **measuring 1 Acre 23 Guntas** and including all rights, appurtenances, privileges, thereto and bounded as follows :

East by : National Highway No.7
West by : Land bearing Survey No.110/2
North by : Ho.Marriyanna's Land
South by : Thammanna and Madhurappa's Land.

N.JAIPRAKASH RAO, VEENA RAO, ASHOK KUMAR N
JAYPEE ASSOCIATES LAW FIRM
38, "KRISHNA" 1st Cross, Malleshwaram, BANGALORE – 560 003.
PH: 23560365, 23468742, 23565286
Email: contact@jaypeeassociates.com
BANGALORE DATED: 03.08.2023

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಹಾನಿರ್ದೇಶಕ ಹಿಮಾಂಶು ಪಾಠಕ್

ಕೃಷಿ ಸಂಶೋಧನಾ ಅನುದಾನ ಇಳಿಕೆ ಸಲ್ಲದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಾವಧಿ ವಿಜ್ಞಾನಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಹಾಗೂ ಸಂಶೋಧನಾ ವ್ಯವಸ್ಥೆಗೆ ನೀಡುತ್ತಿರುವ ಅನುದಾನ ಇಳಿಕೆ ಕೃಷಿ ಕ್ಷೇತ್ರಕ್ಕೆ ಆಶಾದಾಯಕವಲ್ಲ ಎಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಹಾನಿರ್ದೇಶಕ ಹಿಮಾಂಶು ಪಾಠಕ್ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ 57ನೇ ಘಟಿಕೋತ್ಸವದಲ್ಲಿ ಅವರ ಮುದ್ರಿತ ಭಾಷಣದ ಸಾರವನ್ನು ಕುಲಪತಿ ಎಸ್.ವಿ.ಸುರೇಶ್ ಓದಿದರು.

ಕೃಷಿ ವಲಯದಲ್ಲಿ ತ್ವರಿತ ಮತ್ತು ಫಲಪೂರ್ಣ ಫಲಿತಾಂಶಕ್ಕಾಗಿ ಸಾರ್ವಜನಿಕ ಹಾಗೂ ಖಾಸಗಿ ಪಾಲುದಾರಿಕೆಯನ್ನು ಬಲಗೊಳಿಸಬೇಕಿದೆ. ದ್ವಿಪಕ್ಷೀಯ ಶಿಕ್ಷಣ ಮತ್ತು ಸಂಯೋಜಿತ ಸಂಶೋಧನಾ ಚಟುವಟಿಕೆಗಳನ್ನು ಅನ್ವೇಷಿಸಬೇಕಿದೆ. ಇದರಿಂದ ತಂತ್ರಜ್ಞಾನಗಳ ನಡುವಿನ ಅಂತರ ಕಡಿಮೆ ಮಾಡಬಹುದು ಎಂದಿದ್ದಾರೆ.

ರೈತ ಒಕ್ಕೂಟ, ರೈತ ಉತ್ಪಾದನಾ ಸಂಘಗಳು ಸಣ್ಣ ಮತ್ತು ಅತಿ ಸಣ್ಣ ರೈತರ ಜೀವನೋಪಾಯಗಳನ್ನು ಭದ್ರಪಡಿಸಿವೆಯಾದರೂ, ನಿಯಂತ್ರಣ, ಮೇಲ್ವಿಚಾರಣೆ ಸಮಸ್ಯೆ, ಮಾರುಕಟ್ಟೆ ಸಂಪರ್ಕ, ಹಣಕಾಸು ಮತ್ತು ಮೂಲಸೌಕರ್ಯಗಳ ಕೊರತೆ ದೀರ್ಘಾವಧಿ ಸುಸ್ಥಿರತೆಗೆ ಅಡ್ಡಿಯಾಗಿವೆ ಎಂದು ಪ್ರತಿಪಾದಿಸಿದರು.

ಭಾರತದಲ್ಲಿ ಸುಸ್ಥಿರ ಬೆಳೆ ಉತ್ಪಾದನೆಗಾಗಿ ಕೃಷಿ ಸಮಸ್ಯೆಗಳ ಪರಿಹಾರಕ್ಕೆ ಹೊಸ ವಿಧಾನಗಳನ್ನು ಕಂಡುಕೊಳ್ಳಬೇಕಿದೆ. ಅದಕ್ಕಾಗಿ ಕೃಷಿ ಸಂಶೋಧನೆ ಮತ್ತು ಶಿಕ್ಷಣ ವ್ಯವಸ್ಥೆಯಲ್ಲೇ ಆಮೂಲಾಗ್ರ ಬದಲಾವಣೆ ತರಬೇಕಿದೆ. ಭಾರತ ವಿಶ್ವದ ಅತಿದೊಡ್ಡ ತರಕಾರಿ ಮಾರುಕಟ್ಟೆ. ಜಾಗತಿಕ ಉತ್ಪಾದನೆಯ ಶೇ 9.3ರಷ್ಟು ಪಾಲು ಹೊಂದಿದೆ. ಆದರೆ, ಕಳಪೆ ಸಂಗ್ರಹಣಾ ವ್ಯವಸ್ಥೆಯ ಫಲವಾಗಿ ಸಾಕಷ್ಟು ತರಕಾರಿಗಳು ವ್ಯರ್ಥವಾಗುತ್ತಿವೆ. ತರಕಾರಿ ತ್ಯಾಜ್ಯಗಳಿಂದಲೂ ಜೀವಸತ್ವ ಹಾಗೂ ಸೇವಿಸುವ ನಾರು ಸಂಸ್ಕರಿಸಬೇಕು. ಬಳಸಲಾದ ಆಹಾರ ಪದಾರ್ಥಗಳನ್ನು ಪ್ರಾಣಿಗಳಿಗೆ ಆಹಾರವಾಗಿ ನೀಡಬೇಕು ಎಂದಿದ್ದಾರೆ.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಹೆಚ್ಚುತ್ತಿರುವ ಮಾನವ ಚಟುವಟಿಕೆಗಳಿಂದಾಗಿ ಹವಾಮಾನ ವೈಪರೀತ್ಯ ಕಾಣುತ್ತಿದ್ದೇವೆ. ವಾತಾವರಣದ ಉಷ್ಣತೆ ಹೆಚ್ಚುತ್ತಿದೆ. ಮಳೆಯ ಪ್ರಮಾಣ ಮತ್ತು ವಿತರಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮಳೆಯ ದಿನಗಳ ಸಂಖ್ಯೆ ಕಡಿಮೆಯಾಗುವ ಆತಂಕ ಎದುರಾಗಿದೆ. ಇಂತಹ ಸನ್ನಿವೇಶದಲ್ಲಿ ಸುಸ್ಥಿರ ಕೃಷಿ ಸವಾಲುಗಳನ್ನು ನಿವಾರಿಸುವ ಗುರಿಯನ್ನು ಕೃಷಿ ವಿಶ್ವವಿದ್ಯಾಲಯಗಳು ಸಮರ್ಥವಾಗಿ ತಲುಪಬೇಕು ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಕುಲಸಚಿವ ಬಸವೇಗೌಡ, ಶಿಕ್ಷಣ ನಿರ್ದೇಶಕ ಕೆ.ಸಿ. ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕ ಪಡೆದ ಡಿ.ದರ್ಶನ್, ಸೌಜನ್ಯಾ, ಚೇತನ್‌ಕುಮಾರ್, ಎನ್.ಪೂಜಾ ಸಂತಸ ಹಂಚಿಕೊಂಡರು —ಪ್ರಜಾವಾಣಿ ಚಿತ್ರ

ಬಾಲ್ಯದಲ್ಲೇ ಕಂಡ ಕೃಷಿ ಸಮಸ್ಯೆಗಳು

ಅಜ್ಜಂದಿರು, ಅಪ್ಪ-ಅಮ್ಮ ಎಲ್ಲರೂ ಕೃಷಿಕರು. ಕುಟುಂಬದ ಕೃಷಿ ಸಂಕಷ್ಟವನ್ನು ಹತ್ತಿರದಿಂದ ಗಮನಿಸುತ್ತಾ ಬಂದಿರುವ ನನಗೆ ರೈತ ಸಮುದಾಯಕ್ಕೆ ಏನಾದರೂ ಸಹಾಯ ಮಾಡಬೇಕು ಎನ್ನುವ ಹಂಬಲವಿತ್ತು. ಹಾಗಾಗಿ, ಓದಿಗೆ ಕೃಷಿ ವಿಷಯವನ್ನೇ ಆಯ್ಕೆ ಮಾಡಿಕೊಂಡೆ ಎಂದು ಬಿಎಸ್ಸಿ (ಆನರ್ಸ್) ಪದವಿಯಲ್ಲಿ ಎಂಟು ಚಿನ್ನದ ಪದಕ ಮುಡಿಗೇರಿಸಿಕೊಂಡ ನಂಜನಗೂಡಿನ ಸೌಜನ್ಯ ಸಂತಸ ಹಂಚಿಕೊಂಡರು.

ಸದ್ಯ ಶಿವಮೊಗ್ಗದ ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವೆ. ಓದು ಮಗಿದ ತಕ್ಷಣ ರೈತರಿಗೆ ಯಾವ ರೀತಿಯ ಸಹಾಯ ಮಾಡಬೇಕು ಎನ್ನುವ ಚೌಕಟ್ಟು ಸಿದ್ಧಪಡಿಸಿಕೊಳ್ಳುವೆ ಎಂದರು.

ಎಂಟು ಚಿನ್ನದ ಪದಕ ಪಡೆದ ಡಿ.ದರ್ಶನ್ ಮಾತನಾಡಿ, ‘ಅಪ್ಪ ದೇವರಾಜ್ ಪೀಣ್ಯದ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಾ ಓದಿಸಿದ್ದಾರೆ. ಕೃಷಿ ಪದವಿ ಮುಗಿಯುತ್ತಿದ್ದಂತೆ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಸಿಕ್ಕಿದೆ. ಅಲ್ಲಿದ್ದುಕೊಂಡು ಯುಪಿಎಸ್‌ಸಿ ಪರೀಕ್ಷೆ ಬರೆಯಲು ನಿರ್ಧರಿಸಿದ್ದೇನೆ. ಕಷ್ಟಪಟ್ಟು ಓದಿಸಿದ ಅಪ್ಪ ಸ್ವಾಭಿಮಾನಿ. ನನಗೆ ಕೆಲಸ ಸಿಕ್ಕರೂ ಅವರು ಕೆಲಸ ಬಿಡಲು ಒಪ್ಪುತ್ತಿಲ್ಲ’ ಎಂದು ಹೇಳಿದರು.

ಹಾಸನ ಜಿಲ್ಲೆ ಬೇಲೂರಿನ ಕೃಷಿ ಕಾರ್ಮಿಕರ ಕುಟುಂಬದ ಕುಡಿ ಬಿ.ಎಸ್.ರಕ್ಷಿತಾ ಎರಡು ಚಿನ್ನದ ಪದಕಗಳನ್ನು ಪಡೆದಿದ್ದು, ಕೃಷಿಯಲ್ಲಿ ಸಂಶೋಧನೆ ಕೈಗೊಳ್ಳುವ ಆಸಕ್ತಿ ಹೊಂದಿದ್ದಾರೆ.

ಕೇರಳದ ಕೊಚ್ಚಿಯ ನೌಕರರಾದ ಶಾಲ್ ಹಾಗೂ ರಶ್ಮಿ ದಂಪತಿ ಪುತ್ರಿ ಮಾಳವಿಕಾ ಐದು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಸದ್ಯ ದೆಹಲಿಯಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದು, ವಿವಿಧ ತಳಿಗಳ ಸಂಶೋಧನೆ ಮಾಡುವ ಗುರಿ ಇಟ್ಟುಕೊಂಡಿದ್ದಾರೆ.

ಕೃಷಿ ಅರ್ಥಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಏಳು ಚಿನ್ನದ ಪದಕ ಗಳಿಸಿದ ಎನ್.ಪೂಜಾ ಅವರು ಬಳ್ಳಾರಿ ಜಿಲ್ಲೆ ಸಂಡೂರಿನವರು. ಐಎಎಸ್ ಮಾಡಿ ಜಿಲ್ಲಾಧಿಕಾರಿಯಾಗುವ ಕನಸು ಕಟ್ಟಿಕೊಂಡಿದ್ದಾರೆ.

ಬೇಸಾಯ ಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಏಳು ಚಿನ್ನದ ಪದಕ ಪಡೆದ ವುಚುಲ ಕೃಪಬಿಂದು ಅವರದು ಆಂಧ್ರಪ್ರದೇಶದ ರಾಜಮಂಡ್ರಿ. ಪ್ರಸ್ತುತ ಅವರು ಪಶ್ಚಿಮ ಬಂಗಾಳದಲ್ಲಿ ಕೃಷಿ ಸಂಶೋಧನೆ ಮಾಡುತ್ತಿದ್ದಾರೆ.

ನೈಋತ್ಯ ರೈಲ್ವೆ

ನಿರ್ಮಾಣ ಸಂಸ್ಥೆ, ನೈಋತ್ಯ ರೈಲ್ವೆಯು, ಸಿವಿಲ್ ಇಂಜಿನಿಯರಿಂಗ್, ಸಿಗ್ನಲ್ & ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ವಿಭಾಗಗಳಲ್ಲಿ **ಹಿರಿಯ ತಾಂತ್ರಿಕ ಸಹಾಯಕರು / ಕಿರಿಯ ತಾಂತ್ರಿಕ ಸಹಾಯಕರನ್ನು (ಎಸ್‌ಟಿಎ / ಜೆಟಿಎ)** ಗುತ್ತಿಗೆ ಆಧಾರದ ಮೇಲೆ ನೇಮಿಸಲು ಮುಕ್ತ ಮಾರುಕಟ್ಟೆಯಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅವಶ್ಯಕವಿರುವ ಒಟ್ಟು ಹುದ್ದೆಗಳ ಸಂಖ್ಯೆ – 35
ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ : **17–08–2023**
ಮುಂದಿನ ಸೂಚನೆಗಳು / ಪ್ರಕಟಣೆ / ಇತರ ವಿವರಗಳಿಗಾಗಿ ಭೇಟಿ ನೀಡಿ
www.swr.indianrailways.gov.in → About Us → Construction Organisation → Recruitment

ಉಪ ಮುಖ್ಯ ಸಿಬ್ಬಂದಿ ಅಧಿಕಾರಿ / ನಿರ್ಮಾಣ
ಬೆಂಗಳೂರು ದಂಡು

ಪಿಯುಬಿ/278/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ಫಲಪುಷ್ಪ ಪ್ರದರ್ಶನ: ವಾಹನ ನಿಲುಗಡೆ ನಿರ್ಬಂಧ

ಇಂದಿನಿಂದ ಆರಂಭ; ಇದೇ 15ರವರೆಗೆ 10 ಲಕ್ಷ ಜನರು ವೀಕ್ಷಿಸುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ ವತಿಯಿಂದ ಲಾಲ್‌ಬಾಗ್ ಉದ್ಯಾನದಲ್ಲಿ ಆಗಸ್ಟ್ 4ರಿಂದ 15ರವರೆಗೆ ಫಲಪುಷ್ಪ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಉದ್ಯಾನ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಗದಂತೆ ತಡೆಯಲು ಹಲವು ರಸ್ತೆಗಳಲ್ಲಿ ವಾಹನ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ.

‘ಗಣ್ಯರು, ಪ್ರವಾಸಿಗರು, ವಿದೇಶಿಗರು, ಶಾಲಾ ಮಕ್ಕಳು ಸೇರಿದಂತೆ ಸುಮಾರು 10 ಲಕ್ಷ ಜನ ಪ್ರದರ್ಶನ ವೀಕ್ಷಿಸಲು ಬರುವ ನಿರೀಕ್ಷೆ ಇದೆ. ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ. ಹಲವು ರಸ್ತೆಗಳಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ. ಕೆಲವು ಕಡೆ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಿಲುಗಡೆ ನಿರ್ಬಂಧಿತ ರಸ್ತೆಗಳು:

- ಲಾಲ್‌ಬಾಗ್ ಮುಖ್ಯ ದ್ವಾರದಿಂದ ನಿಮ್ಹಾನ್ಸ್‌ವರೆಗಿನ ಡಾ. ಮರಿಗೌಡ ರಸ್ತೆ
- ಕೆ.ಎಚ್. ವೃತ್ತದಿಂದ ಶಾಂತಿನಗರ ಜಂಕ್ಷನ್
- ಸುಬ್ಬಯ್ಯ ವೃತ್ತದಿಂದ ಲಾಲ್‌ಬಾಗ್ ಮುಖ್ಯದ್ವಾರದವರೆಗೆ
- ಊರ್ವಶಿ ಚಿತ್ರಮಂದಿರದಿಂದ ವಿಲ್ಸನ್ ಗಾರ್ಡನ್ 12ನೇ ಅಡ್ಡರಸ್ತೆವರೆಗೆ
- ಕ್ರುಂಬಿಗಲ್ ರಸ್ತೆ
- ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಆರ್.ವಿ. ಟೀಚರ್ಸ್ ಕಾಲೇಜ್‌ವರೆಗೆ
- ಆರ್.ವಿ. ಟೀಚರ್ಸ್ ಕಾಲೇಜ್‌ನಿಂದ ಅಶೋಕ ಪಿಲ್ಲರ್‌ವರೆಗೆ
- ಅಶೋಕ ಪಿಲ್ಲರ್‌ನಿಂದ ಸಿದ್ದಾಪುರ ಜಂಕ್ಷನ್‌ವರೆಗೆ

ನಗರದ ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕಾಗಿ ಹೂವಿನಲ್ಲಿ ಸಿದ್ಧಪಡಿಸುತ್ತಿರುವ ವಿಧಾನಸೌಧ ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಸಿ.ಎಂ ಉದ್ಘಾಟನೆ
ಆಗಸ್ಟ್ 4ರಂದು ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫಲಪುಷ್ಪ ಪ್ರದರ್ಶನ ಉದ್ಘಾಟಿಸಲಿದ್ದಾರೆ.

ನಿಲುಗಡೆಗೆ ಅವಕಾಶ ಕಲ್ಪಿಸಿರುವ ರಸ್ತೆಗಳು:

- ಡಾ. ಮರಿಗೌಡ ರಸ್ತೆಯ ಅಲ್ ಅಮೀನ್ ಕಾಲೇಜು ಹಾಗೂ ಹಾಪ್‌ಕಾಮ್ಸ್ ಆವರಣ
- ಶಾಂತಿನಗರ ಬಸ್ ನಿಲ್ದಾಣದ ಬಹುಮಹಡಿ ಕಟ್ಟಡ
- ಜೆ.ಸಿ. ರಸ್ತೆಯ ಕಾರ್ಪೊರೇಷನ್ ಪಾರ್ಕಿಂಗ್ ಸ್ಥಳ

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/58/2022–23 ದಿನಾಂಕ: 02–08–2023

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಅರ್ಜಿದಾರರು ಹಾಗೂ ಜಮೀನಿನ ಮಾಲೀಕರಾದ **ಶ್ರೀ ಕೆ.ಎನ್. ರಾಮರಾವ್ ಮತ್ತು ಶ್ರೀ ಕೆ.ಎಸ್. ಸತೀಶ್ ಕುಮಾರ** ಇವರುಗಳು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೊಳತೂರು ಗ್ರಾಮದ ಸ.ನಂ. 194 ರಲ್ಲಿನ 02 ಎಕರೆ 26 ಗುಂಟೆ ವಿಸ್ತೀರ್ಣದ ಜಮೀನನ್ನು **ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನನ್ನು **ಕೃಷಿ ವಲಯಕ್ಕೆ ಕಾಯ್ದಿರಿಸಿರುವ** ಪ್ರಸ್ತಾಪಿತ ಜಮೀನು ಕೊಳತೂರು ಗ್ರಾಮದ ಹತ್ತಿರದಲ್ಲಿದ್ದು, ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/770/2023–24

10 ಸಾವಿರಕ್ಕೂ ಹೆಚ್ಚು ಸಲಹೆ

ಮೂಲದಲ್ಲೇ ತ್ಯಾಜ್ಯ ವಿಂಗಡಣೆಯಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಿಸಬೇಕು, ಕಸದಿಂದ ವಿದ್ಯುತ್ ತಯಾರಿ, ತ್ಯಾಜ್ಯ ನಿರ್ವಹಣೆಗೆ ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಪದ್ಧತಿ ಬಳಕೆ, ವಿಲೇವಾರಿ ಬಗ್ಗೆ ಯುವ ಸಮೂಹ ಹಾಗೂ ಮಕ್ಕಳಿಗೆ ಜಾಗೃತಿ ನೀಡಬೇಕು...

‘ಬ್ರ್ಯಾಂಡ್ ಬೆಂಗಳೂರಿನ’ ಅಭಿಯಾನದ ಅಂಗವಾಗಿ ಘನತ್ಯಾಜ್ಯ ನಿರ್ವಹಣೆಗೆ ನಾಗರಿಕರಿಂದ ಬಂದಿರುವ ಪ್ರಮುಖ ಸಲಹೆಗಳಿವು.

‘ಸ್ವಚ್ಛ ಬೆಂಗಳೂರು’ ವಿಭಾಗದ ಬಗ್ಗೆ 10,479 ಸಲಹೆಗಳು ಬಂದಿದ್ದು, ಬೆಂಗಳೂರು ವಿಶ್ವವಿದ್ಯಾಲಯ ಪರಿಸರ ವಿಜ್ಞಾನ ವಿಭಾಗ ಎಲ್ಲಾ ಸಲಹೆಗಳನ್ನು ಬೇರ್ಪಡಿಸಿ ವರದಿಯನ್ನು ಸಿದ್ದಪಡಿಸಲಿದೆ.

ಈ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ವಿಚಾರ ಸಂಕಿರಣದಲ್ಲಿ ಮಾಹಿತಿಯನ್ನು ಹಂಚಿಕೊಳ್ಳಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಶೇಖ್ ಲತೀಫ್ ಮಾತನಾಡಿ, ನಗರದಲ್ಲಿ ಘನತ್ಯಾಜ್ಯ ನಿರ್ವಹಣೆ ಪಾಲಿಕೆಯ ಕರ್ತವ್ಯ ಮಾತ್ರವಲ್ಲ, ಎಲ್ಲ ವರ್ಗದ ನಾಗರಿಕರ ಕರ್ತವ್ಯ. ಜವಾಬ್ದಾರಿಗಳನ್ನು ಅರಿತು ಮೂಲದಲ್ಲಿಯೇ ಸ್ವಚ್ಛತೆ ಕಾಪಾಡಿದರೆ ಸ್ವಚ್ಛ ಬೆಂಗಳೂರನ್ನಾಗಿಸಲು ಸಾಧ್ಯ ಎಂದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯ ಮುಖ್ಯ ಪ್ರಧಾನ ಎಂಜಿನಿಯರ್ ಬಸವರಾಜ್ ಕಬಾಡೆ ಮಾತನಾಡಿ, ‘ಸ್ವಚ್ಛ ಬೆಂಗಳೂರು ವಿಭಾಗದ ಅಭಿವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಪಾಲುದಾರಿಕೆ ಮಾಡಿಕೊಳ್ಳ ಲಾಗಿದೆ. ಸಲಹೆಗಳನ್ನು ಕ್ರೋಡೀಕರಿಸಿ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು.

ನಗರದಲ್ಲಿ ಸುಮಾರು 1.4 ಕೋಟಿ ಲಕ್ಷ ಜನಸಂಖ್ಯೆಯಿದ್ದು, ಪ್ರತಿನಿತ್ಯ 5,500 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ವೈಜ್ಞಾನಿಕವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡದಿದ್ದಲ್ಲಿ ಮುಂದಿನ 15 ವರ್ಷಗಳಲ್ಲಿ 12,000 ಮೆಟ್ರಿಕ್ ಟನ್ ಉತ್ಪತ್ತಿಯಾಗಲಿದೆ ಎಂದರು.

ಪ್ರಮುಖ ಸಲಹೆ

- ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಉನ್ನತೀಕರಿಸಿ, ವೈಜ್ಞಾನಿಕ ನಿರ್ವಹಣೆ
- ಬಯೋ ಸಿ.ಎನ್.ಜಿ ಸ್ಥಾಪನೆ
- ಆಟೊ ಟಿಪ್ಪರ್‌ಗಳಿಗೆ ಜಿಪಿಎಸ್ ಅಳವಡಿಕೆ
- ಪ್ರತಿ ವಾರ್ಡ್‌ನಲ್ಲೂ ಒಣ ತ್ಯಾಜ್ಯ ಸಂಗ್ರಹಣಾ ಘಟಕ
- ಪ್ಲಾಸ್ಟಿಕ್ ಉತ್ಪನ್ನಗಳ ಸಂಪೂರ್ಣ ನಿಷೇಧ
- ಕಟ್ಟಡ ತ್ಯಾಜ್ಯ ವಿಲೇವಾರಿಗೆ ಆ್ಯಪ್ ಆಧರಿತ ವಿಲೇವಾರಿ
- ಸಾರ್ವಜನಿಕ ಶೌಚಾಲಯಗಳ ಹೆಚ್ಚಳ
- ಅವಶ್ಯಕತೆ ಆಧಾರದಲ್ಲಿ ಪೌರಕಾರ್ಮಿಕರ ನೇಮಕ
- ‘ಬ್ರ್ಯಾಂಡ್ ಅಂಬಾಸಿಡರ್’ ಆಗಿ ಪೌರಕಾರ್ಮಿಕರ ಪ್ರತಿನಿಧಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Part-Time Jobs

TOP MNC COMPANY LICENSED BY GOVT. Restart Your 2nd Career Opportunity With Flexible Timings Age Limit 45yrs And Above: 7019215243/ 9886641282

Teachers/ Professors

WANTED TEACHERS with D.Ed for Primary and B.Ed for High School English Medium School Salary Primary School Rs 20000/- High School Rs 25000/- Sri Rakum High School, 421/1, Sri Krishna temple Road IndiraNagar, 1st Stage, Bangalore- 560038 Tel: 080-25215705

EDUCATIONAL

Training

FELLOWSHIP IN aesthetic dermatology and trichology RGUHS LAST DATE to apply 05.08.2023 Email: training.venkatcharmalaya@gmail.com, Ph:080-23392416

PERSONAL

Change of Name

I, SANTHOSHA KONERY VENKATESHA, residing at Bengaluru-61 have changed my name as SANTHOSH KONERY VENKATESH, vide affidavit dated 3/8/2023 before Notary P.C.Ramaiah, Bengaluru

I, RAYMOND Roy And Chris Stanislas R/o Gf02 Estima. No. 160, 6th Cross. St.bed. Koramangala, Bangalore-560034 have changed my minor daughter's name from Cheriza Mirielle to Cheriza Roy Stanislas.

I ZUBEDA #380/3, 2ND cross, 5th Main, Bommanahalli-68, have changed my minor daughter name from FATHIMA to BIBI FATHIMA vide affidavit dated- 03/08/2023.

I, NIRANJAN Madhusoodhana Shetty R/a.#C-103, Adarsh Citrine Apartment,`#54, Aravind-Layout, Silver Oak street, Vinayakanagar, JPNagar.7th Phase, Bangalore- 560078. have`changed`my name to Niranjan Shetty Vide`affidavit dated:3.8.2023 before Notary`Mohammed Hussain.K. Bangalore

I, MEGHANA GURARAJ ANAGI W/o.Susheel Madhusudan Koushik R/a#157, 4th main, 1st`cross, Devaiah Park, AD Block, Srirampuram, Bengaluru- 560021 have`changed my name to MEGHANA GURURAJ ANAGI vide`affidavit dated:2.8.2023 before`Notary B.Gopalakrishna Bengaluru

I, SHARANBASVARAJ, residing at Bengaluru-98 have changed my name as SHARANBASAVARAJ, vide affidavit dated 3/8/2023 before Notary P.C.Ramaiah, Bengaluru

I VENNILA V #28, Near Yalladevi Temple, Sarjapura Hobli, Chitalamadivala, Bengaluru-99, have changed my name to VENNALA. V vide affidavit dated- 02/08/223 before notary K.V.Mani

RENTAL PROPERTIES

Accommodation Available

Commercial

OFFICE PREMISES Rent #33 Swiss Complex Mezzanine Floor M-1, 840 Sqft Race Course Road, Bangalore- 560001 Call: 9845081411/08029521081

REAL ESTATE SELLING

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call:9663001940.

House

Koramangala

SALE 40X60-SITE South West Corner With Well Maintained old 4 Bedrooms House Near Koramangala Club Call:9341231877

Chandra Layout

CHANDRA LAYOUT Near Venkateshwara Layout 30x40 East Facing, East Door, 3 Floors House Sale. 9008418631.

M G Road And Around

ARCHITECT DESIGNED 7 Bedroom Bungalow for sale in Brunton Road Off. M.G. Road, 3520 Sqft plot, can be easily converted into commercial space. Ph: 9844015899.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU CITY ON FRIDAY + SATURDAY + SUNDAY
@3000/-* FOR 15 WORDS
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164

ಕಾಡುಗೋಡಿ ಠಾಣೆಯ ವ್ಯಾಪ್ತಿಯಲ್ಲಿ ಘಟನೆ • ನಾಲ್ವರ ಸಾವಿಗೆ ಕಾರಣ ಇನ್ನೂ ನಿಗೂಢ

ಪತ್ನಿ, ಮಕ್ಕಳಿಬ್ಬರನ್ನು ಕೊಂದು ಟೆಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಉಸಿರುಗಟ್ಟಿಸಿ ಕೊಂದು ಸಾಫ್ಟ್‌ವೇರ್ ಎಂಜಿನಿಯರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಕಾಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೀರಾರ್ಜುನ್ ವಿಜಯ್ (31), ಪತ್ನಿ ಹೇಮಾವತಿ (29), ಮಕ್ಕಳಾದ ಎಂಟು ತಿಂಗಳ ಸೃಷ್ಟಿ ಸುನಯನಾ, ಎರಡು ವರ್ಷದ ಮೋಕ್ಷಾ ಮೇಘನಯನಾ ಮೃತರು.

ವೀರಾರ್ಜುನ್ ವಿಜಯ್, ಹೇಮಾವತಿ

'ಆಂಧ್ರಪ್ರದೇಶದ ವಿಜಯ್, ನಗರದ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರು. 6 ವರ್ಷಗಳ ಹಿಂದೆಯಷ್ಟೇ ಹೇಮಾವತಿ ಅವರನ್ನು ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಸೀಗೆಹಳ್ಳಿಯ ಸಾಯಿ ಗಾರ್ಡನ್ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಕುಟುಂಬ ನೆಲೆಸಿತ್ತು' ಎಂದು ಪೊಲೀಸರು ಹೇಳಿದರು.

'ಫ್ಲ್ಯಾಟ್‌ನಿಂದ ಗುರುವಾರ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಫ್ಲ್ಯಾಟ್ ಬಾಗಿಲು ಮೀಟಿ ತೆರೆಯಲಾಯಿತು. ಪತ್ನಿ ಹಾಗೂ ಮಕ್ಕಳ ಮೃತದೇಹಗಳು ನೆಲದ ಮೇಲಿದ್ದವು. ವಿಜಯ್ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿತ್ತು. ಟಿ.ವಿ ಸಹ ಆನ್ ಇತ್ತು' ಎಂದು ತಿಳಿಸಿದರು.

ಹೊರಗೆ ಬಾರದ ದಂಪತಿ: 'ಜುಲೈ 31ರಂದು ರಾತ್ರಿ ಪತ್ನಿ ಹಾಗೂ ಮಕ್ಕಳನ್ನು ವಿಜಯ್ ಕೊಲೆ ಮಾಡಿದ್ದಾರೆ. ನಂತರ, ತಾವೂ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆಗಸ್ಟ್ 1ರ ಬೆಳಿಗ್ಗೆಯಿಂದ ದಂಪತಿ ಹಾಗೂ ಮಕ್ಕಳು ಹೊರಗೆ ಬಂದಿರಲಿಲ್ಲ. ಇದರಿಂದ ಸ್ಥಳೀಯರಲ್ಲಿ ಅನುಮಾನ ಮೂಡಿತ್ತು' ಎಂದು ಪೊಲೀಸರು ಹೇಳಿದರು.

'ಊರಿಗೆ ಹೋಗಿರಬಹುದೆಂದು ಸ್ಥಳೀಯರು ಅಂದುಕೊಂಡಿದ್ದರು. ಆದರೆ, ದುರ್ವಾಸನೆ ಬಂದಿದ್ದರಿಂದ ಮನೆಯಲ್ಲೇ ಮೃತಪಟ್ಟಿರುವ ಅನುಮಾನ ಉಂಟಾಗಿತ್ತು' ಎಂದು ತಿಳಿಸಿದರು.

ಸಮವಸ್ತ್ರದಿಂದ ಕುತ್ತಿಗೆ ಬಿಗಿದು ಮಗು ಕೊಲೆ: 'ಎಂಟು ತಿಂಗಳ ಮಗುವನ್ನು ಕುತ್ತಿಗೆಗೆ ಸಮವಸ್ತ್ರದಿಂದ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ. ಹೇಮಾವತಿ ಹಾಗೂ ಮೋಕ್ಷಾ ಮೇಘನಯನಾ ಅವರನ್ನು ಕುತ್ತಿಗೆ ಹಿಸುಕಿ ಕೊಂದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಭೇಟಿ ನೀಡಿ ಮಾದರಿ ಸಂಗ್ರಹಿಸಿದ್ದಾರೆ. ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ. ಹೀಗಾಗಿ, ನಾಲ್ವರ ಸಾವಿಗೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಆಂಧ್ರಪ್ರದೇಶದಲ್ಲಿರುವ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ. ಅವರು ನಗರಕ್ಕೆ ಬಂದ ನಂತರ ಹೇಳಿಕೆ ಪಡೆಯಲಾಗುವುದು' ಎಂದು ಪೊಲೀಸರು ತಿಳಿಸಿದರು.

ಗ್ರಾ.ಪಂ ಸದಸ್ಯೆ ಪುತ್ರಿಯರಿಗೆ ವಿಷಪ್ರಾಷನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ತಾಲ್ಲೂಕಿನ ದೊಡ್ಡಸಣ್ಣೆ ಗ್ರಾಮ ಪಂಚಾಯತಿ ಸದಸ್ಯೆ ಮನೆಗೆ ನುಗ್ಗಿದ ದುಷ್ಕರ್ಮಿಗಳ ಗುಂಪೊಂದು ಅವರ ಇಬ್ಬರು ಪುತ್ರಿಯರಿಗೆ ಬಲವಂತವಾಗಿ ಕ್ರಿಮಿನಾಶಕ ಕುಡಿಸಿ ಪರಾರಿಯಾಗಿದೆ.

ದೊಡ್ಡಸಣ್ಣೆ ಗ್ರಾಮ ಪಂಚಾಯತಿ ಸದಸ್ಯೆ ಶಿಲ್ಪಾ ಅಶೋಕ್ ಮನೆಗೆ ಮಂಗಳವಾರ (ಆಗಸ್ಟ್ 1) ನುಗ್ಗಿದ್ದ ಅಪರಿಚಿತ ಗುಂಪು ಮನೆಯಲ್ಲಿದ್ದ 12 ವರ್ಷದ ಮಗಳಿಗೆ ಬಲವಂತವಾಗಿ ಕ್ರಿಮಿನಾಶಕ ಕುಡಿಸಿ ಪರಾರಿಯಾಗಿತ್ತು. ಗುರುವಾರ ಬೆಳಗಿನ ಜಾವ ಮತ್ತೆ ಮನೆಗೆ ನುಗ್ಗಿದ ಗುಂಪು ಶಿಲ್ಪಾ ಅವರ 15 ವರ್ಷದ ಮತ್ತೊಬ್ಬ ಮಗಳ ಬಾಯಿಗೆ ಕ್ರಿಮಿನಾಶಕ ಸುರಿದು ಪರಾರಿಯಾಗಿದೆ.

ಅಸ್ವಸ್ಥರಾಗಿರುವ ಅಕ್ಕ, ತಂಗಿಯನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆ ಪೈಕಿ ತಂಗಿ ಭಾಗಶಃ ಚೇತರಿಸಿಕೊಂಡಿದ್ದು, ಅಕ್ಕನ ಸ್ಥಿತಿ ಚಿಂತಾಜನಕವಾಗಿದೆ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯರು ತಿಳಿಸಿದ್ದಾರೆ.

ನೀರಿನ ಪೈಪ್ ದುರಸ್ತಿ: ವಿದ್ಯುತ್ ತಗುಲಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ಕುಡಿಯುವ ನೀರು ಸರಬರಾಜು ಪೈಪ್ ದುರಸ್ತಿ ವೇಳೆ ನೆಲದಡಿಯ ವಿದ್ಯುತ್ ತಗುಲಿ ಕಾರ್ಮಿಕ ಬಸಪ್ಪ (55) ಮೃತಪಟ್ಟಿದ್ದು, ಗುತ್ತಿಗೆದಾರ ಹಾಗೂ ಇತರರ ವಿರುದ್ಧ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮಾಗಡಿ ರಸ್ತೆ ನಾಗರಹೊಳೆ ನಗರದ ನಿವಾಸಿ ಬಸಪ್ಪ, ಜಲಮಂಡಳಿ (ಬಿಡಬ್ಲ್ಯುಎಸ್ಎಸ್‌ಬಿ) ಗುತ್ತಿಗೆದಾರ ಬಸವರಾಜ್ ಬಳಿ ಕೆಲಸ ಮಾಡುತ್ತಿದ್ದರು. ಬಸಪ್ಪ ಸಾವಿಗೆ ಕಾರಣವಾದ ಆರೋಪದಡಿ ಬಸವರಾಜ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕುಡಿಯುವ ನೀರಿನ ಪೈಪ್‌ಗೆ ತಾಗಿಕೊಂಡು ಬೆಸ್ಕಾಂನವರು ವಿದ್ಯುತ್ ಕೇಬಲ್ ಅಳವಡಿಸಿದ್ದಾರೆ. ಪೈಪ್ ದುರಸ್ತಿಗಾಗಿ ಗುದ್ದಲಿಯಿಂದ ನೆಲ ಅಗೆಯುತ್ತಿದ್ದ ಸಂದರ್ಭದಲ್ಲಿ ಬಸಪ್ಪ ಅವರಿಗೆ ವಿದ್ಯುತ್ ತಗುಲಿ ಈ ಅವಘಡ ಸಂಭವಿಸಿದೆ' ಎಂದು ತಿಳಿಸಿವೆ.

ಆಸ್ಪತ್ರೆಯಲ್ಲಿ ಸಾವು: 'ವಿಜಯನಗರದ ಪೈಪ್‌ಲೈನ್ ರಸ್ತೆಯಲ್ಲಿ ಕಾವೇರಿ ನೀರು ಸರಬರಾಜು ಪೈಪ್ ಸೋರಿಕೆಯಾಗುತ್ತಿದ್ದ ಬಗ್ಗೆ ದೂರು ಬಂದಿತ್ತು. ಗುತ್ತಿಗೆದಾರರ ಸೂಚನೆಯಂತೆ ಪೈಪ್ ದುರಸ್ತಿ ಮಾಡಲು ಕಾರ್ಮಿಕ ರೇವಣ್ಣ ಜೊತೆಯಲ್ಲಿ ಬಸಪ್ಪ ಅವರು ಸ್ಥಳಕ್ಕೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀರು ಸೋರಿಕೆಯಾಗುತ್ತಿದ್ದ ಸ್ಥಳದಲ್ಲಿ ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಬಸಪ್ಪ ಅವರು ಗುದ್ದಲಿಯಿಂದ ಅಗೆಯುತ್ತಿದ್ದರು. ಇದೇ ಸಂದರ್ಭದಲ್ಲಿ ವಿದ್ಯುತ್ ಕೇಬಲ್ ತಾಗಿ ಬೆಂಕಿ ಹೊತ್ತಿಕೊಂಡಿತ್ತು. ಬಸಪ್ಪ ಕಾಲು, ಕೈ, ಎದೆ ಹಾಗೂ ದೇಹದ ಹಲವು ಭಾಗಗಳಿಗೆ ಬೆಂಕಿ ತಗುಲಿ ಗಾಯಗಳಾಗಿದ್ದವು. ಸ್ಥಳೀಯರು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿಯೇ ಅವರು ಜುಲೈ 30ರಂದು ಮೃತಪಟ್ಟಿದ್ದಾರೆ' ಎಂದು ತಿಳಿಸಿವೆ.

ಬೆಸ್ಕಾಂ ಬಗ್ಗೆ ತನಿಖೆ: 'ನೆಲದಡಿ ವಿದ್ಯುತ್ ಕೇಬಲ್ ಅವೈಜ್ಞಾನಿಕ ರೀತಿಯಲ್ಲಿ ಅಳವಡಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬಸಪ್ಪ ಸಾವಿಗೆ ಬೆಸ್ಕಾಂ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಕಾರಣವೆಂದು ಕುಟುಂಬಸ್ಥರು ಆರೋಪಿಸುತ್ತಿದ್ದಾರೆ. ತನಿಖೆ ನಡೆಸಿ ಪುರಾವೆಗಳನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ಹೇಳಿವೆ.

ಪತ್ನಿಯ ಬೆರಳು ಕಚ್ಚಿದ ಪತಿ

ಬೆಂಗಳೂರು: 'ಮನೆಗೆ ನುಗ್ಗಿದ್ದ ಪತಿ ವಿಜಯ್‌ಕುಮಾರ್ ನನ್ನ ಬೆರಳು ಕಚ್ಚಿ ಜೀವ ಬೆದರಿಕೆಯೊಡ್ಡಿದ್ದಾನೆ' ಎಂದು ಆರೋಪಿಸಿ ಮಹಿಳೆಯೊಬ್ಬರು ಕೋಣನಕುಂಟೆ ಠಾಣೆಗೆ ದೂರು ನೀಡಿದ್ದಾರೆ.

'ಸ್ಥಳೀಯ ನಿವಾಸಿಯಾಗಿರುವ 40 ವರ್ಷದ ಮಹಿಳೆ ಇತ್ತೀಚೆಗೆ ದೂರು ನೀಡಿದ್ದಾರೆ. ಅವರ ಪತಿ ವಿಜಯ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ ಹಾಗೂ ವಿಜಯ್‌ಕುಮಾರ್, 23 ವರ್ಷಗಳ ಹಿಂದೆ ಮದುವೆಯಾಗಿದ್ದಾರೆ. ದಂಪತಿಗೆ ಮಗನಿದ್ದಾನೆ. ಪತಿ ನೀಡುತ್ತಿದ್ದ ಕಿರುಕುಳದಿಂದ ಬೇಸತ್ತ ಪತ್ನಿ, ಕೆಲ ತಿಂಗಳ ಹಿಂದೆಯಷ್ಟೇ ಮನೆ ಬಿಟ್ಟು ಬಂದಿದ್ದರು. ಕೊತ್ತನೂರಿನ ಸಾರಥಿ ನಗರದ ಬಾಡಿಗೆ ಮನೆಯಲ್ಲಿ ಮಗನ ಜೊತೆ ನೆಲೆಸಿದ್ದರು' ಎಂದು ತಿಳಿಸಿವೆ.

'ಮನೆಗೆ ವಾಪಸು ಬರುವಂತೆ ವಿಜಯ್‌ಕುಮಾರ್ ಪದೇ ಪದೇ ಕರೆ ಮಾಡಿ ಪೀಡಿಸುತ್ತಿದ್ದ. ಮನೆಗೆ ಬರುವುದಿಲ್ಲವೆಂದು ಮಹಿಳೆ ಹೇಳಿದ್ದರು. ಜುಲೈ 28ರಂದು ಮನೆಗೆ ನುಗ್ಗಿದ್ದ ಆರೋಪಿ, ಪತ್ನಿ ಜೊತೆ ಜಗಳ ತೆಗೆದಿದ್ದ. ಎಡಗೈನ ಬೆರಳು ಕಚ್ಚಿದ್ದ ಆರೋಪಿ, 'ನಿನ್ನನ್ನೂ ಕಚ್ಚಿ ಕೊಲೆ ಮಾಡುತ್ತೇನೆ' ಎಂಬುದಾಗಿ ಬೆದರಿಸಿದ್ದ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಟ್ಯಾಂಕ್ ಬಿದ್ದು ಮೂವರು ಸಾವು

ಒಂದನೇ ಪುಟದಿಂದ...

'ಸ್ಥಳದಲ್ಲಿದ್ದ ಅರುಳ್, ಕರಣ್ ಹಾಗೂ ನಾಗೇಶ್ವರ್ ರಾವ್ ಅವರ ತಲೆ ಮೇಲೆ ಅವಶೇಷಗಳು ಬಿದ್ದವು. ಇದರಿಂದ ತೀವ್ರ ಗಾಯಗೊಂಡಿದ್ದ ಮೂವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಮೂವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ದೊಡ್ಡ ಶಬ್ದ, ಸ್ಫೋಟವೆಂಬ ಹೆದರಿಕೆ: 'ಕಟ್ಟಡದ ಜಾಗದಲ್ಲಿ ಬುಧವಾರ ರಾತ್ರಿ ಜೋರಾದ ಶಬ್ದ ಕೇಳಿತ್ತು. ತಳ್ಳುಗಾಡಿಯಲ್ಲಿ ಅನಿಲ ಸ್ಫೋಟ ಸಂಭವಿಸಿರಬಹುದೆಂಬ ಅನುಮಾನ ಬಂದಿತ್ತು. ಸ್ಥಳಕ್ಕೆ ಹೋದಾಗ, ನೀರು ಚೆಲ್ಲಿತ್ತು. ಗೋಡೆಗಳ ಅವಶೇಷಗಳು ಎಲ್ಲೆಂದರಲ್ಲಿ ಬಿದ್ದಿದ್ದವು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಗಾಯಾಳುಗಳು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಎಲ್ಲರನ್ನೂ ಹೊರಗೆ ತೆಗೆದು ಆಟೊದಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು' ಎಂದು ಅವರು ತಿಳಿಸಿದರು.

ಅವಘಡ ಸಂಭವಿಸಿದ್ದ ಶಿವಾಜಿನಗರ ಬಸ್ ನಿಲ್ದಾಣ ಎದುರಿನ ಕಟ್ಟಡ

'ಟ್ಯಾಂಕ್ ಅಳವಡಿಕೆಯಲ್ಲಿ ನ್ಯೂನತೆ': 'ಮೂರು ಅಂತಸ್ತಿನ ಕಟ್ಟಡದ ಛಾವಣಿಯಲ್ಲಿ ಇತ್ತೀಚೆಗಷ್ಟೇ ಮತ್ತೊಂದು ಮನೆ ನಿರ್ಮಿಸಲಾಗಿದೆ. ಈ ನಾಲ್ಕು ಅಂತಸ್ತಿನ ಕಟ್ಟಡದ ಚಾವಣಿಯಲ್ಲಿ ನಾಲ್ಕು ಕಂಬಗಳನ್ನು ನಿರ್ಮಿಸಿ, ಅದರ ಮೇಲೆ ಕಾಂಕ್ರಿಟ್ ಹಾಕಿ ನೀರಿನ ಟ್ಯಾಂಕ್ ಇರಿಸಲಾಗಿದೆ. ಇದೇ ಕಾಂಕ್ರಿಟ್ ಕಂಬಗಳು, ನೀರಿನ ಟ್ಯಾಂಕ್ ಸಮೇತ ಕುಸಿದು ಬಿದ್ದು ಅವಘಡ ಸಂಭವಿಸಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, 'ನೀರಿನ ಟ್ಯಾಂಕ್ ನಿರ್ಮಾಣದಲ್ಲಿ ನ್ಯೂನ್ಯತೆ ಕಂಡುಬಂದಿದೆ. ಕಟ್ಟಡದ ಮಾಲೀಕರು ಹಾಗೂ ನಿರ್ವಹಣೆ ಮಾಡುತ್ತಿದ್ದವರ ನಿರ್ಲಕ್ಷ್ಯ ಎದ್ದುಕಾಣುತ್ತಿದೆ. ಪ್ರತ್ಯಕ್ಷದರ್ಶಿಯೊಬ್ಬರಿಂದ ಹೇಳಿಕೆ ಪಡೆದು ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

'3ಂಗಳ ಹಿಂದೆ ತಂದೆಯಾಗಿದ್ದರು'

'ನಾಗೇಶ್ವರರಾವ್ ಅವರು ಎರಡು ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದರು. ಅವರ ಪತ್ನಿಗೆ ತಿಂಗಳ ಹಿಂದೆಯಷ್ಟೇ ಮಗುವಾಗಿತ್ತು. ಅವರು ತವರು ಮನೆಯಲ್ಲಿದ್ದರು. ತಂದೆಯಾದ ಸಂಭ್ರಮದಲ್ಲಿದ್ದ ನಾಗೇಶ್ವರರಾವ್, ಮಗುವನ್ನು ನೋಡಲು ಹೋಗಬೇಕಿತ್ತು. ಅಷ್ಟರಲ್ಲೇ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಅರುಳ್ ಕುಟುಂಬ ತಮಿಳುನಾಡಿನಲ್ಲಿದೆ. ಕಮಲ್ ಕುಟುಂಬ, ನೇಪಾಳದಲ್ಲಿದೆ. ಒಂಟಿಯಾಗಿ ನಗರದಲ್ಲಿ ನೆಲೆಸಿದ್ದ ಅರುಳ್ ಹಾಗೂ ಕಮಲ್, ನಿತ್ಯವೂ ಹೊರಗಡೆ ಊಟ ಮಾಡಿ ರಾತ್ರಿ ಮನೆಗೆ ಹೋಗುತ್ತಿದ್ದರು. ಬುಧವಾರವೂ ಎಗ್‌ರೈಸ್ ತಿನ್ನಲು ಹೋಗಿದ್ದರು' ಎಂದು ತಿಳಿಸಿದರು.

ಅಶ್ವಿನಿ ಪುನೀತ್ ರಾಜ್‌ಕುಮಾರ ಅವರು ಅಂಗಾಂಗ ದಾನಿಯ ಕುಟುಂಬದ ಸದಸ್ಯರನ್ನು ಗೌರವಿಸಿದರು. ಜಪಾನಂದ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ದಿನೇಶ್ ಗುಂಡೂರಾವ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ಇದ್ದಾರೆ.

'ಅಂಗಾಂಗ ದಾನ ವ್ಯಾಪಾರ ಆಗಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗಾಂಗ ದಾನ ಪ್ರಕ್ರಿಯೆಯು ಸ್ವಯಂ ಪ್ರೇರಿತವಾಗಿರಬೇಕೇ ಹೊರತು, ವ್ಯಾಪಾರ ಆಗಬಾರದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಾಷ್ಟ್ರೀಯ ಅಂಗಾಂಗ ದಾನ ದಿನ ಆಚರಣೆ ಪ್ರಯುಕ್ತ ಆರೋಗ್ಯ ಇಲಾಖೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಪಾವಗಡದ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಜಪಾನಂದ ಸ್ವಾಮೀಜಿ, 'ದೇಹವೇ ದೇಗುಲ ಎಂದು ಹೇಳಲಾಗಿದೆ. ಹಾಗಾಗಿ, ದೇಹದ ಆರೋಗ್ಯವನ್ನು ಕಾಪಾಡಿಕೊಂಡಲ್ಲಿ ಸಾವಿನ ನಂತರವೂ ಅಂಗಾಂಗಗಳು ಮತ್ತೊಬ್ಬರ ಉಪಯೋಗಕ್ಕೆ ಬರುತ್ತವೆ. ನಮ್ಮ ಧರ್ಮದಲ್ಲಿಯೇ ಅಂಗಾಂಗ ದಾನದ ಚರಿತ್ರೆ ಅಡಗಿದೆ. ಇದಕ್ಕೆ ದೇವರಿಗೆ ಕಣ್ಣುಗಳನ್ನು ದಾನ ಮಾಡಿದ ಬೇಡರ ಕಣ್ಣಪ್ಪ ಸಾಕ್ಷಿ. ನಾವೆಲ್ಲರೂ ಸ್ವಯಂ ಪ್ರೇರಿತರಾಗಿ ಅಂಗಾಂಗ ದಾನ ಮಾಡಬೇಕು' ಎಂದು ತಿಳಿಸಿದರು.

ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಅಂಗಾಂಗ ದಾನ ಮಾಡಿರುವ 151 ಕುಟುಂಬಗಳ ಸದಸ್ಯರನ್ನು ಸನ್ಮಾನಿಸಿದರು.

ಅನಿಶ್ಚಿತ ಮುಂಗಾರಿಗೆ ದಿಕ್ಕೆಟ್ಟ ಕಪ್ಪೆ, ಹಾವುಗಳ ಜೀವನ ಚಕ್ರ

ಒಂದನೇ ಪುಟದಿಂದ...

ಈ ಋತುವಿನಲ್ಲಿ ಹಲವು ಬಗೆಯ ಹಾವುಗಳು ಅವುಗಳ ಆವಾಸಸ್ಥಾನದಲ್ಲೇ ಕಾಣಿಸಿಲ್ಲ ಎಂದು ಸಂಶೋಧಕರು ಆತಂಕ ವ್ಯಕ್ತಪಡಿಸುತ್ತಾರೆ.

'ಜೂನ್ ಮೊದಲ ವಾರದ ವೇಳೆಗಾಗಲೇ ಶೀಲ್ಡ್‌ಟೈಲ್ ಹಾವುಗಳು, ಸ್ಯಾಂಡ್ ಬೋವಾ ಮತ್ತು ಇತರ ಹಾವುಗಳು ಕಾಣಿಸಬೇಕಾಗಿತ್ತು. ಈಗಾಗಲೇ ಅಗಸ್ಟ್ ಬಂದಿದೆ. ಆದರೆ, ಹಾವುಗಳು ಕಾಣಿಸುವುದೇ ಅಪರೂಪವಾಗಿದೆ. ಕಪ್ಪೆಗಳ ಜೀವನ ಚಕ್ರದಲ್ಲಾಗಿರುವ ಬದಲಾವಣೆಯು, ಅವುಗಳನ್ನು ತಿಂದು ಬದುಕುವ ಈ ಹಾವುಗಳ ಮೇಲೆ ಪರಿಣಾಮ ಬೀರಿರಬಹುದು' ಎಂದು ಹುಣಸೂರು ಮೂಲದ ಉರಗತಜ್ಞ ಗೆರ್ರಿ ಮಾರ್ಟಿನ್ ಹೇಳುತ್ತಾರೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪರಿಸರ ವಿಜ್ಞಾನ ಕೇಂದ್ರದ (ಸಿಇಎಸ್) ಕಾರ್ತಿಕ್ ಸುಣಗಾರ್, 'ಪಶ್ಚಿಮ ಘಟ್ಟಗಳಲ್ಲಿನ ಅನಿಯಮಿತ ಮಳೆಯು ಸ್ಥಳೀಯ ಹಾವುಗಳ ಮೇಲೆ ತಕ್ಷಣದ ಪರಿಣಾಮಗಳನ್ನು ಬೀರಿದೆ. ಅನಿಶ್ಚಿತ ಮಳೆಯು ಹೀಗೇ ಹಲವು ವರ್ಷ ಮುಂದುವರಿದರೆ ಅದು ಪರಿಸರ ವಿಜ್ಞಾನದ ಮೇಲೂ ದೊಡ್ಡ ಪರಿಣಾಮಗಳನ್ನು ಬೀರಬಹುದಾದ ಆತಂಕವಿದೆ' ಎಂದು ವಿಶ್ಲೇಷಿಸುತ್ತಾರೆ.

'ಈ ಬೆಳವಣಿಗೆಯು ಇಡೀ ಆಹಾರ ಸರಪಳಿಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಗುರುರಾಜ ಹೇಳುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ವಿಭಾಗದಲ್ಲಿ ಕಪ್ಪೆಗಳ ಕುರಿತು ಅಧ್ಯಯನ ನಡೆಸಿರುವ ಓಂಕಾರ ಪೈ, 'ಈ ಬಾರಿಯ ಮಳೆಗಾಲದಲ್ಲಿ ಕಪ್ಪೆಗಳ ಚಟುವಟಿಕೆ ತೀವ್ರವಾಗಿ ಇಳಿಮುಖವಾಗಿದೆ. ಕೆಲವೇ ಕಪ್ಪೆಗಳ ಸದ್ದು ಮಾತ್ರ ಈ ವರೆಗೆ ಕೇಳಿಬಂದಿದೆ. ಕಪ್ಪೆಗಳ ಸದ್ದಿನಲ್ಲಿನ ವೈವಿಧ್ಯ ಮಾತ್ರವಲ್ಲದೆ ಸಂಖ್ಯೆಯಲ್ಲೂ ಕುಸಿತವಾಗಿದೆ' ಎಂದು ಪರಿಸರದಲ್ಲಿನ ಬೆಳವಣಿಗೆಗಳಿಗೆ ಕನ್ನಡಿ ಹಿಡಿಯುತ್ತಾರೆ.

ಆಗಸ್ಟ್‌ನಲ್ಲಿಯೂ ಮಳೆ ಕೊರತೆಯಾಗಬಹುದು ಎಂದು ಹವಾಮಾನ ಇಲಾಖೆ ಹೇಳಿದೆ. ಇದು ಪರಿಸರದ ಮೇಲೆ ಹೆಚ್ಚಿನ ಪರಿಣಾಮ ಬೀರಬಹುದು ಎಂದು ತಜ್ಞರು ಆತಂಕ ವ್ಯಕ್ತಪಡಿಸುತ್ತಾರೆ.

ಬಿಬಿಎಂಪಿ 45 ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 45 ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿ ಹಲವು ಕಡತಗಳನ್ನು ವಶಪಡಿಸಿಕೊಂಡಿದ್ದಾರೆ.

45 ತಂಡಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಬಿಬಿಎಂಪಿಯ ಕಂದಾಯ ಮತ್ತು ನಗರ ಯೋಜನಾ ಕಚೇರಿಗಳಲ್ಲಿನ ಹಲವಾರು ಕಡತಗಳನ್ನು ಪರಿಶೀಲಿಸಿದರು.

ಸಾರ್ವಜನಿಕರಿಂದ ಬಿಬಿಎಂಪಿ ಅಧಿಕಾರಿಗಳ ಬಗ್ಗೆ ವ್ಯಾಪಕ ದೂರುಗಳು ಬಂದಿದ್ದರಿಂದ ಈ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ದೇಶಪೂರ್ವಕವಾಗಿ ಕಡತಗಳನ್ನು ವಿಲೇವಾರಿ ಮಾಡುವಲ್ಲಿ ಬಿಬಿಎಂಪಿ ಸಿಬ್ಬಂದಿ ವಿಳಂಬ ಧೋರಣೆ ಅನುಸರಿಸುತ್ತಾರೆ ಎಂದು ದೂರಲಾಗಿತ್ತು.

ಜಯನಗರ, ವಿಜಯನಗರ, ಬಸವನಗುಡಿ, ಬ್ಯಾಟರಾಯನಪುರ, ಯಲಹಂಕ, ವಿದ್ಯಾರಣ್ಯಪುರ, ಮಹದೇವಪುರ, ಮಲ್ಲೇಶ್ವರ, ಎಂ.ಜಿ. ರಸ್ತೆ ಸೇರಿದಂತೆ ವಿವಿಧೆಡೆ ಇರುವ ಕಂದಾಯ ಅಧಿಕಾರಿ (ಆರ್‌ಒ) ಮತ್ತು ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ.

ಹಲವು ಕಡತಗಳು ಮತ್ತು ದಾಖಲೆ ಇಲ್ಲದ ಹಣವನ್ನು ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಜಾಜಿನಗರದ ಕಂದಾಯ ಕಚೇರಿಯಲ್ಲಿ ಖುದ್ದಾಗಿ ಪರಿಶೀಲನೆ ನಡೆಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಕಡತಗಳ ಪರಿಶೀಲಿಸಿ, ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಜತೆಗೆ, ಅರ್ಜಿ ಸಲ್ಲಿಸಿರುವವರಿಗೂ ದೂರವಾಣಿ ಕರೆ ಮಾಡಿ ಸಮಸ್ಯೆಗಳನ್ನು ಆಲಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಿಜಯನಗರದ ಕಂದಾಯ ಕಚೇರಿಯಲ್ಲಿ ಕಚೇರಿಯ ಕಡತಗಳನ್ನು ಪರಿಶೀಲನೆ ನಡೆಸಿದ ಲೋಕಾಯುಕ್ತರು, ಇನ್ನೆರಡು ದಿನಗಳಲ್ಲಿ ಸರಿಯಾದ ದಾಖಲೆ ಕೊಡದಿದ್ದರೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಕಡತಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಲೋಕಾಯುಕ್ತರು ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸುವ ಸಾಧ್ಯತೆಗಳಿವೆ.

ಉಪಲೋಕಾಯುಕ್ತ ಕೆ.ಎನ್. ಫಣೀಂದ್ರ, ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್ ಹಾಗೂ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಅವರು ಬ್ಯಾಟರಾಯನಪುರ, ಯಲಹಂಕ, ವಿದ್ಯಾರಣ್ಯಪುರ ವಲಯಗಳಲ್ಲಿ ದಾಳಿ ನಡೆದ ಕಚೇರಿಗಳಿಗೆ ಭೇಟಿ ಕೊಟ್ಟು ದಾಖಲೆ ಪರಿಶೀಲಿಸಿದ್ದಾರೆ. ವಿಲೇವಾರಿಯಾಗದ ಕಡತಗಳು: ವಿವಿಧ ಯೋಜನೆಗಾಗಿ ಸಲ್ಲಿಸುವ ಅರ್ಜಿಗಳನ್ನು ತ್ವರಿತ ಇತ್ಯರ್ಥಕ್ಕೆ ಸಕಾಲ ಯೋಜನೆ ಜಾರಿಗೆ ತರಲಾಗಿದೆ. ಆದರೆ, ನಿಗದಿತ ಅವಧಿ ಮೀರಿದರೂ ವಿಲೇವಾರಿ ಮಾಡದ ನೂರಾರು ಕಡತಗಳು ಲೋಕಾಯುಕ್ತ ಪೊಲೀಸರ ಕೈ ಸೇರಿವೆ.

ಖಾತೆ ವರ್ಗಾವಣೆ, ಖಾತೆ ನೋಂದಣಿ, ಕಟ್ಟಡಗಳಿಗೆ ಪರವಾನಗಿ, ಪ್ರಾರಂಭಿಕ ಪ್ರಮಾಣ ಪತ್ರ, ವಾಣಿಜ್ಯ ಪರವಾನಗಿ, ಜನನ ಮತ್ತು ಮರಣ ಪ್ರಮಾಣ ಪತ್ರ ಮುಂತಾದ ದಾಖಲೆಗಳನ್ನು ದಾಳಿ ವೇಳೆ ಲೋಕಾಯುಕ್ತ ಪೊಲೀಸರು ಪರಿಶೀಲಿಸಿದರು.

ಪಿಎಚ್‌.ಡಿ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ ಆರೋಪ: ಬೆಂಗಳೂರು ವಿವಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್‌.ಡಿ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಹಿನ್ನೆಲೆಯಲ್ಲಿ ಮರುಪರೀಕ್ಷೆ ನಡೆಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಬೆಂಗಳೂರು ವಿ.ವಿಗೆ ನೋಟಿಸ್ ಜಾರಿಗೊಳಿಸಿದೆ.

ಈ ಸಂಬಂಧ ಬೆಂಗಳೂರಿನ ಎಸ್. ಆದಿ ಮಂಜುನಾಥ, ಮಾಲೂರು ತಾಲ್ಲೂಕಿನ ವೀರಕಾಪುತ್ರ ಗ್ರಾಮದ ವಿ.ಎಸ್.ಮುನಿರಾಜ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ರಾಘವಾಪುರ ಗ್ರಾಮದ ಆರ್.ಪಿ.ನವೀನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಹಂಚೇರ ರಾಘವೇಂದ್ರ ಬಸವರಾಜ್ ಅವರು, 'ಹಲವು ಕೇಂದ್ರಗಳಲ್ಲಿ ನಡೆದ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ ನಡೆದಿವೆ. ಪರೀಕ್ಷಾರ್ಥಿಗಳ ಗುರುತಿನ ಚೀಟಿ ಪರಿಶೀಲಿಸದೆ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಕೆಲವು ವಿದ್ಯಾರ್ಥಿಗಳಿಗೆ ಅವರ ಮೊಬೈಲ್‌ಗಳನ್ನು ಪರೀಕ್ಷಾ ಕೇಂದ್ರದ ಒಳಗೆ ಒಯ್ಯಲು ಅವಕಾಶ ನೀಡಲಾಗಿದೆ. ಇವರೆಲ್ಲಾ ತಮ್ಮ ಮೊಬೈಲ್‌ಗಳಲ್ಲಿ ಉತ್ತರಗಳನ್ನು ಹುಡುಕಿ ಬರೆದಿದ್ದಾರೆ.'

ಜತೆಗೆ ಈಗಾಗಲೇ ಪಿಎಚ್‌.ಡಿ ಮಾಡುತ್ತಿರುವ ವಿದ್ಯಾರ್ಥಿಗಳೂ ಪರೀಕ್ಷಾ ಕೇಂದ್ರಗಳ ಒಳಗೆ ತೆರಳಿ ಅಕ್ರಮಗಳಿಗೆ ಸಹಾಯ ಮಾಡಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿ ಸೇರಿದಂತೆ ಒಟ್ಟು ಆರು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಕೋರಿಕೆ: 'ಕಳೆದ ಏಪ್ರಿಲ್ 13ರಂದು ಪಿಎಚ್‌.ಡಿ ಪ್ರವೇಶಕ್ಕೆ ನಡೆಸಲಾದ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿರುವ ಕಾರಣ ಮರುಪರೀಕ್ಷೆ ನಡೆಸಬೇಕು ಎಂದು ವಿವಿ ಕುಲಪತಿಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ.

ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಮರುಪರೀಕ್ಷೆ ನಡೆಸುವಂತೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಗ್ಯಾರಂಟಿಗಳಿಗೆ ಪರಿಶಿಷ್ಟರ ಹಣ; ಹೋರಾಟಕ್ಕೆ ಎಎಪಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಬಾರದು. ಆ.5 ರ ಒಳಗೆ ಸರ್ಕಾರ ನಿರ್ಧಾರ ವಾಪಸ್ ಪಡೆಯದಿದ್ದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಆಮ್ ಆದ್ಮಿ ಪಕ್ಷದ ಪರಿಶಿಷ್ಟ ಘಟಕದ ಅಧ್ಯಕ್ಷ ಪುರುಷೋತ್ತಮ್ ಹೇಳಿದರು.

ಪರಿಶಿಷ್ಟರ ಅಭಿವೃದ್ಧಿಗಾಗಿ ನಿಗದಿ ಮಾಡಿರುವ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸುವುದು ನಿಯಮಬಾಹಿರ. ಇದು ದಲಿತ ವಿರೋಧಿ ನೀತಿ. ಭರವಸೆಗಳನ್ನು ಈಡೇರಿಸಲು ಬೇರೆ ಮೂಲಗಳಿಂದ ಹಣ ಪಡೆಯಬೇಕು. 14 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇಂತಹ ದ್ರೋಹ ನಿರೀಕ್ಷಿಸಿರಲಿಲ್ಲ. ಗ್ಯಾರಂಟಿ ಅನುಷ್ಠಾನದಿಂದ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ. ಸರ್ಕಾರ ಉದ್ಯೋಗ, ಶಿಕ್ಷಣ, ಆರೋಗ್ಯದ ಕಡೆ ಒತ್ತು ಕೊಡಬೇಕು ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಪಕ್ಷದ ಉಪಾಧ್ಯಕ್ಷ ಸುರೇಶ ರಾಥೋಡ್ ಮಾತನಾಡಿ, ಚಿತ್ರದುರ್ಗದಲ್ಲಿ ಕಲುಷಿತ ನೀರು ಸೇವನೆ ಅತ್ಯಂತ ಗಂಭೀರ ವಿಚಾರ, ಕವಾಡಿಗರ ಕಾಲೊನಿಯಲ್ಲಿ ನಡೆದಿರುವ ಘಟನೆ ಕುರಿತು ವಸ್ತುಸ್ಥಿತಿ ಮಾಹಿತಿ ಸಂಗ್ರಹಿಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಕೆಲಸಕ್ಕೆ ಅಡ್ಡಿ, ಕೊಲೆ ಯತ್ನದ ಪ್ರಕರಣ ದಾಖಲು

ಕಾನ್‌ಸ್ಟೆಬಲ್ ಮೇಲೆ ಮಚ್ಚಿನಿಂದ ಹಲ್ಲೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಆಫ್ರಿದ್ ಖಾನ್

ಬೆಂಗಳೂರು: ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಆಫ್ರಿದ್ ಖಾನ್‌ನನ್ನು (27) ಬಂಧಿಸಲಾಗಿದೆ.

'ಜಗಜೀವನ್‌ರಾಮ್ ನಗರ ನಿವಾಸಿ ಆಫ್ರಿದ್ ಖಾನ್, ಅಪರಾಧ ಹಿನ್ನೆಲೆಯುಳ್ಳ. ಈತನ ವಿರುದ್ಧ ಐದು ಪ್ರಕರಣಗಳು ದಾಖಲಾಗಿವೆ. ಜೈಲಿನಲ್ಲಿದ್ದ ಈತ ಇತ್ತೀಚೆಗಷ್ಟೇ ಜಾಮೀನು ಮೇಲೆ ಹೊರಬಂದಿದ್ದ. ಕಾನ್‌ಸ್ಟೆಬಲ್‌ಗಳಿಬ್ಬರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಇದೀಗ ಪುನಃ ಈತನನ್ನು ಬಂಧಿಸಲಾಗಿದೆ. ಆರೋಪಿ ಆಫ್ರಿದ್ ಖಾನ್, ಅನಂತರಾಮಯ್ಯ ಕಾಂಪೌಂಡ್ ಬಳಿ ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದ. ಗಸ್ತಿನಲ್ಲಿದ್ದ ಶಿವಪ್ರಸಾದ್ ಧನರೆಡ್ಡಿ ಹಾಗೂ ವಿಜಯ್‌ಕುಮಾರ್, ಆಫ್ರಿದ್ ಖಾನ್‌ನನ್ನು ತಡೆದು ಪ್ರಶ್ನಿಸಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ' ಎಂದು ತಿಳಿಸಿದರು.

'ಪೊಲೀಸರೇ, ನನಗೆ ಪದೇ ಪದೇ ತೊಂದರೆ ಕೊಡುತ್ತಿದ್ದೀರಾ. ಇನ್ನೊಮ್ಮೆ ನನ್ನ ತಂಟೆಗೆ ಬರದಂತೆ ಮಾಡುತ್ತೇನೆ' ಎಂದು ಕೂಗಾಡಿದ್ದ ಆರೋಪಿ, ಬೆನ್ನ ಹಿಂದೆ ಶರ್ಟ್ ಒಳಗೆ ಇಟ್ಟುಕೊಂಡಿದ್ದ ಮಚ್ಚು ಹೊರಗೆ ತೆಗೆದಿದ್ದ. ಕಾನ್‌ಸ್ಟೆಬಲ್ ಶಿವಪ್ರಸಾದ್ ಅವರ ತಲೆಗೆ ಮಚ್ಚಿನಿಂದ ಹೊಡೆದಿದ್ದ. ವಿಜಯ್‌ಕುಮಾರ್ ಅವರಿಗೆ ಮಚ್ಚಿನಿಂದ ಹೊಡೆಯಲು ಹೋಗಿದ್ದ. ಅವರು ಕೈ ಅಡ್ಡ ಹಿಡಿದಿದ್ದರು. ಕೈಗೆ ಪೆಟ್ಟಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಇಬ್ಬರೂ ಕಾನ್‌ಸ್ಟೆಬಲ್‌ಗಳು, ಹೊಯ್ಸಳ ಗಸ್ತು ವಾಹನ ಸಿಬ್ಬಂದಿ ಸಹಾಯದಿಂದ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದರು. ಸರ್ಕಾರಿ ಕೆಲಸಕ್ಕೆ ಅಡ್ಡಿ ಹಾಗೂ ಕೊಲೆ ಯತ್ನ ಪ್ರಕರಣದಲ್ಲಿ ಆಫ್ರಿದ್ ಖಾನ್‌ನನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಬೆನ್ನಟ್ಟಿ ಕಾರಿನ ಕನ್ನಡಿ ಒಡೆದಿದ್ದವ ವಶಕ್ಕೆ

ಬೆಂಗಳೂರು: ಕಾರನ್ನು ಬೆನ್ನಟ್ಟಿ ಕನ್ನಡಿ ಒಡೆದಿದ್ದ ಆರೋಪದಡಿ ಬೈಕ್ ಸವಾರರೊಬ್ಬರನ್ನು ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರದ ಪ್ರಮುಖ ರಸ್ತೆಯೊಂದರಲ್ಲಿ ನಡೆದಿರುವ ಘಟನೆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಸವಾರನ ವಿರುದ್ಧ ಕ್ರಮ ಜರುಗಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದರು. ಇದರ ಬೆನ್ನಲ್ಲೇ ಪೊಲೀಸರು, ಸವಾರನನ್ನು ಪತ್ತೆ ಮಾಡಿ ಬೈಕ್ ಜಪ್ತಿ ಮಾಡಿದ್ದಾರೆ.

'ಮಿಸ್ಟರ್ ಕ್ರೇಜಿ' ಹೆಸರಿನಲ್ಲಿ ಖಾತೆ ಹೊಂದಿರುವ ಸವಾರ, ಪ್ರಾಣಿಯೊಂದರ ತಲೆಯಾಕಾರದ ಹೆಲ್ಮೆಟ್ ಧರಿಸಿ ಬೈಕ್‌ನಲ್ಲಿ ಹೊರಟಿದ್ದ. ಸಿಗ್ನಲ್‌ನಲ್ಲಿ ಮುಂದಕ್ಕೆ ಹೋಗುವಾಗ, ಸಿಗ್ನಲ್ ಜಂಪ್ ಮಾಡಿದ್ದ ಕಾರೊಂದು ಅತೀ ವೇಗವಾಗಿ ಹೋಗಿತ್ತು. ಇದರಿಂದಾಗಿ ಸವಾರ, ಕಾರು ಬೆನ್ನಟ್ಟಿದ್ದ. ಅತೀ ವೇಗವಾಗಿ ಬೈಕ್ ಚಲಾಯಿಸಿ, ಕಾರಿನ ಪಕ್ಕದಲ್ಲಿ ಹೋಗಿ ಕೈಯಿಂದ ಕನ್ನಡಿ ಒಡೆದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

75 Azadi Ka Amrit Mahotsav

सत्यमेव जयते

G20 भारत 2023 INDIA
वसुधैव कुटुम्बकम्
ONE EARTH • ONE FAMILY • ONE FUTURE

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ – 122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ ಸಿ–ಪೇಸ್/ಎಸ್‌ಟಿಕೆ–6/2023/03/181 ದಿನಾಂಕ: 12.07.2023

ಉಲ್ಲೇಖ:

(1) ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ 351 ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ಎಸ್‌ಆರ್‌ಎನ್	ಸಿಐಎನ್	ಕಂಪನಿ ಹೆಸರು
1	AA2288354	U72200KA2013PTC071963	3ಡಿ–ಐಪಿ ಸೆಮಿಕಂಡಕ್ಟರ್ಸ್ ಪ್ರೈವೇಟ್ ಲಿಮಿಟೆಡ್
2	F46860219	U45401KA2007PTC044793	ಎಎಆರ್ ಪಿಇಇ ಇಂಟೀರಿಯರ್ ಫಿಟ್ಟಿಂಗ್ಸ್ ಪ್ರೈವೇಟ್ ಲಿಮಿಟೆಡ್
3	F45774569	U72200KA1984PTC006429	ಆರ್ಕಯರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
4	F60433463	U74999KA2016PTC095885	ಆವಾಸ್ ಹೋಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
5	AA2468955	U72900KA2016PTC096351	ಆಕ್ಟಿವೆಕೈಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
6	AA2677870	U72900KA2019PTC129315	ಆ್ಯಡ್‌ಆ್ಯಪ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
7	F28769479	U72900KA2020PTC135137	ಎಡಿಜಿಎಸ್‌ಎಲ್ ಪ್ರೈವೇಟ್ ಲಿಮಿಟೆಡ್
8	F25174962	U72900KA2020PTC138358	ಎಡಿಎನ್‌ಸಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
9	F60301819	U72900KA2019OPC121230	ಏಕಿನ್ ವೆಂಚರ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
10	F43491885	U36990KA2021PTC150807	ಏಕ್ವಸ್ ಸ್ಟೆರ್ಲಿಂಗ್ ಪ್ಯಾಕೇಜಿಂಗ್ ಪ್ರೈವೇಟ್ ಲಿಮಿಟೆಡ್
11	F60867207	U72900KA2017PTC106818	ಅಲ್ವೈನ್ ಇನ್ಫೋಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
12	F56542442	U74900KA2011PTC058518	ಆಲ್ಟಸ್ ಇಕೊ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
13	AA2793875	U74999KA2017PTC106259	ಅನೇರಿ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್
14	AA2646022	U80903KA2021PTC152645	ಎಎನ್‌ಟಿ ಎಜುಕೇಶನ್ ಪ್ರೈವೇಟ್ ಲಿಮಿಟೆಡ್
15	AA3078526	U40101KA2009PTC050773	ಅಪೆಕ್ಸ್ ಹೈಡ್ರೊ ಜೆನ್‌ಪವರ್ ಪ್ರೈವೇಟ್ ಲಿಮಿಟೆಡ್
16	AA2852616	U93090KA2019OPC120461	ಅಕ್ವಟೇರಿಯನ್ ರೆಸ್ಟೊ ಸರ್ವೀಸಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
17	F58735598	U45201KA2010PTC055104	ಅರಿಸ್ಟೊ ವಿಲ್ಲಾಸ್ ಪ್ರೈವೇಟ್ ಲಿಮಿಟೆಡ್
18	F60827698	U45400KA2019PTC124108	ಆರ್ಯಂಟ್ ಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್
19	F30888176	U40300KA2018PTC117760	ಏಟ್ರಿಯಾ ರೂಫ್‌ಟಾಪ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್
20	F30665079	U40300KA2019PTC120270	ಏಟ್ರಿಯಾ ವಿಂಡ್ ಪವರ್ (ಕೆಆರ್3) ಪ್ರೈವೇಟ್ ಲಿಮಿಟೆಡ್
21	F56846322	U74140KA2014PTC073015	ಆಡಿಸ್‌ಪಾಯಿಂಟ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
22	F58531450	U74999KA2020PTC141862	ಓಂ ಪೂಜಾಸ್ ಪ್ರೈವೇಟ್ ಲಿಮಿಟೆಡ್
23	F60820925	U01403 KA2007PTC042404	ಎವಿಎ ಸೀಡ್ಸ್ ಪ್ರೈವೇಟ್ ಲಿಮಿಟೆಡ್
24	F60526415	U73200KA2012PTC064440	ಅವೆಶ್ವಾಜೆನ್ ಬಯೋಫಾರ್ಮಾಸ್ಯೂಟಿಕಲ್ಸ್ ಪ್ರೈವೇಟ್ ಲಿಮಿಟೆಡ್
25	F60665411	U65190KA2021PTC155204	ಅವಿರತ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್
26	F60959491	U80903 KA2009PTC051484	ಬೆಂಗಳೂರು ಕ್ವಾಲಿಟಿ ಎಜುಕೇಶನ್ ಪ್ರೈವೇಟ್ ಲಿಮಿಟೆಡ್
27	F60462058	U74999KA2019PTC129885	ಬ್ಯಾರೆಕ್ಸ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್
28	F60417821	U72200KA2014PTC073798	ಬೇಮ್ಯಾಪ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
29	F60451077	U45202KA1994PTC016737	ಬೆಹಾಗ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್
30	F60056553	U15137KA2013PTC072493	ಬೆಳಗಾವಿ ಫುಡ್ಸ್ ಪ್ರೈವೇಟ್ ಲಿಮಿಟೆಡ್
31	F35351956	U45201KA2020PTC135385	ಬೆಳಗು ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್
32	F60744430	U70200KA2017PTC099404	ಭೀಮ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
33	F60399201	U15100KA2021PTC146858	ಬಿಕ್ವಾಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
34	F60652609	U72502KA2018PTC110856	ಬಿಟ್‌ಹಾಪ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
35	AA2888123	U70100KA2018PTC115178	ಬ್ಲ್ಯಾಕ್‌ಲೈಟ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್
36	F60302056	U60221KA2020PTC135788	ಬಿಎಲ್‌ಸಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
37	F44529824	U74993KA2018PTC113205	ಬ್ಲಾಬ್ ಅನಾಲೈಟಿಕ್ಸ್ ಪ್ರೈವೇಟ್ ಲಿಮಿಟೆಡ್
38	AA2765846	U45100KA2020PTC131381	ಬ್ಲ್ಯೂ ಅರ್ಬನ್ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್
39	AA3080773	U74999KA2017PTC104506	ಬುಕ್‌ಲೈಫ್‌ಇನ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
40	F60301561	U60232KA2020PTC138792	ಬಿಡಬ್ಲ್ಯುಸಿ ಗ್ರೂಪ್ ಪ್ರೈವೇಟ್ ಲಿಮಿಟೆಡ್
41	F14678262	U74990KA2019OPC121853	ಕ್ಯಾಮಿಹ್ ಸ್ಟುಡಿಯೋ (ಒಪಿಸಿ) ಪ್ರೈವೇಟ್ ಲಿಮಿಟೆಡ್
42	F60890993	U85100KA2012PTC063264	ಕ್ಯಾನ್ರಿಸ್ ಫಾರ್ಮಾ ಇಂಡಿಯಾ ಪ್ರೈವೇಟ್ ಲಿಮಿಟೆಡ್
43	F60853108	U74999KA2021PTC146173	ಕ್ಯಾಪ್ಚರ್ ಇಲೆವೇಟರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
44	F39373188	U74140KA2008PTC046753	ಸಿ–ಡ್ರೈವ್ ಹೆಚ್‌ಆರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
45	F28029809	U74900KA2016FTC086878	ಸೆಂಟಿಗೊ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
46	F33879818	U72200KA2013PTC071674	ಸಿಎಫ್‌ಎ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
47	F26634907	U74999KA2017PTC101695	ಚೇಸಿಂಗ್ ಪರ್ಫೆಕ್ಷನ್ ಇವೆಂಟ್ಸ್ ಪ್ರೈವೇಟ್ ಲಿಮಿಟೆಡ್
48	F60921699	U51909KA2019PTC128103	ಚಿವ್ಡಾ ಎಂಪವರ್ ಪ್ರೈವೇಟ್ ಲಿಮಿಟೆಡ್
49	F58971334	U65992KA1999PTC026090	ಚಿನ್ಮಯ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್
50	F60487956	U74140KA2008PTC046340	ಕ್ರಿಯೋಸ್ ಮ್ಯಾನೇಜ್‌ಮೆಂಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
51	F50530112	U72200KA2015PTC084668	ಸಿಎಲೊರ್ಫೊಯಿಟ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್
52	F55722037	U72900KA2020PTC132437	ಕ್ಲೌಡ್‌ವೈಬ್ರಂಟ್ ಪ್ರೈವೇಟ್ ಲಿಮಿಟೆಡ್
53	F60471299	U85110KA2015PTC082105	ಕ್ಲುಡಾಕ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್
54	F22248900	U72200KA2020PTC131819	ಕೋಡ್‌ಡ್ರಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
55	F60490133	U74999KA2017PTC108998	ಕಾಗ್ನಿವೊಯೇಜ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
56	F51622579	U80904KA2020PTC134758	ಕೊಲ್ಲ್ಯಾರ್ನ್ ಎಜುಕೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
57	F59615971	U74999KA2019PTC129079	ಕಲೆಕ್ಟಿವ್ ಫುಡ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
58	F18760157	U45309KA2019OPC129155	ಕಲೆಕ್ಟಿವ್‌ಸ್ಪೇಸ್ ಸುಡಿಯೋಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
59	F60423068	U74999KA2018PTC110476	ಕೊಮೆಟ್‌ಕ್ಲೌಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
60	F43542083	U74999KA2017PTC106504	ಕೊನ್ಯಾಟಸ್ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
61	F58603929	U80300KA2021PTC153994	ಕಾನ್ಫಿಯಾನ್ಸ್ ವಿಸ್ಡಂ ಪ್ರೈವೇಟ್ ಲಿಮಿಟೆಡ್
62	AA2797342	U74999KA2019PTC122208	ಕಾನ್‌ಸ್ಟೈಂ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
63	F16064198	U74999KA2017PTC106286	ಕಾಪರ್ ಪ್ಲೇಟ್ಸ್ ಪ್ರೈವೇಟ್ ಲಿಮಿಟೆಡ್
64	F59758615	U72900KA2022PTC156487	ಕ್ರೆಸೆಂಡೊ ಬಿಜನೆಸ್ ಸರ್ಕಲ್ ಪ್ರೈವೇಟ್ ಲಿಮಿಟೆಡ್
65	F60588845	U72200KA2017PTC102474	ಡ್ಯಾಬ್ಲೆ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
66	AA2384885	U15549KA2016PTC098484	ಡಾಮ್ಕೊ ಆಗ್ರೊಫುಡ್ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
67	F58305624	U51909KA2017PTC099082	ದಾನ್ವಿಕ್ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
68	F54054531	U72200KA2015PTC081813	ಡೇಟಾಪಾಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
69	F25611948	U24232KA2015PTC078766	ಡೇಸ್ಟಿಂಗ್ ನ್ಯೂಟ್ರಾಸ್ಯೆನ್ಸ್ ಪ್ರೈವೇಟ್ ಲಿಮಿಟೆಡ್
70	F41649781	U70200KA2020PTC133359	ಡಿಇಬಿ ಇನ್ಫ್ರಾ ಹೋಮ್ಸ್ ಪ್ರೈವೇಟ್ ಲಿಮಿಟೆಡ್
71	F60523511	U74900KA2014PTC074038	ಡೆಲ್‌ಮೆಕೊ ಪಂಪ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
72	F29776390	U32100KA2008PTC047827	ಡೆಲ್ಟಾನ್ ಇಲೆಕ್ಟ್ರಿಕ್ ಸ್ವಿಚ್‌ಗಿಯರ್ಸ್ ಪ್ರೈವೇಟ್ ಲಿಮಿಟೆಡ್
73	F43631126	U74210KA2019PTC126970	ಡೆರ್ಟ್ ಲ್ಯಾಬ್ ಪ್ರೈವೇಟ್ ಲಿಮಿಟೆಡ್
74	F22710313	U51909KA2019OPC129659	ಡೆಯುಕ್ಸ್ ಬ್ಯೂಟಿ ಸೆಂಟರ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
75	F40039893	U74999KA2019OPC120826	ದೇವ್‌ಫ್ಯಾಬ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
76	F60856499	U74999KA2019PTC121579	ಡೆಕ್ಸ್‌ಲೆ ಎಪಿ ಸೋಲಾರ್ ಪಾರ್ಕ್ 1 ಪ್ರೈವೇಟ್ ಲಿಮಿಟೆಡ್
77	F60846011	U74999KA2019PTC120397	ಡೆಕ್ಸ್‌ಲೆ ಮಹಾ ಸೋಲಾರ್ ಪಾರ್ಕ್ 1 ಪ್ರೈವೇಟ್ ಲಿಮಿಟೆಡ್
78	F26887075	U36999KA2018PTC119452	ಡೆಕ್ಸ್‌ಲೆ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್
79	F59743096	U92490KA2020PTC138467	ಡಿಜಿಟೆಕೀಸ್ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್
80	F22873269	U63030KA2018PTC119898	ಡಾರ್‌ಬೀಟಲ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್
81	F40264335	U85110KA2021PTC148384	ಡಾ ಭಾರ್ಗವ್ ಸ್ಟೆಮ್‌ಸೆಲ್ ಸೆಂಟರ್ ಪ್ರೈವೇಟ್ ಲಿಮಿಟೆಡ್
82	F60783388	U74999KA2017PTC101876	ಡ್ರೋಬ್ ಪ್ರೈವೇಟ್ ಲಿಮಿಟೆಡ್
83	AA2479110	U74900KA2011PTC057908	ಡಿಎಸ್‌ಆರ್ ಸರ್ವೀಸ್ಡ್ & ವರ್ಚುಯಲ್ ಆಫೀಸ್ ಪ್ರೈವೇಟ್ ಲಿಮಿಟೆಡ್
84	F58973280	U74999KA2022PTC163740	ಡ್ಯುಫ್ರೈ ಬಿಯಾಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
85	F29243136	U74140KA2012PTC065107	ಇ2ಇ ಫೈನಾನ್ಷಿಯಲ್ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
86	F57123267	U67190KA2018PTC111835	ಇಕೊಟ್ರಿಕ್ಸ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
87	F59774323	U31909KA2017PTC106722	ಇಕೊವೈಬ್ ಇಮೊಬಿಲಿಟಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
88	F60338902	U72900KA2021PTC151806	ಎಜುಕೇಶನ್‌ನವ್ ಪ್ರೈವೇಟ್ ಲಿಮಿಟೆಡ್
89	F23339203	U80902KA2018PTC116527	ಏಕಂ ಲರ್ನಿಂಗ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್
90	F52398476	U72900KA2019PTC127688	ಇಲಾಚಿ ಫಾರ್ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್
91	F58036484	U72200KA2020PTC135928	ಇಲೆಕ್ಟ್ರಾನ್ಸ್ ಮೊಬಿಲಿಟಿ ಪ್ರೈವೇಟ್ ಲಿಮಿಟೆಡ್
92	AA2799377	U85110KA2011PTC059335	ಇಲೈಫ್ ಹೆಲ್ತ್‌ಕೇರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
93	AA2797569	U72900KA2020OPC131241	ಎಂಪ್ಯಕಸ್ ಟೆಕ್ನಾಲಜಿ ಸೊಲ್ಯೂಷನ್ಸ್ ಲ್ಯಾಬ್ ಇಂಡಿಯಾ (ಒಪಿಸಿ) ಪ್ರೈವೇಟ್ ಲಿಮಿಟೆಡ್
94	F60312618	U63090KA2016PTC093760	ಎನಿಗ್ಮಾ ಮಾರ್ಕೆಟ್‌ಪ್ಲೇಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
95	AA2314889	U74900KA2012PTC061950	ಎಂಟ್ರುಪಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
96	F60315298	U72400KA2014PTC074562	ಎನ್ವಿನ್ಸಿಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
97	F60620341	U72900KA2020PTC135222	ಎಪೊಕ್ಯಾಲಿಟಿ ಪ್ರೈವೇಟ್ ಲಿಮಿಟೆಡ್
98	F57917809	U24304KA2016PTC094115	ಎಥಿಕೊಸ್ ಫಾರ್ಮಾಸ್ಯೂಟಿಕಲ್ಸ್ ಪ್ರೈವೇಟ್ ಲಿಮಿಟೆಡ್
99	F55115695	U74999KA2016PTC097051	ಎಥ್ನಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
100	F26993428	U34100KA2022PTC159782	ಇಯೂನಿವರ್ಸ್ ಎಜರ್ಜಿ ಪ್ರೈವೇಟ್ ಲಿಮಿಟೆಡ್
101	F60898426	U74999KA2017PTC107679	ಇವಾಂಜೈಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
102	F59091769	U17121KA1997PTC022591	ಫ್ಯಾಷನ್ ಇಂಪೆಕ್ಸ್ ಪ್ರೈವೇಟ್ ಲಿಮಿಟೆಡ್
103	F53899027	U73100KA2016PTC094775	ಫೆಪ್ಲೆನ್ ಹೆಲ್ತ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್
104	F60585528	U24134KA2006PTC038685	ಫಿಕಸ್ ರಬ್ಬರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್
105	F60372653	U63090KA2019PTC128431	ಫೈಂಡ್ ಮೈ ಔಟಿಂಗ್ ಟೂರ್ಸ್ ಅಂಡ್ ಅಡ್ವೆಂಚರ್ ಪ್ರೈವೇಟ್ ಲಿಮಿಟೆಡ್
106	F58460528	U70200KA2021PTC143678	ಫರ್ಸ್ಟ್ ಕೀ ಕನ್ಸಲ್ಟಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
107	AA2897989	U72200KA2012PTC065789	ಫ್ಲೆಕ್ಸಿಬಲ್ ಟೆಕ್ನಾಲಜಿ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
108	F57130809	U15490KA2020OPC133878	ಫ್ಲೈಯಿಂಗ್ ಜ್ಯೂಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
109	F27179910	U70109KA2017PTC103748	ಎಫ್‌ಎನ್‌ಜಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
110	F59935726	U15490KA2015PTC080749	ಫುಡ್ ಅಂಡ್ ಪ್ಯಾಕೇಜಿಂಗ್ ಇನ್ನೋವೇಶನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
111	F58386590	U74999KA2018PTC110771	ಫಾರೆಸ್ಟ್ ಫ್ಲವರ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
112	F60653342	U55209KA2020PTC131264	ಫೋರ್ಟ್‌ಲೈಟ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
113	F59799999	U74999KA2020PTC140193	ಫೋರ್ಟ್ರೆಸ್ ಜಿಆರ್‌ಸಿಐ ಪ್ರೈವೇಟ್ ಲಿಮಿಟೆಡ್
114	F25400714	U74999KA2016PTC093958	ಕಾವ್‌ಕ್ಟ್ ಇನ್ಫೋಮೀಡಿಯಾ ಪ್ರೈವೇಟ್ ಲಿಮಿಟೆಡ್
115	F57453052	U51909KA2020PTC135200	ಫ್ರೆಷ್2ಬಿ ಪ್ರೈವೇಟ್ ಲಿಮಿಟೆಡ್
116	F44685113	U74999KA2019PTC120965	ಫ್ರೈಡ್‌ಲಿಚ್ ಫುಡ್ಸ್ ಅಂಡ್ ಬೆವರೇಜಸ್ ಪ್ರೈವೇಟ್ ಲಿಮಿಟೆಡ್
117	F60401239	U67190KA2013PTC072297	ಫ್ರಂಟ್‌ಎಡ್ಜ್ ಅಡ್ವೈಸರ್ಸ್ ಪ್ರೈವೇಟ್ ಲಿಮಿಟೆಡ್
118	F53934378	U72200KA2014PTC075218	ಫ್ಯುಜಿಯೊಸ್ಪಾರ್ಕ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
119	F60677796	U74999KA2019PTC125522	ಗ್ಲಾಯುಬೆನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
120	F42454942	U26990KA2021PTC152894	ಗ್ಲೆನ್‌ಆರ್ಮ್ ಪ್ರೈವೇಟ್ ಲಿಮಿಟೆಡ್
121	F44062826	U74999KA2016PTC093385	ಜಿಎನ್‌ಒಎಲ್‌ಎಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
122	F60582491	U17301KA2022PTC158361	ಗೋಲ್ಡನ್‌ಸೀಮ್ಸ್ ಒಎಫ್‌ಬಿ ಅಪಾರೆಲ್ಸ್ ಪ್ರೈವೇಟ್ ಲಿಮಿಟೆಡ್
123	F60362837	U72900KA2022OPC168664	ಗೊಮಿಯೊ ಕನ್ಸಲ್ಟಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
124	F60830213	U24100KA2014PTC073356	ಗುಡ್ ಹರ್ಬ್ ಥೆರಾಪೆಟಿಕ್ಸ್ ಪ್ರೈವೇಟ್ ಲಿಮಿಟೆಡ್
125	F31099799	U64200KA2021PTC143494	ಗೂಗ್ಲಿ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್
126	F25923475	U74999KA2016PTC095144	ಗೊರ್ಡಿಯನ್ ಇನ್ನೋವೇಶನ್ಸ್ ಪ್ರೈವೇಟ್ ಲಿಮಿಟೆಡ್
127	F60848488	U72900KA2019PTC121422	ಗ್ರೀನ್ ಟೋಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
128	F60500477	U74140KA2008PTC048709	ಗ್ರೀನ್‌ಫೀಲ್ಡ್ ಫಿನ್‌ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
129	AA2937684	U51909KA2017PTC108663	ಗ್ರೀನ್‌ಯುಗ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
130	F45469756	U72900KA2020PTC139505	ಗ್ರಿಡ್‌ಲೈನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
131	F58796756	U72200KA2008PTC045432	ಜ್ಞಾನಕೋಶ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
132	F60793478	U74999KA2017PTC104403	ಹಾಜೆರ್ ಖಾನ್ ಡಿಸೈನ್ಸ್ ಪ್ರೈವೇಟ್ ಲಿಮಿಟೆಡ್
133	AA2324072	U72900KA2016FTC094432	ಹ್ಯಾನ್‌ಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
134	F58970724	U24100KA2018PTC117538	ಹೆಲ್ತಿವೆಟ್ ಫಾರ್ಮಾಸ್ಯೂಟಿಕಲ್ಸ್ ಪ್ರೈವೇಟ್ ಲಿಮಿಟೆಡ್
135	F45048881	U28931KA1974PTC002633	ಹೀರಾ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
136	F27809128	U55101KA2019PTC129648	ಹಿಲ್‌ಟಾಪ್ ರಿಕ್ರಿಯೇಶನ್ ಅಂಡ್ ಫಿಟ್ನೆಸ್ ಸ್ಟುಡಿಯೋ ಪ್ರೈವೇಟ್ ಲಿಮಿಟೆಡ್
137	F46030797	U74999KA2018PTC115205	ಹಿಮ್–ಆರೊ ವೆಂಚರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
138	AA3112026	U93090KA2018PTC115093	ಹೆಚ್‌ಪಿಎಫ್ ಫಿಲಮ್ಸ್ ಪ್ರೈವೇಟ್ ಲಿಮಿಟೆಡ್
139	F60312352	U74999KA2019FTC122269	ಹ್ಯುಮನ್ –ರಿಕಗ್ನಿಷನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
140	F60954096	U74900KA2015PTC078119	ಹಮ್ಮಿಂಗ್ ಲೀವ್ಸ್ ಇವೆಂಟ್ಸ್ ಆಫ್ ಲೈಫ್ ಪ್ರೈವೇಟ್ ಲಿಮಿಟೆಡ್
141	F60450384	U74999KA2019PTC122873	ಹೈಫ್ಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
142	AA3255300	U72900KA2020OPC138604	ಐಎಬಿಸಿಡಿ ಟೆಕ್ನಾಲಜೀಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
143	F60381092	U74140KA2008PTC048245	ಐಫಿನ್‌ರೆಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
144	F60572849	U31909KA2016PTC098492	ಐಹ್ಯಾಲೊಜಿಕ್ಸ್ ಇಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್
145	AA2666667	U74999KA2017PTC104519	ಐಎಲ್‌ಎ ಎಪಿಪಿವಿಂಗ್ಜ್ ಇಕಾಮ್‌ಟೆಕ್ ಪ್ರೈವೇಟ್ ಲಿಮಿಟೆಡ್
146	AA2759903	U72200KA2012PTC066617	ಇನ್ಫಾ ಇಂಡಿಯಾ ಇನ್ಫೋಸರ್ವೀಸ್ ಪ್ರೈವೇಟ್ ಲಿಮಿಟೆಡ್
147	F52833936	U74999KA2017PTC104496	ಇನ್ಫಿಯಾನ್ ರಿ ಆಪರೇಶನ್ಸ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
148	F43067396	U74999KA2016PTC095933	ಇಗ್ನಿಷನ್ ಪಾಯಿಂಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್
149	F60545613	U85100KA2019PTC123825	ಇನ್‌ಸ್ಪೈರ್‌ನುಹೆಲ್ತ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
150	F22973192	U72900KA2020PTC137542	ಐಕ್ಯೂಬೆಟ್ಸ್ ಪ್ರೈವೇಟ್ ಲಿಮಿಟೆಡ್
151	AA2597993	U72200KA2008PTC047563	ಐವಿಷನ್ ಇನ್ಫಾರ್ಮೇಶನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
152	AA2470220	U67120KA1998PTC023484	ಜಾಕೊಬ್ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್
153	F60284825	U45201KA2021PTC142896	ಜಗನ್ಮಯ್ ಅಸೋಸಿಯೇಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
154	F25391798	U15549KA2019PTC130726	ಜೇಯ್ಸ್ ಗೌರ್ಮೆಟ್ ಪ್ರೈವೇಟ್ ಲಿಮಿಟೆಡ್
155	F59965970	U92419KA2022PTC161728	ಜೆಜಪ್ಪಿ ಪ್ರೈವೇಟ್ ಲಿಮಿಟೆಡ್
156	F60499746	U52390KA2012PTC064063	ಕಲಾವಿಲಾಸ ಹ್ಯಾಂಡ್‌ಮೇಡ್ ಪ್ರೈವೇಟ್ ಲಿಮಿಟೆಡ್
157	F59078089	U45205KA2014PTC075039	ಕಲ್ಗೀ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್
158	F60804515	U72200KA2014PTC074197	ಕಾಂಪ್ಸ್ ಬಿಜನೆಸ್ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
159	F54818141	U93000KA2018PTC110895	ಕಪ್ಪಾಡ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
160	F26812107	U72900KA2018PTC117793	ಕಸಾಟ್ವಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
161	F60851300	U63020KA2013PTC071281	ಕೌಶಿಕ್ & ಕರಣ್ ಬಿಜನೆಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
162	F59769281	U74994KA2018PTC113409	ಕೆಡಿಎ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
163	F56719156	U93090KA2018PTC118264	ಕೆಲೊನ್‌ಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
164	F60462892	U01110KA2020PTC140225	ಕಿಸಾನ್‌ಬಡ್ಡಿ ಲೈಫ್ ಸೈನ್ಸ್ ಪ್ರೈವೇಟ್ ಲಿಮಿಟೆಡ್
165	F30168660	U67190KA2021PTC150470	ಕಿಯಾ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್
166	AA2308624	U72200KA2020PTC136221	ಕೆಮೀನ್ಸ್ ಎಐ ಪ್ರೈವೇಟ್ ಲಿಮಿಟೆಡ್
167	F60615440	U74999KA2017PTC102050	ಕೊನಾಕ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
168	F60380037	U72900KA2021PTC153582	ಕೂಟ್‌ಲ್ಯಾಬ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
169	F52935889	U74999KA2018PTC114536	ಕೊರ್ಪಿಟ್ ಬಿಜನೆಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
170	F60453479	U15400KA2019PTC124585	ಕೊಟೆರಿ ಕೀರೆಟ್ಸು ಪ್ರೈವೇಟ್ ಲಿಮಿಟೆಡ್
171	F60917895	U72400KA2016PTC086526	ಕ್ರಾಫ್ಟ್‌ಪ್ಲಸ್ ಎಜುಟೆಕ್ ಪ್ರೈವೇಟ್ ಲಿಮಿಟೆಡ್
172	F60490497	U15549KA2018PTC117098	ಕುರುಕ್ ಟಂಡೆ ಪ್ರೈವೇಟ್ ಲಿಮಿಟೆಡ್
173	F28130938	U27200KA2021PTC151194	ಕೆವಿವಿ ರಿಫೈನರಿ ಪ್ರೈವೇಟ್ ಲಿಮಿಟೆಡ್
174	F60333556	U63022KA2021PTC146639	ಲಕ್ಷ್ಮೀ ಪದ್ಮಾವತಿ ಕೋಲ್ಡ್ ಸ್ಟೋರೇಜ್ ಪ್ರೈವೇಟ್ ಲಿಮಿಟೆಡ್
175	AA2474037	U85200KA2018PTC118080	ಲಾಫ್ಟರ್‌ಸಿಟಿ ಪ್ರೈವೇಟ್ ಲಿಮಿಟೆಡ್
176	F43527324	U74999KA2016PTC094597	ಲಾಜಿನ್ ಲೀಗಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
177	F60384070	U80902KA2018PTC117093	ಲರ್ನಿಂಗ್‌ಬೀ ಟೆಕ್ನಾಲಜೀಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
178	F60766300	U93090KA2018PTC115745	ಲೆವೆಲ್ ಅಪ್ ಫಿಲಮ್ಸ್ ಪ್ರೈವೇಟ್ ಲಿಮಿಟೆಡ್
179	F25992017	U85110KA2014PTC072992	ಲೈಫ್ ಆರ್ಗಾನಿಕ್ಸ್ ಭಾರತ ಪ್ರೈವೇಟ್ ಲಿಮಿಟೆಡ್
180	AA2902789	U51909KA2021PLC146682	ಲೈಫ್‌ವೇ ಇನ್ಫೋ ಲಿಮಿಟೆಡ್
181	AA2594427	U31103KA2006PTC039522	ಲೈನ್ ಟೆಕ್ ಇಲೆಕ್ಟ್ರಾನಿಕ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
182	AA2596764	U18109KA2021PTC149556	ಎಲ್‌ಕೆಕೆ ಸೋರ್ಸಿಂಗ್ ಹೌಸ್ ಪ್ರೈವೇಟ್ ಲಿಮಿಟೆಡ್
183	F60392024	U74999KA2020PTC135739	ಲಾಜಿನಿಟಿ ಪ್ರೈವೇಟ್ ಲಿಮಿಟೆಡ್
184	F60568391	U15100KA2017PTC106137	ಮಹಾಲಸಾ ಫುಡ್ಸ್ ಪ್ರೈವೇಟ್ ಲಿಮಿಟೆಡ್
185	AA2400633	U52100KA2018PTC110352	ಮಹಾನ್ವಿತಾ ರಿಟೇಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
186	F60536935	U55204KA2017PTC105586	ಮಲ್ಲಿಗೆ ಸ್ಪಿರಿಟ್ಸ್ ಪ್ರೈವೇಟ್ ಲಿಮಿಟೆಡ್
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.16	0.18	0.15	0.18
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)				
ಮೂಲಭೂತ (ಬೇಸಿಕ್)	11.87*	11.33*	3.66*	37.87
ಡೈಲ್ಯೂಟೆಡ್	11.80*	11.26*	3.65*	37.64

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಜೂನ್ 30, 2023 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಜೂನ್ 30, 2023 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: https://www.bseindia.com,NSE: https://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 03.08.2023

ಆಡಳಿತ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/-
ಶ್ರೀಕೃಷ್ಣನ್ ಎಚ್
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

❦ ಸುಭಾಷಿತ ❦

ಉತ್ತಮ ಸಲಹೆಯು ಮಾಣಿಕ್ಯಕ್ಕಿಂತಲೂ ಅಪರೂಪವಾದದ್ದು.

–ಸಲ್ಮಾನ್ ರಶ್ದಿ

ಅನಧಿಕೃತ ಜಾಹೀರಾತು ಹಾವಳಿ ಶಾಶ್ವತವಾಗಿ ಕೊನೆಯಾಗಲಿ

ಬೆಂಗಳೂರು ನಗರದ ಸಾರ್ವಜನಿಕ ಸ್ಥಳಗಳಲ್ಲಿ ಯಾರು ಯಾವಾಗ ಬೇಕಾದರೂ ಜಾಹೀರಾತು, ಫ್ಲೆಕ್ಸ್ ಪ್ರದರ್ಶಿಸಬಹುದು ಎನ್ನುವಂತಹ ವಾತಾವರಣವಿದೆ. ರಾಜಕೀಯ ಪುಢಾರಿಗಳಂತೂ ಸಾರ್ವಜನಿಕ ಸ್ಥಳಗಳೆಲ್ಲವೂ ತಮ್ಮ ಸ್ವಂತ ಜಾಗ ಎಂಬಂತೆ ಮನ ಬಂದಲ್ಲೆಲ್ಲ ಜಾಹೀರಾತು ಫಲಕಗಳನ್ನು ಅಳವಡಿಸುತ್ತಿದ್ದಾರೆ. ನಾಯಕರ ಜನ್ಮದಿನಕ್ಕೆ ಶುಭ ಕೋರುವುದರಿಂದ ಹಿಡಿದು, ಸಣ್ಣಪುಟ್ಟ ಕಾರ್ಯಕ್ರಮಗಳ ಮಾಹಿತಿ ನೀಡುವವರೆಗೆ ರಸ್ತೆಯ ಇಕ್ಕೆಲಗಳಲ್ಲೂ ಬಣ್ಣ ಬಣ್ಣದ ಫಲಕಗಳನ್ನು ಅಳವಡಿಸುವುದಂತೂ ಶೋಕಿ ಆಗಿಬಿಟ್ಟಿದೆ. ಬೆಂಗಳೂರಿನಲ್ಲಿ ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ಹೆಚ್ಚಾಗಿರುವುದನ್ನು ಕಂಡು ಬೇಸತ್ತ ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿರುದ್ಧ ಕಿಡಿಕಾರಿದೆ. ‘ಇನ್ನು ಮುಂದೆ ನಗರದಲ್ಲಿ ಅಳವಡಿಸಲಾಗುವ ಪ್ರತಿಯೊಂದು ಅನಧಿಕೃತ ಜಾಹೀರಾತು ಫಲಕಕ್ಕೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ತಲಾ ₹ 50 ಸಾವಿರವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಬೇಕಾಗುತ್ತದೆ’ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ವಿಚಾರಣೆ ವೇಳೆ ಹೈಕೋರ್ಟ್ ಎಚ್ಚರಿಕೆ ನೀಡಿದೆ. ರಾಜ್ಯದ ರಾಜಧಾನಿಯಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಪರ್ಯಾಸವೇ ಸರಿ. ಅನಧಿಕೃತ ಜಾಹೀರಾತುಗಳನ್ನು ನಿಯಂತ್ರಿಸಲು ಬಿಬಿಎಂಪಿಯೇ ರೂಪಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದಿದ್ದರೆ, ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಳ್ಳುವ ಸ್ಥಿತಿ ಅಧಿಕಾರಿಗಳಿಗೆ ಬರುತ್ತಿರಲಿಲ್ಲ.

ಸಾರ್ವಜನಿಕ ಪ್ರದೇಶಗಳನ್ನು ಕುರೂಪಗೊಳಿಸುವಂತಹ ಅನಧಿಕೃತ ಜಾಹೀರಾತುಗಳ ಅಳವಡಿಕೆ ತಡೆಯಲು ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು

ಹೈಕೋರ್ಟ್, 2018ರ ಆಗಸ್ಟ್‌ನಲ್ಲೂ ಬೆಂಗಳೂರಿನ ಅನಧಿಕೃತ ಹೊರಾಂಗಣ ಜಾಹೀರಾತುಗಳ ವಿಚಾರವಾಗಿ ಬಿಬಿಎಂಪಿಗೆ ಚಾಟಿ ಬೀಸಿತ್ತು. ಅದರ ಪರಿಣಾಮವಾಗಿ ಇಡೀ ನಗರದ ಅಷ್ಟೂ ಅನಧಿಕೃತ ಜಾಹೀರಾತು ಫಲಕಗಳನ್ನು ಅಧಿಕಾರಿಗಳು ಒಂದೇ ವಾರದಲ್ಲಿ ತೆರವುಗೊಳಿಸಿದ್ದರು. ನ್ಯಾಯಾಲಯದ ಆದೇಶದ ಮೇರೆಗೆ ಬಿಬಿಎಂಪಿ ಕೌನ್ಸಿಲ್ ಸಭೆಯು ‘ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ ಹಾಗೂ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾ- 2018’ ಅನ್ನು ಸರ್ವಾನುಮತದಿಂದ ಅಂಗೀಕರಿಸಿತ್ತು. ಬೆಂಗಳೂರಿನಲ್ಲಿ ವಾಣಿಜ್ಯ ಉದ್ದೇಶದ ಹೋರ್ಡಿಂಗ್‌ಗಳನ್ನು ನಿರ್ಬಂಧಿಸಿದ್ದ ಈ ನಿಯಮವು ಸರ್ಕಾರದ ಅನುಮೋದನೆ ಪಡೆದು ಜಾರಿಯೂ ಆಗಿತ್ತು. ಈ ಎಲ್ಲ ಬೆಳವಣಿಗೆಗಳು ನಡೆದು ಐದು ವರ್ಷ ಕಳೆಯುವಷ್ಟರಲ್ಲಿ ಮತ್ತೆ ಅನಧಿಕೃತ ಜಾಹೀರಾತುಗಳ ಹಾವಳಿ ವಿಪರೀತಕ್ಕೆ ಹೋಗಿದೆ. ಇದಕ್ಕೆ ಸರ್ಕಾರವು 2021ರ ಜುಲೈನಲ್ಲಿ ಜಾರಿಗೊಳಿಸಿದ ‘ಬಿಬಿಎಂಪಿ ಜಾಹೀರಾತು ನಿಯಮ- 2019’ ಕೂಡ ಕಾರಣ. ಇದನ್ನು ಜಾರಿಗೊಳಿಸುವಾಗ ಬೆಂಗಳೂರಿನಲ್ಲಿ ವಾಣಿಜ್ಯ ಉದ್ದೇಶದ ಹೋರ್ಡಿಂಗ್‌ಗಳ ಅಳವಡಿಕೆಗೆ ಇದ್ದ ನಿರ್ಬಂಧವನ್ನು ಸಡಿಲಗೊಳಿಸಲಾಗಿತ್ತು. ನಿರ್ದಿಷ್ಟ ಎತ್ತರದವರೆಗಿನ ಹೋರ್ಡಿಂಗ್‌ಗಳ ಅಳವಡಿಕೆಗೆ ಮತ್ತೆ ಅವಕಾಶ ಕಲ್ಪಿಸಲಾಗಿತ್ತು. ಬಿಬಿಎಂಪಿಯಿಂದ ಅನುಮತಿ ಪಡೆಯದೇ ಸಾರ್ವಜನಿಕ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸುವುದಕ್ಕೆ ಈಗಲೂ ಅವಕಾಶವಿಲ್ಲ. ಆದರೂ ಅನಧಿಕೃತ ಜಾಹೀರಾತುಗಳಂತೂ ನಗರದಾದ್ಯಂತ ಕಣ್ಣಿಗೆ ರಾಚುವಂತೆ ಕಾಣಿಸುತ್ತಿವೆ. ನಾಲ್ಕು ತಿಂಗಳುಗಳಿಂದ ಈಚೆಗೆ ಅನಧಿಕೃತವಾಗಿ ಸುಮಾರು 60 ಸಾವಿರ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದ್ದರೂ ಬರೀ 134 ದೂರುಗಳು ದಾಖಲಾಗಿವೆ. ಅದರಲ್ಲೂ ಎಫ್‌ಐಆರ್ ದಾಖಲಿಸಿರುವುದು 40 ಪ್ರಕರಣಗಳಲ್ಲಿ ಮಾತ್ರ. ಜಾಹೀರಾತು ಹಾವಳಿಯ ನಿಯಂತ್ರಣದ ಬಗ್ಗೆ ಅಧಿಕಾರಿಗಳಿಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದು ಇದರಿಂದ ಸ್ಪಷ್ಟ. ಸಾರ್ವಜನಿಕರಿಂದ ದೂರು ಬಂದ ಬಳಿಕವೂ ಅನಧಿಕೃತ ಜಾಹೀರಾತುಗಳ ತೆರವಿಗೆ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳದ ಬಹಳಷ್ಟು ಉದಾಹರಣೆಗಳಿವೆ. ರಾಜಕಾರಣಿಗಳ ಬೆಂಬಲಿಗರು ಅಥವಾ ರಾಜಕೀಯ ಪ್ರಭಾವ ಹೊಂದಿರುವ ವ್ಯಕ್ತಿಗಳೇ ಇಂತಹ ಉಲ್ಲಂಘನೆ ನಡೆಸುತ್ತಿರುವುದು ಗುಟ್ಟಿನ ವಿಷಯವೇನಲ್ಲ. ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ತಡೆಯುವಲ್ಲಿ ಬಿಬಿಎಂಪಿ ಅಧಿಕಾರಿಗಳು ಅಸಹಾಯಕರಾಗುವುದಕ್ಕೆ ಇದು ಕೂಡಾ ಕಾರಣ.

ಬೆಂಗಳೂರಿನ ಕೆಲವು ಜಂಕ್ಷನ್‌ಗಳ ಬಳಿ ಇರುವ ಜಾಹೀರಾತು ಫಲಕಗಳು ವಾಹನ ಸವಾರರಿಗೆ ಕಿರಿಕಿರಿಯನ್ನು ಉಂಟುಮಾಡುತ್ತಿವೆ. ಇನ್ನು ಕೆಲವು ಕಡೆ ಹೋರ್ಡಿಂಗ್‌ಗಳಿಗೆ ಅಡ್ಡವಾಗುತ್ತವೆ ಎಂಬ ಕಾರಣಕ್ಕೆ ಮರಗಳನ್ನು ಹಾಗೂ ಕೊಂಬೆಗಳನ್ನು ಕಡಿದ ಪ್ರಸಂಗಗಳೂ ಇವೆ. ಕಾರ್ಯಕ್ರಮ ಪ್ರಚಾರದ ಸಲುವಾಗಿ ಅಳವಡಿಸುವ ಜಾಹೀರಾತು ಫಲಕಗಳು, ಕಾರ್ಯಕ್ರಮ ಮುಗಿದು ತಿಂಗಳು ಉರುಳಿದರೂ ತೆರವಾಗುವುದೇ ಇಲ್ಲ. ಇವುಗಳಿಂದ ನಗರದ ಸೌಂದರ್ಯ ಹಾಳಾಗುವುದರ ಜೊತೆಗೆ ಕಸದ ಸಮಸ್ಯೆಯೂ ಉಲ್ಬಣವಾಗುತ್ತಿದೆ. ಈಗಲಾದರೂ ಸರ್ಕಾರ ಹಾಗೂ ಬಿಬಿಎಂಪಿ ಎಚ್ಚೆತ್ತುಕೊಳ್ಳಬೇಕು. ಸಾರ್ವಜನಿಕ ಪ್ರದೇಶಗಳನ್ನು ಕುರೂಪಗೊಳಿಸುವಂತಹ ಅನಧಿಕೃತ ಜಾಹೀರಾತುಗಳ ಅಳವಡಿಕೆ ತಡೆಯಲು ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು. ಮಹಾನಗರವನ್ನು ಸ್ವಚ್ಛ ಮತ್ತು ಸುಂದರವಾಗಿ ಇಟ್ಟುಕೊಳ್ಳಬೇಕಾದ ಹೊಣೆ ಹೊತ್ತ ಬಿಬಿಎಂಪಿ ಅಧಿಕಾರಿಗಳು ಈ ಕರ್ತವ್ಯಪಾಲನೆಯಲ್ಲಿ ವಿಫಲರಾದರೆ ಅವರಿಗೂ ದಂಡ ವಿಧಿಸಿ, ಅವರನ್ನು ಶಿಸ್ತುಕ್ರಮಕ್ಕೆ ಒಳಪಡಿಸಲು ಅವಕಾಶ ಕಲ್ಪಿಸುವಂತೆ ನಿಯಮಗಳಿಗೆ ತಿದ್ದುಪಡಿ ತರಬೇಕು. ಅನಧಿಕೃತ ಜಾಹೀರಾತುಗಳ ಬಗ್ಗೆ ಸಾರ್ವಜನಿಕರು ಬಿಬಿಎಂಪಿಗೆ ಆನ್‌ಲೈನ್‌ನಲ್ಲೇ ದೂರು ನೀಡಲು ಮತ್ತು ಅವುಗಳನ್ನು ತೆರವುಗೊಳಿಸಿದ ಬಗ್ಗೆ ದೂರುದಾರರಿಗೆ ಮಾಹಿತಿ ನೀಡುವುದನ್ನು ಖಾತರಿಪಡಿಸಲು ವ್ಯವಸ್ಥೆ ರೂಪಿಸಬೇಕು. ಅನಧಿಕೃತ ಜಾಹೀರಾತುಗಳ ಹಾವಳಿಯನ್ನು ಶಾಶ್ವತವಾಗಿ ಕೊನೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ಸಹಬಾಳ್ವೆ ಸಾಧ್ಯವಾಗುತ್ತಿಲ್ಲವೇಕೆ?

ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಸಿಖ್ಖರು ಮತ್ತು ಭಾರತದ ಇತರ ಎಲ್ಲರೂ ಶಾಂತಿಯಿಂದ ಸಹಬಾಳ್ವೆ ನಡೆಸಬೇಕು. ಅದನ್ನು ಹೊರತುಪಡಿಸಿ ಬೇರೆ ಆಯ್ಕೆ ಇಲ್ಲ. ಯಾವುದೇ ಒಂದು ಸಮುದಾಯಕ್ಕೆ ನಷ್ಟವಾದರೆ ಎಲ್ಲ ಸಮುದಾಯಗಳಿಗೂ ನಷ್ಟವಾದಂತೆ ಮತ್ತು ಆ ಮೂಲಕ ಅದು ದೇಶಕ್ಕಾಗುವ ನಷ್ಟವೇ ಸರಿ. ನಮ್ಮೆಲ್ಲರ ಆರ್ಥಿಕ ಅಭಿವೃದ್ಧಿ ಮತ್ತು ಅಭ್ಯುದಯವು ಶಾಂತಿ ಹಾಗೂ ಸೌಹಾರ್ದವನ್ನು ಅವಲಂಬಿಸಿದೆ. ಆಂತರಿಕ ಸಂಘರ್ಷದಲ್ಲಿ ನಿರತವಾಗಿರುವ ಸಮಾಜವು ಬೆಳವಣಿಗೆ ಹೊಂದಲು ಸಾಧ್ಯವಿಲ್ಲ. ಇದನ್ನು ಅರ್ಥಮಾಡಿಕೊಳ್ಳುವುದು ಬಹುತೇಕರಿಗೆ ಕಷ್ಟವಾಗುತ್ತಿರುವುದು ಏಕೆ?

ಸುಮಂತ್ ರಾಮನ್, ವಿಶ್ಲೇಷಕ

ಕಿಡಿನುಡಿ

ರಾಜಕೀಯ ನಾಯಕರು ಭಟ್ಟಂಗಿಗಳಿಗೇ ಆದ್ಯತೆ ನೀಡುತ್ತಾರೆ! ನೀತಿಗಳು ಜನಕಲ್ಯಾಣಕ್ಕೆ ವಿರುದ್ಧವಾಗಿವೆ ಎಂದು ನಿಮಗೆ ಅನ್ನಿಸಿದರೂ ನೀವು ಪಕ್ಷದ ಹಾದಿಯನ್ನೇ ಅನುಸರಿಸಬೇಕೆಂಬ ನಿರೀಕ್ಷೆ ಇರುತ್ತದೆ. ಸ್ವಾತಂತ್ರ್ಯ ದೊರೆತು 75 ವರ್ಷಗಳೇ ಸಂದಿವೆ. ಆದರೆ ನಮ್ಮ ನಾಯಕ ಸಮೂಹ ಮತ್ತು ರಾಜಕೀಯ ವ್ಯವಸ್ಥೆಯು ನಾಯಕತ್ವದ ಲಕ್ಷಣಗಳನ್ನು ಹಾಗೂ ಪ್ರಬುದ್ಧತೆಯನ್ನು ತೋರಿಸುವುದರಿಂದ ಬಹಳ ದೂರ ಉಳಿದಿವೆ.

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 4-8-1998

● ಕಾಶ್ಮೀರಿ ಉಗ್ರರಿಂದ 35 ಜನರ ಕಗ್ಗೊಲೆ

ಶಿಮ್ಲಾ, ಆಗಸ್ಟ್ 3 (ಪಿಟಿಐ)– ಶಂಕಿತ ಕಾಶ್ಮೀರಿ ಉಗ್ರಗಾಮಿಗಳು ಇಂದು ನಸುಕಿನಲ್ಲಿ ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಕಲಾಬನ್ ಶತ್ರುಂದಿ ಗ್ರಾಮದಲ್ಲಿ ಗುಂಡಿನ ಮಳೆಗರೆದು 35 ಜನರನ್ನು ಕಗ್ಗೊಲೆ ಮಾಡಿ, ಇತರ 14 ಜನರನ್ನು ಗಾಯಗೊಳಿಸಿದ್ದಾರೆ.

ಸತ್ತವರಲ್ಲಿ ಬಹುತೇಕರು ಜಮ್ಮು ಮತ್ತು ಕಾಶ್ಮೀರದ ಗಡಿಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ರಸ್ತೆ ಕೆಲಸ ಮಾಡುತ್ತಿದ್ದ ಕಾರ್ಮಿಕರು ಎಂದು ಪೊಲೀಸರು ತಿಳಿಸಿದ್ದಾರೆ.

● ಭ್ರಷ್ಟಾಚಾರ ತಡೆಗೆ ಲೋಕಪಾಲ ಮಸೂದೆ ಮಂಡನೆ

ನವದೆಹಲಿ, ಆಗಸ್ಟ್ 3– ಉನ್ನತಮಟ್ಟದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವ ಸಲುವಾಗಿ ಪ್ರಧಾನಮಂತ್ರಿ, ಸಚಿವರು ಹಾಗೂ ಸಂಸತ್ ಸದಸ್ಯರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಲು ಅವಕಾಶ ನೀಡುವ ಲೋಕಪಾಲ ಮಸೂದೆಯನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಲೋಕಸಭೆಯಲ್ಲಿ ಮಂಡಿಸಿದರು.

50 ವರ್ಷಗಳ ಹಿಂದೆ

ಶನಿವಾರ, 4-8-1973

● ಗೋಧಿ ಸಾಗಾಣಿಕೆಗೆ ಅಡ್ಡಿ 400 ರೈಲು ಸಂಚಾರ ರದ್ದು

ನವದೆಹಲಿ, ಆಗಸ್ಟ್ 3– ರೈಲ್ವೆ ಚಾಲಕರ ಸಾಮೂಹಿಕ ಗೈರುಹಾಜರಿ ಮುಷ್ಕರದ ಮೂರನೇ ದಿನವಾದ ಇಂದು ರಾಷ್ಟ್ರದ ನಾನಾ ವಿಭಾಗಗಳಲ್ಲಿ 400ಕ್ಕೂ ಹೆಚ್ಚು ಪ್ಯಾಸೆಂಜರ್ ರೈಲುಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗೂಡ್ಸ್ ರೈಲುಗಳನ್ನು ರದ್ದು ಮಾಡಿದ ಪರಿಣಾಮ, ಅಭಾವಪೀಡಿತ ಪ್ರದೇಶಗಳಿಗೆ ಹೋಗಬೇಕಾಗಿದ್ದ ಗೋಧಿ ತುಂಬಿದ ರೈಲನ್ನು ಮೊಗಾದಲ್ಲಿ ತಡೆಯಲಾಗಿದೆ. ಗೈರುಹಾಜರಾತಿ ಕಾರಣ, ಎರಡನೇ ದಿನವಾದ ಇಂದು ದಕ್ಷಿಣ ರೈಲ್ವೆ ವಿಭಾಗದಲ್ಲಿ 44 ರೈಲುಗಳನ್ನು ರದ್ದು ಮಾಡಲಾಯಿತು. ಮೈಸೂರು- ಗುಂತಕಲ್ಲು ವಿಭಾಗದಲ್ಲಿ ಬೆಳಿಗ್ಗೆ ವೇಳೆಗೆ 26 ಮೀಟರ್ ಗೇಜ್ ಮತ್ತು 14 ಬ್ರಾಡ್‌ಗೇಜ್ ಪ್ಯಾಸೆಂಜರ್ ರೈಲುಗಳನ್ನು ರದ್ದು ಮಾಡಲಾಗಿತ್ತು.

ಸಂರಕ್ಷಣೆ ನಿಯಮ ಸಡಿಲವಾದರೆ ದುರ್ಬಳಕೆಯ ಸಾಧ್ಯತೆ ಹೆಚ್ಚುತ್ತದೆ

ಅರಣ್ಯ ಸಂರಕ್ಷಣೆಗೆ ಅರ್ಧಚಂದ್ರ?

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ರಾಜ್ಯದ ಹಲವೆಡೆ ಒಂದೇ ವಿಷಯವನ್ನು ಮುಂದಿಟ್ಟುಕೊಂಡು ಸಾಲುಸಾಲು ಪ್ರತಿಭಟನೆಗಳು ನಡೆದಿವೆ. ಅರಣ್ಯ (ಸಂರಕ್ಷಣೆ) ತಿದ್ದುಪಡಿ ಮಸೂದೆ– 2023 ಅನ್ನು ವಿರೋಧಿಸಿ ಪರಿಸರಾಸಕ್ತ ಗುಂಪುಗಳು ತಹಶೀಲ್ದಾರರು ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಆಗ್ರಹಪೂರ್ವಕ ಮನವಿಯನ್ನು ಕಳುಹಿಸುತ್ತಿವೆ. ಈ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದದ್ದೇ ಆದರೆ, ದೇಶದ 1.97 ಲಕ್ಷ ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶಕ್ಕೆ ಮತ್ತು ವನ್ಯಜೀವಿಗಳ ಆವಾಸಸ್ಥಾನಗಳ ಅಸ್ತಿತ್ವಕ್ಕೆ ತೀವ್ರ ಧಕ್ಕೆಯಾಗಲಿದೆ ಎಂಬ ಆಕ್ರೋಶವನ್ನು ವ್ಯಕ್ತಪಡಿಸುತ್ತಿವೆ. ಹಾಗಾದರೆ, ಈ ತಿದ್ದುಪಡಿ ಮಸೂದೆಯಲ್ಲಿ ಅಂತಹ ಅಪಾಯಕಾರಿ ಅಂಶಗಳೇನಿವೆ ಎಂಬುದನ್ನು ನೋಡೋಣ.

ಅರಣ್ಯ ಸಂರಕ್ಷಣೆ ಕಾಯ್ದೆ– 1980 ಜಾರಿಗೆ ಬರುವ ಮುನ್ನ, ದೇಶದ ಸುಮಾರು 42 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲಾಗುತ್ತಿತ್ತು. ಈ ಕಾಯ್ದೆ ಜಾರಿಗೆ ಬಂದ ನಂತರದ ನಲವತ್ತು ವರ್ಷಗಳಲ್ಲಿ ಇದು 15 ಲಕ್ಷ ಹೆಕ್ಟೇರಿಗೆ ಇಳಿಯಿತು. ಹವಾಮಾನ ಬದಲಾವಣೆಯೆಂಬ ವಿಪತ್ತು ಗಂಭೀರ ವಿಷಯವಾಗಿರದ ಆ ಕಾಲದಲ್ಲಿ, ದೂರದೃಷ್ಟಿಯುಳ್ಳ ಅಂದಿನ ನಾಯಕರು ಹಾಗೂ ಆಡಳಿತಾರೂಢರು ಈ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ತಮ್ಮ ಕಾಳಜಿಯನ್ನು ಮೆರೆದಿದ್ದರು.

ಜಾಗತಿಕವಾಗಿ ಅತ್ಯಂತ ಸಮೃದ್ಧವಾದ, ವೈವಿಧ್ಯಮಯವಾದ ಹಾಗೂ ಅಪೂರ್ವ ಸಸ್ಯ ಹಾಗೂ ವನ್ಯ ಸಂಪತ್ತನ್ನು ಹೊಂದಿರುವ 17 ದೇಶಗಳಲ್ಲಿ ಭಾರತವೂ ಒಂದಾಗಿದೆ. ಐದು ಸಾವಿರಕ್ಕೂ ಹೆಚ್ಚು ಸಸ್ಯ ಹಾಗೂ ವನ್ಯ ಪ್ರಭೇದಗಳು ಭಾರತಕ್ಕೆ ಮಾತ್ರ ಸೀಮಿತವಾಗಿರುವುದು ದೇಶದ ವೈವಿಧ್ಯಮಯವಾದ ಅರಣ್ಯಗಳ ವಿಶೇಷ.

ಆದರೆ, ಅರಣ್ಯ ಸಂರಕ್ಷಣೆ ಕಾಯ್ದೆ– 1980 ದೇಶದ ಅಭಿವೃದ್ಧಿಯ ವೇಗಕ್ಕೆ ತಡೆ ಒಡ್ಡುತ್ತದೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಅದಕ್ಕೆ ತಿದ್ದುಪಡಿ ತಂದಿದೆ. ಈ ಸಂಬಂಧ ಅದು, ಸರ್ಕಾರದ ಅಧಿಕೃತ ಜಾಲತಾಣಗಳಲ್ಲಿ ಸಾರ್ವಜನಿಕ ಆಕ್ಷೇಪ, ಸಲಹೆಗಳಿಗೆ ಆಹ್ವಾನ ನೀಡಿತ್ತು. ಅದರಂತೆ, ಪರಿಸರ ತಜ್ಞರು, ಸ್ವಯಂಸೇವಾ ಸಂಸ್ಥೆಗಳಿಂದ ಮಾತ್ರವಲ್ಲದೆ ವೈಯಕ್ತಿಕ ನೆಲೆಯಲ್ಲೂ ಲಕ್ಷಲಕ್ಷ ಆಕ್ಷೇಪಗಳು ಸಲ್ಲಿಕೆಯಾಗಿದ್ದವು. ಈಶಾನ್ಯ ಭಾರತದ ಅನೇಕ ರಾಜ್ಯಗಳು ಈ ಉದ್ದೇಶಿತ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಿದ್ದವು.

ಕೇಂದ್ರ ಅಥವಾ ರಾಜ್ಯಗಳ ಅರಣ್ಯ ಇಲಾಖೆಯ ಸುಪರ್ದಿಯಲ್ಲಿ ಇಲ್ಲದಿರುವ ಲಕ್ಷಾಂತರ ಹೆಕ್ಟೇರ್ ಅರಣ್ಯ ಪ್ರದೇಶವು ಭಾರತದಲ್ಲಿದೆ. ಕಾನೂನು ಭದ್ರತೆಯಿಲ್ಲದ ಇಂತಹ ಅರಣ್ಯ ಪ್ರದೇಶಗಳಿಗೆ 1995ಕ್ಕೂ ಮೊದಲು ರಕ್ಷಣೆ ಇರಲಿಲ್ಲ. ಕೇರಳದ ಟಿ.ಎನ್.ಗೋಧಾವರ್ಮನ್ ಎಂಬುವರು ಅಕ್ರಮ ಮರಕಡಿತಲೆ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋದಾಗ, ಅವರ ಅಹವಾಲನ್ನು ಪರಿಗಣಿಸಿದ ಕೋರ್ಟ್, ಅರಣ್ಯಕ್ಕಿದ್ದ ವ್ಯಾಖ್ಯೆಯನ್ನು 1996ರಲ್ಲಿ ಬದಲಿಸಿ ತನ್ನ ಐತಿಹಾಸಿಕ ತೀರ್ಪನ್ನು ನೀಡಿತು. ಕಾನೂನಿನ ರಕ್ಷಣೆಗೆ ಒಳಪಡದ ಯಾವುದೇ ಅರಣ್ಯ ಪ್ರದೇಶವನ್ನು, ‘ಅರಣ್ಯ’ ಎಂಬ ಪದವನ್ನು ನಿಘಂಟಿನಲ್ಲಿ ವಿವರಿಸಿದಂತೆ ಅರ್ಥೈಸಿಕೊಂಡು, ಅದಕ್ಕೆ ಕಾನೂನುಬದ್ಧವಾದ ರಕ್ಷಣೆ ನೀಡಬೇಕು ಎಂಬುದು ಆ ತೀರ್ಪಿನ ಸಾರಾಂಶ. ಇದರ ಅನ್ವಯ, ಡೀಮ್ಡ್ ಅಥವಾ ಪರಿಭಾವಿತ ಅರಣ್ಯಗಳು ಮುನ್ನೆಲೆಗೆ ಬಂದವು. ಕರ್ನಾಟಕವೊಂದರಲ್ಲೇ ಸುಮಾರು 9.5 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ ಇದೆ ಎಂದು ಅರಣ್ಯ ಇಲಾಖೆ ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಅರಣ್ಯ ಪ್ರದೇಶಗಳನ್ನು ಯಾರೂ ಬೇಕಾಬಿಟ್ಟಿಯಾಗಿ ಅರಣ್ಯೇತರ ಉದ್ದೇಶಕ್ಕೆ ಬಳಸಬಾರದು, ಅದಕ್ಕೊಂದು ನಿಯಂತ್ರಣ ಇರಲೇಬೇಕು ಎಂಬ ಉದ್ದೇಶದಿಂದ ಜಾರಿಯಾದ 1980ರ ಕಾಯ್ದೆಯಲ್ಲಿ ಹಲವು ಅಸ್ಪಷ್ಟ ಅಂಶಗಳಿವೆ ಎಂಬ ಕಾರಣಕ್ಕೆ ತಿದ್ದುಪಡಿ ಮಸೂದೆಯನ್ನು ಸರ್ಕಾರ ರೂಪಿಸಿದೆ. ಯಾವುದೇ ಸಲಹೆ, ಆಕ್ಷೇಪಗಳನ್ನು ಪರಿಗಣಿಸದೆ ಮುಂಗಾರು ಅಧಿವೇಶನದಲ್ಲಿ ಸಂಸತ್ತಿನ ಅನುಮೋದನೆಯನ್ನೂ ಪಡೆದುಕೊಂಡುಬಿಟ್ಟಿದೆ.

ಈ ತಿದ್ದುಪಡಿ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದರೆ, ಸಂರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯ ಹೊರಗಿನ ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಯಾವುದೇ ಅಡ್ಡಿಯಿರುವುದಿಲ್ಲ. ಉದಾಹರಣೆಗೆ, ಅಂತರ ರಾಷ್ಟ್ರೀಯ ಗಡಿ, ಗಡಿ ನಿಯಂತ್ರಣ ರೇಖೆಯ 100 ಕಿ.ಮೀ. ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶದಲ್ಲಿ ರಕ್ಷಣಾ ಉದ್ದೇಶದ ರಸ್ತೆ ಮತ್ತು ರೈಲು ಮಾರ್ಗ ನಿರ್ಮಾಣಕ್ಕೆ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂಬ ನಿಯಮವನ್ನು ಈ ಮಸೂದೆಯು ಇಲ್ಲವಾಗಿಸುತ್ತದೆ. ಸರ್ಕಾರದ ಅಧೀನದ ಮೃಗಾಲಯ ಹಾಗೂ ಸಫಾರಿ ಪ್ರದೇಶಗಳಿಗೆ, ಪ್ರವಾಸೋದ್ಯಮವನ್ನು ಉತ್ತೇಜಿಸುವ ಅಥವಾ ಕೇಂದ್ರವು ಬಯಸುವ ಇತರ ಕೆಲವು ಯೋಜನೆಗಳಿಗೆ ಪರಿಸರ ಸಂಬಂಧಿ ಪೂರ್ವಾನುಮತಿ ಪಡೆಯುವ ಅಗತ್ಯ ಇರುವುದಿಲ್ಲ.

ರಾಜ್ಯಗಳ ಸುಪರ್ದಿಯಲ್ಲಿದ್ದ ಹಾಗೂ ಕಾನೂನು ಮಾನ್ಯತೆಯಿಲ್ಲದ ಅರಣ್ಯ ಪ್ರದೇಶಗಳಿಗೆ ಕಾನೂನು ಮಾನ್ಯತೆ ನೀಡಲು ಹಿಂದಿನ ನಾಲ್ಕು ದಶಕಗಳಲ್ಲಿ ಅರಣ್ಯ ಸಂರಕ್ಷಣೆ ಕಾಯ್ದೆಗೆ ಅನೇಕ ಬಾರಿ ತಿದ್ದುಪಡಿ ಮಾಡಲಾಗಿದೆ. ಆದರೆ, ಈಗಿನ ತಿದ್ದುಪಡಿಯು ಬಿಗಿಯಾಗಿರುವ ಕಾನೂನು, ನಿಯಮಗಳನ್ನು ಸಡಿಲಿಸುವ ಮೂಲಕ ಕಾಯ್ದೆಯನ್ನು ದುರ್ಬಲಗೊಳಿಸುತ್ತದೆ ಎಂದು ನೂರಕ್ಕೂ ಹೆಚ್ಚು ನಿವೃತ್ತ ಐಎಎಸ್ ಅಧಿಕಾರಿಗಳು ಎಲ್ಲಾ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರಿಗೆ ಪತ್ರ ಬರೆದು ವಿರೋಧ ವ್ಯಕ್ತಪಡಿಸಿದ್ದಾರೆ. ಬಹುಮುಖ್ಯವಾಗಿ, ಈ ಮಸೂದೆಯು ಸುಪ್ರೀಂ ಕೋರ್ಟ್ 1996ರಲ್ಲಿ ನೀಡಿದ ಅರಣ್ಯ ವ್ಯಾಖ್ಯಾನಕ್ಕೆ ವಿರುದ್ಧವಾಗಿದೆ. ಅಂದರೆ, ಇದು ಕಾಯ್ದೆಯಾಗಿ ಜಾರಿಗೆ ಬಂದರೆ ಡೀಮ್ಡ್ ಅರಣ್ಯಗಳಿಗೆ ಕಾನೂನಿನ ರೀತ್ಯ ಯಾವುದೇ ಭದ್ರತೆ ಇರುವುದಿಲ್ಲ.

ಒಂದು ಹೆಕ್ಟೇರ್ ಪ್ರದೇಶದಲ್ಲಿ ನಿರ್ದಿಷ್ಟವಾಗಿ ಮರಗಳ ಚಾವಣಿಯು ಶೇ 10ಕ್ಕಿಂತ ಹೆಚ್ಚು ಇದ್ದಲ್ಲಿ, ಅಂತಹ ಪ್ರದೇಶಗಳನ್ನು ಹಸಿರು ಕವಚ ಎಂದು ಕರೆಯಲಾಗುತ್ತದೆ. 2001ರಿಂದ 2021ರವರೆಗೆ ಇಂತಹ ಹಸಿರು ಕವಚ 38,251 ಚ.ಕಿ.ಮೀ.ನಷ್ಟು ಹೆಚ್ಚಾಗಿದೆ ಎಂದು ವರದಿಗಳು ಹೇಳುತ್ತವೆ. ಇದು ಶೇ 40ರಷ್ಟು ಇದ್ದಲ್ಲಿ ಅಂತಹ ಪ್ರದೇಶವನ್ನು ದಟ್ಟಾರಣ್ಯವೆಂದು ಪರಿಗಣಿಸಲಾಗುತ್ತದೆ. ಆದರೆ, ವಾಸ್ತವದಲ್ಲಿ ಏಕಜಾತಿಯ ನೆಡುತೋಪುಗಳನ್ನು ಕೂಡ ಹಸಿರು ಕವಚವೆಂದೇ ಪರಿಗಣಿಸಲಾಗುತ್ತಿದ್ದು, ಅವು ನೈಸರ್ಗಿಕ ಅರಣ್ಯಕ್ಕೆ ಎಂದೂ ಸಮನಾಗಲಾರವು. ಹಾಲಿ ಇರುವ ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಉದ್ದೇಶಕ್ಕೆ ಬಳಸುವುದು ಹಾಗೂ ನಷ್ಟವಾದ ಅರಣ್ಯ ಪ್ರದೇಶಕ್ಕೆ ಪರಿಹಾರವಾಗಿ ಬೇರೆಡೆಯಲ್ಲಿ ಅರಣ್ಯ ಬೆಳೆಸುವ ಪರಿಪಾಟ ಇದೆ. ಆದರೆ, ನೈಸರ್ಗಿಕ ಅರಣ್ಯಗಳಿಗೆ ಇಂಗಾಲಾಮ್ಲವನ್ನು ಹೀರಿಕೊಳ್ಳುವ ಸಾಮರ್ಥ್ಯವು ಹೊಸ ನೆಡುತೋಪುಗಳಿಗಿಂತ ಶೇ 40ರಷ್ಟು ಹೆಚ್ಚು ಎಂದು ಅನೇಕ ಸಂಶೋಧನೆಗಳು ಬಹಿರಂಗಪಡಿಸಿವೆ.

ಮಧ್ಯಪ್ರದೇಶದ ಬಕ್ಸ್ವಾ ಎಂಬ ದಟ್ಟಾರಣ್ಯದ ಅಡಿಯಲ್ಲಿ ವಜ್ರ ನಿಕ್ಷೇಪವಿದೆ ಎನ್ನುವ ಕಾರಣದಿಂದ, ಅಲ್ಲಿ ವಜ್ರ ಗಣಿಗಾರಿಕೆ ಮಾಡಲು ಅರಣ್ಯ ಸಂರಕ್ಷಣೆ ಕಾಯ್ದೆ– 1980ರ ಅಡಿಯಲ್ಲಿ ತಾತ್ವಿಕ ಒಪ್ಪಿಗೆ ನೀಡಲಾಗಿದೆ. ತಿದ್ದುಪಡಿ ಮಸೂದೆ ಇನ್ನೂ ದುರ್ಬಲವಾಗಿದೆ. ಇನ್ನಷ್ಟು ಮತ್ತಷ್ಟು ಅರಣ್ಯ ಪ್ರದೇಶಗಳು ಹೆದ್ದಾರಿಗಳಿಗೆ, ಹೊಸ ರೈಲು ಮಾರ್ಗಗಳಿಗೆ, ಪ್ರವಾಸೋದ್ಯಮಕ್ಕೆ ಸುಲಭವಾಗಿ ತೆರೆದುಕೊಳ್ಳಲು ಇದು ಅನುವಾಗಿಸಲಿದೆ ಎಂಬ ಆತಂಕ ಇದೆ. ಅಭಿವೃದ್ಧಿ ಕಾರ್ಯಗಳ ಹೆಸರಿನಲ್ಲಿ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವ ಬಲ ಕೇಂದ್ರಕ್ಕೆ ಲಭಿಸಲಿದೆ.

ಪ್ರಪಂಚದಾದ್ಯಂತ ನೈಸರ್ಗಿಕ ಅರಣ್ಯ ಪ್ರದೇಶಗಳು ಕ್ಷೀಣಿಸುತ್ತಿರುವುದರಿಂದ ವಾತಾವರಣದಲ್ಲಿ ಇಂಗಾಲಾಮ್ಲದ ಅಂಶ ಹೆಚ್ಚಾಗಿದ್ದು, ಹವಾಮಾನ ವೈಪರೀತ್ಯಕ್ಕೆ ಕಾರಣವಾಗುತ್ತಿದೆ. ನೈಸರ್ಗಿಕ ವಿಕೋಪಗಳ ಆವರ್ತನದಲ್ಲಿ ಹೆಚ್ಚಳವಾಗುತ್ತಿದೆ. ನೆರೆ ಹಾಗೂ ಬರ ಒಟ್ಟೊಟ್ಟಿಗೇ ಕಾಡುತ್ತವೆ. ಇವೆಲ್ಲಾ ಜಾಗತಿಕ ಹಾಗೂ ರಾಷ್ಟ್ರೀಯ ವಿದ್ಯಮಾನಗಳಾದರೆ, ಕರ್ನಾಟಕದಲ್ಲಿ ಅದರಲ್ಲೂ ಪಶ್ಚಿಮಘಟ್ಟಗಳಲ್ಲಿ ವಾಸಿಸುವ ಬಹುಸಂಖ್ಯಾತ ಬಡವರ ಪರಿಸ್ಥಿತಿ ಚಿಂತಾಜನಕವಾಗಲಿದೆ. ಹಾಲಿ ಇರುವ ಡೀಮ್ಡ್ ಅರಣ್ಯ ಪ್ರದೇಶಗಳಿಗೆ ಕಾನೂನು ಭದ್ರತೆ ಇಲ್ಲದಿರುವುದರಿಂದ ಹಾಗೂ ಅಡಿಕೆ ಮತ್ತು ಶುಂಠಿ ಬೆಳೆಗಳಿಗೆ ಅನಿರೀಕ್ಷಿತವಾಗಿ ಹೆಚ್ಚು ಬೆಲೆ ಬಂದಿರುವ ಕಾರಣದಿಂದ ಒತ್ತುವರಿಗೆ ಲಂಗು ಲಗಾಮು ಇರುವುದೇ ಇಲ್ಲ. ದೇಶದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು ಈ ಮಸೂದೆಯ ಉದ್ದೇಶ ಎಂದು ಹೇಳಲಾಗಿದೆ. ಆದರೆ, ಇದು ಅರಣ್ಯ ಪ್ರಮಾಣದ ಕುಸಿಯುವಿಕೆಗೆ ಕಾರಣವಾಗಲಿದೆ ಎಂಬ ಕಳವಳ ಪರಿಸರ ತಜ್ಞರನ್ನು ಕಾಡುತ್ತಿದೆ.

ಚುರುಮುರಿ

ಹುಲಿ ಲೆಕ್ಕ!

● ಬಿ.ಎನ್.ಮಲ್ಲೇಶ್

‘ತೆಪರ, ಏನಲೆ ಇವತ್ತಿನ್ ಸುದ್ದಿ? ರಾಜಕೀಯ ಬಿಟ್ಟು ಹೇಳು’ ಎಂದ ದುಬ್ಬೀರ.

‘ರಾಜಕೀಯ ಬಿಟ್ಟು ಅಂದ್ರೆ ಒಂದು ತುಪ್ಪದ್ದು, ಇನ್ನೊಂದು ಹುಲಿಗಳದ್ದು. ಮೊದಲು ಯಾವುದೇಳ್ಲಿ?’

‘ತುಪ್ಪದ್ದೇನು ಕತೆ?’

‘ಇನ್ಮೇಲೆ ತಿರುಪತಿ ಲಡ್ಡಿನಲ್ಲಿ ಗುಜರಾತ್ ಘಮ... ಅಂದ್ರೆ ಅಮುಲ್ ತುಪ್ಪ ಹಾಕ್ತಾರಂತೆ’.

‘ನಮ್ ನಂದಿನಿ ತುಪ್ಪ ಯಾಕೆ ಬ್ಯಾಡಂತೆ?’

‘ನಮ್ ತುಪ್ಪ ನಮಗೇ ಸಾಲ್ತಿಲ್ಲಂತೆ. ಸರ್ಕಾರದೋರು ಸಾಲ ಮಾಡಿ ಜನರಿಗೆ ಗ್ಯಾರಂಟಿ ತುಪ್ಪ ತಿನ್ನಿಸ್ತಿದಾರೆ, ನೋಡ್ತಿಲ್ವಾ?’ ತೆಪರೇಸಿ ನಕ್ಕ.

ಗುಡ್ಡೆಗೆ ಸಿಟ್ಟು ಬಂತು. ‘ನಾವು ಸಾಲ ಮಾಡಿಯಾದ್ರೂ ಜನರಿಗೆ ತುಪ್ಪ ತಿನ್ನಿಸ್ತಿದೀವಿ. ನಿಮ್ ಸರ್ಕಾರದೋರು ಬರೀ ಜನರ ಮೂಗಿಗೆ ತುಪ್ಪ ಹಚ್ತಿದ್ರು ನೆನಪೈತಾ?’ ಎಂದ.

‘ಥೋ... ರಾಜಕೀಯ ಬ್ಯಾಡಾಂದ್ರೂ ಮತ್ತೆ ಅಲ್ಲಿಗೇ ಬರ್ತೀರಲ್ಲಲೆ. ಲೇ ತೆಪರ, ತುಪ್ಪ ಬಿಡು, ಹುಲಿಗಳ ಕತೆ ಏನು ಹೇಳು’ ಎಂದ ದುಬ್ಬೀರ.

‘ಹುಲಿಗಳ ಸುದ್ದಿನಾ? ನಮ್ ರಾಜ್ಯದಲ್ಲಿ ಹುಲಿಗಳ ಸಂಖ್ಯೆ 563 ಆಗೇತಂತೆ. ಹೆಂಗೆ ನಮ್ ಸರ್ಕಾರದ ಸಾಧನೆ?’ ಎಂದ ತೆಪರೇಸಿ.

‘ಹಲೋ... ಸ್ವಲ್ಪ ಬಾಯಿ ಮುಚ್ಕಳಿ, ಅಲ್ಲಿ ಕುನೊ ಅರಣ್ಯದಲ್ಲಿ ಒಂಬತ್ತು ಚೀತಾ ಸತ್ತವಲ್ಲ, ಅದೂ ನಿಮ್ ಸರ್ಕಾರದ್ದೇ ಸಾಧನೆ. ಆ ಲೆಕ್ಕ ಯಾರು ಕೊಡ್ತಾರೆ?’ ಗುಡ್ಡೆ ಕೇಳಿದ.

‘ಸಾಧನೆ ಹಂಗಿರ್ಲಿ, ನನ್ ಪ್ರಕಾರ ಹುಲಿಗಳ ಲೆಕ್ಕ ತಪ್ಪು’ ಎಂದ ಕೊಟ್ರೇಶಿ.

‘ತಪ್ಪಾ? ಹೆಂಗೆ?’

‘ಆ ಹುಲಿಗಳ ಲೆಕ್ಕಕ್ಕೆ ನಮ್ ರಾಜಾಹುಲಿ, ವಿಜಾಪುರದ ಹುಲಿ, ಟಗರುಹುಲಿ, ಬಂಡೆಹುಲಿ ಇವೆಲ್ಲ ಸೇರಿದಾವಾ?’

‘ಕರೆಕ್ಟ್, ಹಂಗ್ ನೋಡಿದ್ರೆ ನಮ್ ಗುಡ್ಡೆನೂ ಹುಲಿನೇ. ಅದೂ ಲೆಕ್ಕಕ್ಕೆ ಸೇರ್ಬೇಕು!’ ದುಬ್ಬೀರ ನಕ್ಕ.

‘ಹೌದ್ಹೌದು, ಗುಡ್ಡೆ ಬೀದೀಲಿ ಹುಲಿ, ಮನೇಲಿ ಇಲಿ!’ ತೆಪರೇಸಿ ಕಿಸಕ್ಕೆಂದ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

‘ಗೃಹಲಕ್ಷ್ಮಿ’ಗೆ ಉಳಿತಾಯದ ಬಲೆ!

ಕೆಲವು ಸಂಸ್ಥೆಗಳು ಗೃಹಲಕ್ಷ್ಮಿ ಯೋಜನೆಯ ಹಣದ ಮೇಲೆ ಕಣ್ಣಿಟ್ಟು, ಮಹಿಳೆಯರಿಗಾಗಿ ಆಕರ್ಷಕ ಯೋಜನೆಗಳನ್ನು ರೂಪಿಸಿ, ಆಮಿಷಗಳನ್ನು ಒಡ್ಡಲಾರಂಭಿಸಿವೆ

● ಮಲ್ಲಿಕಾರ್ಜುನ ಹೆಗ್ಗಳಗಿ

ಕೂಡಲಸಂಗಮದಲ್ಲಿ ಈಚೆಗೆ ನಡೆದ ಮಹಿಳಾ ಕೃಷಿ ಕಾರ್ಮಿಕರ ಸಮಾವೇಶಕ್ಕೆ ಹೋಗಿದ್ದೆ. ಗ್ರಾಮೀಣ ಪ್ರದೇಶದಿಂದ ಬಂದ ಮಹಿಳೆಯರು ಅಲ್ಲಿ ಸೇರಿದ್ದರು. ಅವರ ಕೈಯಲ್ಲಿ ಬಣ್ಣ ಬಣ್ಣದ ಕರಪತ್ರಗಳಿದ್ದವು. ವಿಚಾರಿಸಿದಾಗ, ‘ಗೃಹಲಕ್ಷ್ಮಿ’ ಯೋಜನೆಯಡಿ ರಾಜ್ಯ ಸರ್ಕಾರ ಪ್ರತಿ ಮನೆಯ ಯಜಮಾನಿಗೆ ನೀಡಲಿರುವ 2,000 ರೂಪಾಯಿಯನ್ನು ಉಳಿತಾಯ ಯೋಜನೆಗಳಲ್ಲಿ ತೊಡಗಿಸುವಂತೆ ಆಕರ್ಷಿಸಲು ಖಾಸಗಿ ಮತ್ತು ಸಹಕಾರಿ ಹಣಕಾಸು ಸಂಸ್ಥೆಗಳು ಪ್ರಕಟಿಸಿದ ಕರಪತ್ರಗಳು ಎಂದು ಗೊತ್ತಾಯಿತು. ಇನ್ನು ಕೆಲವು ಕರಪತ್ರಗಳು ಮಾಸಿಕ ಕಂತು ಕಟ್ಟುವ ವ್ಯವಹಾರಕ್ಕೆ ಸಂಬಂಧಿಸಿದವಾಗಿದ್ದವು.

ಕಂತುಗಳಲ್ಲಿ ಹಣ ಕಟ್ಟಿ ನಿಶ್ಚಿತ ಅವಧಿಯ ನಂತರ ಚಿನ್ನದ ಒಡವೆ, ಫ್ರಿಜ್, ದ್ವಿಚಕ್ರ ವಾಹನ ಪಡೆಯುವ ಬಗ್ಗೆ ಈ ಕರಪತ್ರಗಳಲ್ಲಿ ವಿವರಿಸಲಾಗಿತ್ತು. ಮಹಿಳೆಯರ ನಿತ್ಯದ ಬದುಕಿನ ಅವಶ್ಯಕತೆಗಳಿಗೆ ನೆರವಾಗಿ, ಅವರ ಕಷ್ಟ ದೂರ ಮಾಡುವ ಆಶಯದಿಂದ ಸರ್ಕಾರ ಗೃಹಲಕ್ಷ್ಮಿ ಯೋಜನೆ ರೂಪಿಸಿದೆ. ಇದು ಮಹಿಳಾ ಸಬಲೀಕರಣ ಪ್ರಕ್ರಿಯೆಯ ಮಹತ್ವದ ಹೆಜ್ಜೆಯಾಗಿದೆ. ಆದರೆ, ಈ ನಗದು ಕೊಡುಗೆಯನ್ನು ‘ಉಳಿತಾಯ ಮಾಡಿ ಶ್ರೀಮಂತರಾಗಿ’ ಎಂಬ ಆಕರ್ಷಕ ಘೋಷಣೆಯೊಂದಿಗೆ ಕಿತ್ತುಕೊಳ್ಳಲು ಸೌಹಾರ್ದ ಸಂಸ್ಥೆಗಳು, ಸಹಕಾರಿ ಸಂಘಗಳು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳು ಬಲೆ ಬೀಸುತ್ತಿರುವುದು ಹಾಗೂ ಕೆಲವು ಖಾಸಗಿ ಸಂಸ್ಥೆಗಳು ಕಂತು ವ್ಯಾಪಾರಕ್ಕೆ ನಿಂತಿರುವುದು ಯೋಜನೆಯ ಮೂಲ ಉದ್ದೇಶಕ್ಕೆ ಕೊಡಲಿ ಪೆಟ್ಟು ಹಾಕುತ್ತಿರುವಂತೆ ಕಾಣುತ್ತದೆ.

ಕರಪತ್ರಗಳನ್ನು ಪರಿಶೀಲಿಸಿದಾಗ, ಒಂದು ವರ್ಷದಿಂದ 10 ವರ್ಷಗಳ ದೀರ್ಘ ಅವಧಿಗೆ ಮಾಸಿಕ ಕಂತುಗಳ ಮೂಲಕ ಹಣ ಉಳಿತಾಯ ಮಾಡುವ ವಿವರಗಳಿದ್ದವು. ಅವಧಿ ಮುಗಿದ ನಂತರ ಪಡೆಯುವ ದೊಡ್ಡ ಮೊತ್ತದ ಅಂಕಿಗಳು ದಪ್ಪ ಅಕ್ಷರಗಳಲ್ಲಿ ಮಿನುಗುತ್ತಿದ್ದವು. ಹೆಚ್ಚಿನ ಬಡ್ಡಿ, ಕೆಲವು ವಿಶೇಷ ಗಿಫ್ಟ್ ಕೊಡುವ ಬಗ್ಗೆ ಕರಪತ್ರಗಳಲ್ಲಿ ದಾಖಲಿಸಲಾಗಿತ್ತು.

ಹಣ ಉಳಿತಾಯ ಮಾಡುವುದು ಭಾರತೀಯರಿಗೆ ಪ್ರಿಯವಾದ ಮನೋಭಾವ. ಹೊಟ್ಟೆಬಟ್ಟೆ ಕಟ್ಟಿ ಉಳಿತಾಯ ಮಾಡಲು ಹಂಬಲಿಸುವವರ ಸಂಖ್ಯೆ ದೊಡ್ಡದಿದೆ. ಮಹಿಳೆಯರು ಈ ಬಗ್ಗೆ ಹೆಚ್ಚು ಒಲವು ಹೊಂದಿರುತ್ತಾರೆ ಎಂದು ಮನೋತಜ್ಞರು ಹೇಳುತ್ತಾರೆ. ಇದರಿಂದ ಸಹಜವಾಗಿ ಉಳಿತಾಯದ ಹೆಸರಿನಲ್ಲಿ ಹಣ ಕಿತ್ತುಕೊಳ್ಳುವವರಿಗೆ ಅನುಕೂಲವಾಗುತ್ತದೆ. ಗಮನಾರ್ಹ ಸಂಗತಿ ಎಂದರೆ, ಕೆಲವು ಖಾಸಗಿ ಹಣಕಾಸು ಸಂಸ್ಥೆಗಳ ಬದ್ಧತೆ, ವಿಶ್ವಾಸಾರ್ಹತೆ ಕಡಿಮೆ. ಗುಳುಂ ಮಾಡುವ ಸಂಭವ ಇರುತ್ತದೆ.

ನಮಗೆ ಹಾಲು ಪೂರೈಸುವ ಅಜ್ಜಿಯದು ಕರುಣಾಜನಕ ಕಥೆ. ಕಂತುಗಳಲ್ಲಿ ಹಣ ಕಟ್ಟಿ ಐದು ವರ್ಷಗಳ ನಂತರ ಚಿನ್ನದ ಎರಡು ಬಳೆಗಳನ್ನು ಪಡೆದುಕೊಳ್ಳುವ ಯೋಜನೆಯ ಸದಸ್ಯರಾಗಿದ್ದರು ಈ ಅಜ್ಜಿ. ಕಷ್ಟಪಟ್ಟು ಹೈನುಗಾರಿಕೆ ಮಾಡಿ, ಬಂದ ಹಣವನ್ನೆಲ್ಲ ಅದಕ್ಕಾಗಿ ಹೂಡಿದ್ದರು. ಅವಧಿ ಮುಗಿಯುವ ಮುನ್ನವೇ ಯೋಜನೆಯ ರೂವಾರಿ ತಲೆಮರೆಸಿಕೊಂಡ. ಅದೇ ಕೊರಗಿನಲ್ಲಿ ಅಜ್ಜಿ ಆರೋಗ್ಯವನ್ನು ಕಳೆದುಕೊಂಡಿದ್ದಾರೆ. ಅಜ್ಜಿಯ ಹಾಗೆ ನೂರಾರು ಮಹಿಳೆಯರು ಚಿನ್ನದ ಬಳೆಗಳ ವಂಚನೆಗೆ ಒಳಗಾಗಿದ್ದು ತನಿಖೆಯ ನಂತರ ಬಹಿರಂಗಗೊಂಡಿತ್ತು. ನಮ್ಮ ಹಣವನ್ನು ನಮ್ಮದಾಗಿ ಸದಾ ಎಚ್ಚರಿಕೆಯಿಂದ ಕಾಪಾಡಿಕೊಂಡಿರಬೇಕು. ನಮಗೆ ಬೇಕಾದಾಗ ಅದು ಸರಳವಾಗಿ ದೊರಕುವಂತಿರಬೇಕು. ಹಣದ ಬಗ್ಗೆ ಎರಡು ಎಚ್ಚರಿಕೆಯ ಮಾತುಗಳನ್ನು ಪಾಲಿಸಬೇಕು. ಎಚ್ಚರಿಕೆ 1. ಯಾರದೋ ಕೈಗೆ ಹಣ ಕೊಟ್ಟು ಕಳೆದುಕೊಳ್ಳಬೇಡಿ. ಎಚ್ಚರಿಕೆ 2. ಮೊದಲು ಹೇಳಿದ ಮಾತನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಿ. ಖ್ಯಾತ ಉದ್ಯಮಿ ವಾರನ್ ಬಫೆಟ್ ಅವರು ಕೊಟ್ಟಿರುವ ಈ ಸಲಹೆ ಸರ್ವಕಾಲಕ್ಕೂ ಅನುಕರಣೀಯ.

ಅನುಕೂಲ ಇದ್ದವರು ಉಳಿತಾಯ ಮಾಡುವುದು ತಪ್ಪಲ್ಲ. ಆದರೆ, ಸಬಲೀಕರಣಕ್ಕೆಂದು ಕೈಗೆ ಬರುವ ಈ ಅಲ್ಪ ಹಣ, ಉಳಿತಾಯದ ಹೆಸರಿನಲ್ಲಿ, ಕಂತಿನಲ್ಲಿ ಖರೀದಿಸುವ ನೆಪದಲ್ಲಿ ಯಾರದೋ ಪಾಲಾಗಬಾರದು.



ಮಧ್ಯಪ್ರದೇಶದಲ್ಲಿ 2011ರಲ್ಲಿ ಯುನಿಸೆಫ್ ಸಹಯೋಗದೊಂದಿಗೆ 20 ಹಳ್ಳಿಗಳ ನಾಗರಿಕರಿಗೆ ಮೂಲ ಆದಾಯದ ರೂಪದಲ್ಲಿ ಹಣ ಕೊಡುವ ವಿನೂತನ ಪ್ರಯೋಗ ಜಾರಿ ಮಾಡಲಾಯಿತು. ಎಲ್ಲ ನಾಗರಿಕರ ಬ್ಯಾಂಕ್ ಖಾತೆಗೆ ತಲಾ ₹ 2,000 ಜಮಾ ಮಾಡಲಾಯಿತು. ಬಡವ ಬಲ್ಲಿದ ಎಂಬ ಭೇದವಿಲ್ಲದೆ 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಹಣ ಹಾಕಲಾಯಿತು. ಒಂದು ವರ್ಷ ನಡೆದ ಈ ಪ್ರಯೋಗದಲ್ಲಿ ಆ ಹಳ್ಳಿಗಳಲ್ಲಿ ದೊಡ್ಡ ಬದಲಾವಣೆ ಕಂಡುಬಂದಿತ್ತು. ಜನರ ಜೀವನಮಟ್ಟ ಸುಧಾರಿಸಿದ್ದಲ್ಲದೆ, ಆಹಾರ, ಆರೋಗ್ಯ ಮತ್ತು ಮಕ್ಕಳ ಶಿಕ್ಷಣದ ಬಗೆಗಿನ ಅವರ ಕಾಳಜಿ ಅಧಿಕಗೊಂಡಿತ್ತು. ಶೇಕಡ 68ರಷ್ಟು ಕುಟುಂಬಗಳ ಮಕ್ಕಳ ಶಿಕ್ಷಣ ನಿರಂತರ ಮುಂದುವರಿಯಿತು. ನಾಗರಿಕರ ಉತ್ಸಾಹ ಅಧಿಕಗೊಂಡು ಹೊಸ ಉದ್ಯೋಗ, ವ್ಯಾಪಾರ ಆರಂಭಿಸಿ, ಆದಾಯವನ್ನು ಹೆಚ್ಚಿಸಿಕೊಳ್ಳತೊಡಗಿದರು.

ದೇಶದ ಕೆಲವು ಭಾಗಗಳಲ್ಲಿ ನಡೆಸಿದ ಇಂತಹ ಪ್ರಯೋಗಗಳು ಉತ್ತಮ ಫಲಿತಾಂಶ ನೀಡಿವೆ. ಬ್ರಿಟನ್, ನೆದರ್ಲೆಂಡ್ಸ್, ಬ್ರೆಜಿಲ್‌ನಲ್ಲಿ ಮೂಲ ಆದಾಯ ಯೋಜನೆ ಬಹುದೊಡ್ಡ ಬದಲಾವಣೆಗೆ ಮುನ್ನುಡಿ ಬರೆದಿದೆ. ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿಸುವ, ಅವರು ಇನ್ನೊಬ್ಬರ ಬಳಿ ಸಹಾಯ ಯಾಚಿಸುವ ಸಂದರ್ಭಗಳನ್ನು ಕಡಿಮೆ ಮಾಡುವ ಗೃಹಲಕ್ಷ್ಮಿಯ ಶಕ್ತಿಯು ಉಳಿತಾಯದ ಹೆಸರಿನಲ್ಲಿ, ಚಿನ್ನದ ಒಡವೆ ಪಡೆಯುವ ಆಮಿಷದಲ್ಲಿ ಕಳೆದುಹೋಗದಂತೆ ಎಲ್ಲರೂ ಎಚ್ಚರ ವಹಿಸುವುದು ಅವಶ್ಯ.

ವಾಚಕರ ವಾಣಿ

ಟ್ಯಾಂಕ್‌ಗೆ ಅಳವಡಿಸಿ ಕ್ಯಾಮೆರಾ

ರಾಜ್ಯದ ಕೆಲವು ಕಡೆಗಳಲ್ಲಿ ಸಾರ್ವಜನಿಕರು ಕಲುಷಿತ ನೀರು ಕುಡಿದು ಸಾವನ್ನಪ್ಪಿದ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ. ಇಂತಹ ಹೆಚ್ಚಿನ ಪ್ರಕರಣಗಳಲ್ಲಿ, ನೀರು ಸರಬರಾಜು ಪೈಪ್‌ಲೈನ್ ಅನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸದೇ ಇರುವುದು ಕಾರಣವಾಗಿರುತ್ತದೆ. ನೀರಿನ ಟ್ಯಾಂಕ್‌ಗಳು ಮಲಿನವಾಗಿ ಇರುತ್ತವೆ. ಬಹುತೇಕ ಅವು ಊರ ಆಚೆ ಇದ್ದು, ಸುತ್ತಮುತ್ತ ಗಿಡಗಂಟಿಗಳು ಬೆಳೆದಿರುತ್ತವೆ. ಅಲ್ಲಿ ಅವುಗಳ ಸ್ವಚ್ಛತೆಯ ಬಗ್ಗೆ ಯಾರೂ ಮುತುವರ್ಜಿ ವಹಿಸದ ಕಾರಣದಿಂದ ನೀರು ಕಲುಷಿತಗೊಳ್ಳುವ ಎಲ್ಲಾ ಸಾಧ್ಯತೆ ಇರುತ್ತದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ನೀರಿನ ಟ್ಯಾಂಕ್‌ಗಳ ಸುತ್ತ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಬೇಕು. ಅವುಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸಬೇಕು.

ಬಿ. ಮೊಹಿದ್ದೀನ್ ಖಾನ್, ಚಿತ್ರದುರ್ಗ

ವರ್ಗಾವಣೆ ದಂಧೆಗಿಲ್ಲವೇ ಮುಕ್ತಿ?

ಮೊದಲೆಲ್ಲಾ ರಾಜಕಾರಣಿಗಳು ಆಗೊಮ್ಮೆ ಈಗೊಮ್ಮೆ ಶಿಫಾರಸು ಮಾಡಿ, ತಮಗೆ ಬೇಕಾದ ಅಧಿಕಾರಿಗಳನ್ನು ಬೇಕಾದ ಸ್ಥಳಗಳಿಗೆ ನಿಯುಕ್ತಿ ಮಾಡಿಸಿಕೊಳ್ಳುತ್ತಿದ್ದರು. ಆದರೆ, ಈಗ ತಮಗೆ ಬೇಕಾದವರನ್ನು ಹಾಕಿಸಿಕೊಳ್ಳುವುದಷ್ಟೇ ಅಲ್ಲ, ಬೇಡವಾದವರನ್ನು ಹೊರಗೆ ದಬ್ಬಿಸುವ ಕೆಲಸವನ್ನೂ ಮಾಡುತ್ತಾರೆ. ಇಲ್ಲಿ ಸಲ್ಲದ ಅಧಿಕಾರಿ ಅಲ್ಲಿ ಹೇಗೆ ಸಲ್ಲಬಹುದು? ಕಾರ್ಯವೈಖರಿ ಸರಿ ಇಲ್ಲದಿದ್ದರೆ ಅಂತಹ ಅಧಿಕಾರಿಗಳನ್ನು ಮನೆಗೆ ಕಳುಹಿಸಬೇಕು. ಇಲ್ಲದಿದ್ದರೆ ಅವರನ್ನು ಆ ನಿಗದಿತ ಸ್ಥಳದಿಂದ ಮಾತ್ರ ಹೊರಗೆ ಕಳುಹಿಸಲು ಕಾರಣವೇನು? ವರ್ಗಾವಣೆ ದಂಧೆ ಮುಖಕ್ಕೆ ರಾಚುತ್ತಿದೆ. ಇದಕ್ಕೆಲ್ಲ ಮುಕ್ತಿ ಇಲ್ಲವೇ?

ಟಿ.ವಿ.ಬಿ.ರಾಜನ್, ಬೆಂಗಳೂರು

ಆನ್‌ಲೈನ್ ಆಟ: ಬೀಳಲಿ ಪೂರ್ಣವಿರಾಮ

ಆನ್‌ಲೈನ್ ಆಟಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಲು ಜಿಎಸ್‌ಟಿ ಮಂಡಳಿಯು ತೀರ್ಮಾನಿಸಿದೆ. ಗ್ರಾಮೀಣ ಯುವಕರು ಈ ಆಟಗಳ ಚಟಕ್ಕೆ ಬಿದ್ದಿದ್ದು, ಮಾನಸಿಕ ಅನಾರೋಗ್ಯದ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಶೇ 28ರಷ್ಟು ತೆರಿಗೆ ವಿಧಿಸುವುದಕ್ಕಿಂತ, ರಾಜ್ಯದಲ್ಲಿ ಲಾಟರಿ ನಿಷೇಧಿಸಿರುವಂತೆ ಆನ್‌ಲೈನ್ ಆಟಗಳಿಗೂ ಪೂರ್ಣವಿರಾಮ ನೀಡಬೇಕಾದ ಅಗತ್ಯವಿದೆ.

ಸೀಮಾ ಎ.ಡಿ., ಸಕಲೇಶಪುರ

ಬರುವುದೇ ‘ಪ್ರಧಾನಿಯವರ ಪ್ರಶ್ನಾ ಸಮಯ’?

ಸಂಸತ್ತಿನಲ್ಲಿ ಹೇಳಿಕೆ ನೀಡಲು ಪ್ರಧಾನಿಯವರು ಒಪ್ಪುತ್ತಿಲ್ಲದಿರುವುದೇ ಕಲಾಪಗಳಲ್ಲಿ ಪಾಲ್ಗೊಳ್ಳಲು ವಿರೋಧ ಪಕ್ಷಗಳಿಗೆ ಇರುವ ಏಕೈಕ ಅಡ್ಡಿ ಎಂಬುದು ಈಗ ಸ್ಪಷ್ಟವಾಗಿದೆ. ತಮ್ಮ ಹೇಳಿಕೆಗಳ ನಂತರ ಬರುವ ಪ್ರಶ್ನೆಗಳನ್ನು ಎದುರಿಸುವ ವಿಶ್ವಾಸ ಪ್ರಧಾನಿಯವರಲ್ಲಿ ಇಲ್ಲದಿರುವುದೇ ಅವರು ಹೇಳಿಕೆ ನೀಡಲು ನಿರಾಕರಿಸುತ್ತಿರುವುದಕ್ಕೆ ನೈಜ ಕಾರಣವಾಗಿರಬಹುದು ಎಂದು ಬಹುತೇಕರು ನಂಬಿರುವಂತಿದೆ.

ಇಂತಹ ಸಂದರ್ಭ ಮುಂದೆ ಎದುರಾಗದಂತೆ ನೋಡಿಕೊಳ್ಳಲು ನಮ್ಮ ಸಂಸತ್ತು, ಬ್ರಿಟನ್ನಿನ ಸಂಸತ್ತಿನಲ್ಲಿ ಇರುವಂತೆ, ‘ಪ್ರಧಾನಿಯವರ ಪ್ರಶ್ನಾ ಸಮಯ’ವನ್ನು ವಾರಕ್ಕೊಮ್ಮೆಯಾದರೂ ನಿಗದಿ ಮಾಡಬಹುದು. ಇದು ಸಾಧ್ಯವಾಗಬೇಕು ಎಂದಾದರೆ ಸಂಸತ್ತು ನಿಯಮ ರೂಪಿಸಬೇಕು– ಪ್ರಧಾನಿಯವರು ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂಬ ನಿಯಮ ಬರಬೇಕು. ನಮ್ಮ ದೇಶ ‘ಪ್ರಜಾಪ್ರಭುತ್ವದ ತಾಯಿ’ ಎಂದು ಪ್ರಧಾನಿಯವರು ಹಲವು ಬಾರಿ ಹೇಳಿದ್ದಾರೆ. ಅವರು ಈ ಪ್ರಸ್ತಾವಕ್ಕೆ ಒಪ್ಪುವರೇ?

ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಪ್ರಬುದ್ಧ ರಾಜಕಾರಣಿಗಳಾಗಿ...

ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರು ಸಚಿವ ಈಶ್ವರ ಖಂಡ್ರೆ ಅವರನ್ನು ಟೀಕಿಸುವ ಭರದಲ್ಲಿ, ‘ಕಲ್ಯಾಣ ಕರ್ನಾಟಕ ಪ್ರದೇಶದಿಂದ ಬಂದ ಸಚಿವ ಖಂಡ್ರೆ ಅವರಿಗೆ ಮಲೆನಾಡಿನವರ ಸಮಸ್ಯೆ ಏನು ತಿಳಿಯುತ್ತದೆ? ಅವರ ಕಡೆ ಮರಗಳೇ ಇಲ್ಲ. ಅಲ್ಲಿನ ಜನ ಸುಟ್ಟು ಕರಕಲಾಗಿದ್ದಾರೆ. ಅದಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರೇ ಸಾಕ್ಷಿ’ ಎಂದು ವಿವಾದಾತ್ಮಕ ಹೇಳಿಕೆ ನೀಡಿ, ಬಳಿಕ ವಿಷಾದ ವ್ಯಕ್ತಪಡಿಸಿದ್ದಾರೆ. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎನ್ನುವ ಸಾರ್ವಕಾಲಿಕ ಗಾದೆ ಮಾತನ್ನು ಜ್ಞಾನೇಂದ್ರ ಅವರು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಹಿಂದೊಮ್ಮೆ ಮೈಸೂರಿನಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ಅತ್ಯಾಚಾರ ನಡೆದಿದ್ದಾಗ ಇದೇ ಜ್ಞಾನೇಂದ್ರ ಗೃಹ ಸಚಿವರಾಗಿದ್ದರು. ‘ಅತ್ಯಾಚಾರಕ್ಕೆ ಒಳಗಾದ ಹುಡುಗಿ ಯಾಕೆ ರಾತ್ರಿ ಸಮಯದಲ್ಲಿ ಅಲ್ಲಿಗೆ ಹೋಗಬೇಕಿತ್ತು’ ಎನ್ನುವ ಉಡಾಫೆಯ ಮಾತನಾಡಿ ಅವರು ಸರ್ಕಾರವನ್ನೇ ಪೇಚಿಗೆ ಸಿಲುಕಿಸಿದ್ದರು. ಇನ್ನಾದರೂ ಅವರಿಗೆ ತಮ್ಮ ಮಾತಿನ ಮೇಲೆ ಹಿಡಿತ ಇರಲಿ. ಮೊದಲು ಮಾತನಾಡಿ ನಂತರ ವಿಷಾದ, ಕ್ಷಮೆ ಕೇಳುವ ಬದಲು, ಪ್ರಬುದ್ಧ ರಾಜಕಾರಣಿಗಳಾಗುವತ್ತ ಜ್ಞಾನೇಂದ್ರ ಸಮೇತ ಎಲ್ಲ ರಾಜಕಾರಣಿಗಳೂ ಹೆಜ್ಜೆಯನ್ನಿಡಬೇಕು.

ರಾಜು ಬಿ. ಲಕ್ಕಂಪುರ, ಜಗಳೂರು

ಉಡುಪಿಯಲ್ಲಿ ಗರ್ಜನೆ, ಮಣಿಪುರದಲ್ಲಿ ಮೌನ!

ಉಡುಪಿಯ ಕಾಲೇಜೊಂದರ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ವಿರುದ್ಧದ ಗರ್ಜನೆಯು ಮಣಿಪುರದಲ್ಲಿ ನಡೆದ ಕುಕಿ ಬುಡುಕಟ್ಟು ಮಹಿಳೆಯರ ಬೆತ್ತಲೆ ಮೆರವಣಿಗೆ ಮತ್ತು ಅತ್ಯಾಚಾರದ ವಿರುದ್ಧ ಯಾಕೆ ಕೇಳಿಬರುತ್ತಿಲ್ಲ? ಮಹಿಳೆಯರ ಕಷ್ಟ, ನೋವು, ಹಿಂಸಾಚಾರದ ವಿರುದ್ಧ ಧ್ವನಿ ಎತ್ತಲು, ಹೋರಾಡಲು ಮತ್ತು ಕಠಿಣ ಕಾನೂನು ಜಾರಿಗೆ ತರಲು ಜಾತಿ, ಧರ್ಮ, ಪಕ್ಷ ಹಾಗೂ ಜನಾಂಗ ಮುಖ್ಯವೋ ಅಥವಾ ಮಾನವೀಯತೆ, ಸಮಾನತೆ ಮುಖ್ಯವೋ?

ಮಣಿಪುರದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ ಸಮರ್ಪಕವಾಗಿ ತನಿಖೆ ನಡೆಸುವಲ್ಲಿನ ಅಸಾಮರ್ಥ್ಯ, ವಿಳಂಬ ಮತ್ತು ನಿರ್ಲಕ್ಷ್ಯವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಮಣಿಪುರದ ವಿಷಯದಲ್ಲಿ ಮೌನ ಮತ್ತು ಉಡುಪಿ ಪ್ರಕರಣದ ವಿರುದ್ಧ ನಡೆಯುತ್ತಿರುವ ಹೋರಾಟ ಏನನ್ನು ತಿಳಿಸುತ್ತದೆ? ಆದರೆ ಅಲ್ಲೂ ಇಲ್ಲೂ ಬಲಿಪಶು ಆದವರು ಮಹಿಳೆಯರೇ. ಹೀಗಿದ್ದರೂ ಹೋರಾಟದಲ್ಲಿ ಮಾತ್ರ ಏಕೆ ತಾರತಮ್ಯ?! ಎಲ್ಲ ಮಹಿಳೆಯರೂ ಒಂದೇ. ಅವರ ನೋವಿಗೆ ಮತ್ತು ಆಗಿರುವ ಅವಮಾನಕ್ಕೆ ರಾಜಕೀಯ ಬಣ್ಣ ಬಳಿಯದೆ, ಹಿಂಸಾಚಾರಕ್ಕೆ ಒಳಗಾದ ಎಲ್ಲರಿಗೂ ಆದಷ್ಟು ಬೇಗ ನ್ಯಾಯ ಸಿಗುವಂತಾಗಲಿ.

ನಿರ್ಮಲಾ ನಾಗೇಶ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

370ನೇ ವಿಧಿ ಜಮ್ಮು–ಕಾಶ್ಮೀರ ಪ್ರತ್ಯೇಕ ಸಂವಿಧಾನ

• ಜಯಸಿಂಹ ಆರ್., ಸುಕೃತ ಎಸ್.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿ ಈಗ ಮತ್ತೊಮ್ಮೆ ಚರ್ಚೆಗೆ ಬಂದಿದೆ. 370ನೇ ವಿಧಿಯ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನವನ್ನು ಕೇಂದ್ರ ಸರ್ಕಾರವು 2019ರ ಆಗಸ್ಟ್ 6ರಂದು ಎರಡು 'ಸಾಂವಿಧಾನಿಕ ಆದೇಶ'ಗಳನ್ನು ಹೊರಡಿಸುವ ಮೂಲಕ ವಾಪಸ್ ಪಡೆದಿತ್ತು. ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗಿದ್ದ ಅರ್ಜಿಗಳನ್ನು, ನಾಲ್ಕು ವರ್ಷಗಳ ನಂತರ ವಿಚಾರಣೆಗೆ ಎತ್ತಿಕೊಳ್ಳಲಾಗಿದೆ. 370ನೇ ವಿಧಿಯ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನವನ್ನು ಕೇಂದ್ರ ಸರ್ಕಾರ ಹೇಗೆ ವಾಪಸ್ ಪಡೆಯಿತು ಎಂಬುದರ ಚರ್ಚೆ, ನ್ಯಾಯಾಲಯದಲ್ಲಿನ ವಿಚಾರಣೆ ನಂತರ ಆರಂಭವಾಗಿದೆ.

ಅರ್ಜಿದಾರರ ಪರ ವಕಾಲತ್ತು ವಹಿಸಿಕೊಂಡಿರುವ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, 'ಜಮ್ಮು–ಕಾಶ್ಮೀರದ ಸಂವಿಧಾನ ರಚನಾ ಸಮಿತಿಯ ಶಿಫಾರಸಿನ ಆಧಾರದಲ್ಲಿಯೇ ರಾಷ್ಟ್ರಪತಿಯು 370ನೇ ವಿಧಿಯ ಅಡಿಯಲ್ಲಿ ನೀಡಿದ ಸ್ಥಾನಮಾನವನ್ನು ನಿಷ್ಕ್ರಿಯ ಮಾಡಬಹುದು ಎಂದು ಸಂವಿಧಾನವು ಹೇಳುತ್ತದೆ. ಈಗ ಜಮ್ಮು–ಕಾಶ್ಮೀರದ ಸಂವಿಧಾನ ರಚನಾ ಸಮಿತಿಯೇ ಇಲ್ಲದಿದ್ದ ಮೇಲೆ, ಯಾವ ಆಧಾರದಲ್ಲಿ ಕೇಂದ್ರ ಸರ್ಕಾರವು ಈ ಕ್ರಮ ತೆಗೆದುಕೊಂಡಿದೆ? ಈ ಕ್ರಮ ಸಂಪೂರ್ಣ ಅಸಾಂವಿಧಾನಿಕ' ಎಂದು ಸಿಬಲ್ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದ ಎದುರು ಪ್ರತಿಪಾದಿಸಿದ್ದಾರೆ.

ವಿಶೇಷ ಸ್ಥಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ದೇಶದ ಹಲವೆಡೆ ಪ್ರತಿಭಟನೆ ನಡೆದಿತ್ತು

ಸಂವಿಧಾನದ 370ನೇ ವಿಧಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತದೆ ಎಂದಷ್ಟೇ ಹೇಳಿದರೆ, ಆ ವಿಶೇಷ ಸ್ಥಾನದ ವ್ಯಾಪ್ತಿ ಅರ್ಥವಾಗುವುದಿಲ್ಲ. ಜಮ್ಮು–ಕಾಶ್ಮೀರವು ತನ್ನದೇ ಪ್ರತ್ಯೇಕ ಸಂವಿಧಾನ ರಚಿಸಿಕೊಳ್ಳುವ, ತನ್ನದೇ ಪ್ರತ್ಯೇಕ ಕಾಯ್ದೆ-ಕಾನೂನುಗಳನ್ನು ರೂಪಿಸಿಕೊಳ್ಳುವ ಅಧಿಕಾರವನ್ನು ಈ ವಿಧಿ ಆ ರಾಜ್ಯಕ್ಕೆ ನೀಡಿತ್ತು. ಆ ಪ್ರಕಾರ ಜಮ್ಮು–ಕಾಶ್ಮೀರ ತನ್ನದೇ ಪ್ರತ್ಯೇಕ ಸಂವಿಧಾನವನ್ನು ರಚಿಸಿಕೊಂಡಿತ್ತು. ಜಮ್ಮು–ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನ ರಚಿಸಿಕೊಳ್ಳುವ ಅಧಿಕಾರ ನೀಡುವ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ (1949ರ ಅಕ್ಟೋಬರ್ 17) ಆಕ್ಷೇಪ ವ್ಯಕ್ತವಾಗಿತ್ತು. ಆ ಅಧಿಕಾರವನ್ನು ಏಕೆ ನೀಡಲಾಗಿದೆ ಎಂಬುದನ್ನು ಸಂವಿಧಾನ ಕರಡು ರಚನಾ ಸಭೆಯ ಸದಸ್ಯರು ವಿವರಿಸಿದ ನಂತರ, ಆಕ್ಷೇಪವನ್ನು ಬದಿಗೊತ್ತಲಾಯಿತು ಮತ್ತು ಸಂವಿಧಾನಕ್ಕೆ 370ನೇ ವಿಧಿಯನ್ನು ಸೇರಿಸಿಕೊಳ್ಳಲಾಯಿತು.

ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಕೂಡಲೇ ದೇಶದ ಎಲ್ಲಾ 500 ಸಂಸ್ಥಾನಗಳು ಭಾರತ ಒಕ್ಕೂಟವನ್ನು ಸೇರಿರಲಿಲ್ಲ. ಹಾಗೆ ಹೊರಗೆ ಉಳಿದಿದ್ದ ಸಂಸ್ಥಾನಗಳಲ್ಲಿ ಜಮ್ಮು–ಕಾಶ್ಮೀರ ಸಹ ಒಂದು. ಆದರೆ ಪಾಕಿಸ್ತಾನದ ಅತಿಕ್ರಮಣದ ನಂತರ 1948ರ ಮಾರ್ಚ್‌ನಲ್ಲಿ ಜಮ್ಮು–ಕಾಶ್ಮೀರವು ಭಾರತದೊಂದಿಗೆ ವಿಲೀನ ಮಾಡಲು ಅಲ್ಲಿನ ರಾಜ ಹರಿಸಿಂಗ್ ಒಪ್ಪಿಕೊಂಡು ಸಹಿ ಮಾಡಿದ್ದರು. ಜಮ್ಮು–ಕಾಶ್ಮೀರಕ್ಕೆ ಪ್ರತ್ಯೇಕ ಸ್ಥಾನ ನೀಡುವ, ವಿಶೇಷ ಅಧಿಕಾರ ನೀಡುವ, ಹಲವಾರು ವಿಷಯಗಳಲ್ಲಿ ಪ್ರತ್ಯೇಕ ಕಾನೂನು ರಚಿಸಿಕೊಳ್ಳುವ ಅಧಿಕಾರವನ್ನು ನೀಡಬೇಕು ಎಂಬ ಷರತ್ತುಗಳಿದ್ದ ಒಪ್ಪಂದಕ್ಕೆ ಭಾರತ ಸರ್ಕಾರವೂ ಸಹಿ ಮಾಡಿತ್ತು. ಈ ಷರತ್ತುಗಳನ್ನೇ ಸಂವಿಧಾನದ 370ನೇ ವಿಧಿಯಲ್ಲಿ ಸೇರಿಸಲಾಗಿತ್ತು.

ಭಾರತವು ಸಂವಿಧಾನವನ್ನು ಅಂಗೀಕರಿಸಿಕೊಂಡ ನಂತರ, ಪ್ರತ್ಯೇಕ ಸಂವಿಧಾನವನ್ನು ರಚಿಸಿಕೊಳ್ಳುವ ಅಧಿಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ದತ್ತವಾಯಿತು. ಈ ಪ್ರಕಾರ ಚುನಾವಣೆ ನಡೆದು, ಆಯ್ಕೆಯಾದ 75 ಸದಸ್ಯರ ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಭೆಯು 1951ರ ಸೆಪ್ಟೆಂಬರ್‌ನಲ್ಲಿ ರಚನೆಯಾಯಿತು. ಐದು ವರ್ಷಗಳ ಅವಧಿಯಲ್ಲಿ ಒಟ್ಟು 56 ಕಲಾಪಗಳನ್ನು ಸಂವಿಧಾನ ರಚನಾ ಸಭೆ ನಡೆಸಿತ್ತು. ಅನಂತರ 1956ರ ನವೆಂಬರ್ 17ರಂದು ಜಮ್ಮು ಮತ್ತು ಕಾಶ್ಮೀರದ ಸಂವಿಧಾನವನ್ನು ಅಂಗೀಕರಿಸಲಾಗಿತ್ತು. 'ಜಮ್ಮು ಮತ್ತು ಕಾಶ್ಮೀರ ರಾಜ್ಯವು ಭಾರತ ಒಕ್ಕೂಟದ ಅವಿಭಾಜ್ಯ ಅಂಗ' ಎಂದು ಆ ಸಂವಿಧಾನದಲ್ಲಿ ಘೋಷಿಸಲಾಗಿತ್ತು. ಸಂವಿಧಾನ ರಚನೆಯ ಕಾರ್ಯ ಮುಗಿದ ಕಾರಣ, ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಭೆಯನ್ನು 1957ರಲ್ಲಿ ಬರ್ಖಾಸ್ತು ಮಾಡಲಾಗಿತ್ತು.

ಸಂವಿಧಾನ ರಚನಾ ಸಭೆಯಲ್ಲೂ ಚರ್ಚೆ

1949 ಅಕ್ಟೋಬರ್ 17ರಂದು ಸಂವಿಧಾನ ಕರಡು ರಚನಾ ಸಭೆಯಲ್ಲಿ 306ಎ (ಈಗ 370ನೇ ವಿಧಿ) ವಿಧಿಯ ಕುರಿತು ಚರ್ಚೆ ನಡೆಯಿತು. ಎನ್.ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸಭೆಯಲ್ಲಿ ಈ ವಿಧಿಯನ್ನು ಮಂಡಿಸಿದ್ದರು. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಬಗ್ಗೆ ಮೌಲಾನಾ ಹಸ್ರತ್ ಮೋಹನಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. 'ಯಾಕಾಗಿ ಇಂಥ ತಾರತಮ್ಯ ಮಾಡಲಾಗುತ್ತಿದೆ' ಎಂದು ಪ್ರಶ್ನಿಸಿದ್ದರು. ಈ ಪ್ರಶ್ನೆಗೆ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ವಿಸ್ತೃತವಾಗಿಯೇ ಉತ್ತರ ನೀಡಿದ್ದರು. ಆ ಉತ್ತರದ ಸಂಕ್ಷಿಪ್ತ ರೂಪವನ್ನು ಇಲ್ಲಿ ನೀಡಲಾಗಿದೆ.

'ಕಾಶ್ಮೀರದ ಸ್ಥಿತಿಗೂ ಭಾರತದ ಇತರ ರಾಜ್ಯಗಳ ಸ್ಥಿತಿಗೂ ಬಹಳ ಅಂತರವಿದೆ. ಭಾರತದೊಂದಿಗೆ ಸೇರಿಕೊಳ್ಳುವುದಕ್ಕೆ ಕಾಶ್ಮೀರ ಇನ್ನೂ ಸಿದ್ಧವಾಗಿಲ್ಲ. ಅದ್ದರಿಂದ ಕಾಶ್ಮೀರದ ವಿಚಾರಗಳಿಗೆ ಸಂಬಂಧಿಸಿದಂತೆ ವಿಶೇಷವಾದ ಮುತುವರ್ಜಿ ವಹಿಸುವ ಅಗತ್ಯವಿದೆ. ಯಾಕಾಗಿ ವಿಶೇಷ ಮುತುವರ್ಜಿ ವಹಿಸಬೇಕು ಎನ್ನುವುದಕ್ಕೆ ಹಲವು ಕಾರಣಗಳಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಆಂತರಿಕ ಯುದ್ಧ ನಡೆಯುತ್ತಿದೆ. ಇದೇ ವರ್ಷದ ಶುರುವಿನಲ್ಲಿ ಕದನ ವಿರಾಮ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಅದು ಜಾರಿಯಲ್ಲಿಯೂ ಇದೆ. ಆದರೂ ರಾಜ್ಯದಲ್ಲಿ ಸಾಮಾನ್ಯ ಸ್ಥಿತಿ ನಿರ್ಮಾಣವಾಗಿಲ್ಲ. ರಾಜ್ಯದ ಕೆಲವು ಭಾಗಗಳು ಇನ್ನೂವರೆಗೂ ಕೆಲವು ಬಂಡುಕೋರರ ಹಾಗೂ ಶತ್ರುಗಳ ಕೈಯಲ್ಲಿವೆ. ರಾಜ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವ ಸಂಸ್ಥೆಯ ಮೆಟ್ಟಿಲೇರಲಾಗಿದೆ. ಅದಿನ್ನೂ ಇತ್ಯರ್ಥವಾಗಿಲ್ಲ.

ಈ ಎಲ್ಲದರೊಂದಿಗೆ ಭಾರತ ಸರ್ಕಾರವು ಕಾಶ್ಮೀರದ ಜನರೊಂದಿಗೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತದೊಂದಿಗೆ ಸೇರಬೇಕೆ ಬೇಡವೇ ಎಂದು ನಿರ್ಧರಿಸುವ ಹಕ್ಕನ್ನು ಕಾಶ್ಮೀರದ ಜನರಿಗೆ ನೀಡಲಾಗಿದೆ. ಜನಮತಗಣನೆಯಲ್ಲಿ ಜನರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿರಬೇಕು. ಜನರ ಇಚ್ಛೆಯ ಅನುಸಾರವೇ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನೆ ಆಗಲಿದೆ. ಜೊತೆಗೆ, ಈ ರಾಜ್ಯದ ಮೇಲೆ ಕೇಂದ್ರ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಅಧಿಕಾರವಿದೆ ಎನ್ನುವುದು ಕೂಡ ಅಲ್ಲಿನ ಜನರ ಇಚ್ಛೆಯಂತೆಯೇ ನಡೆಯುತ್ತದೆ ಎಂಬುದಾಗಿ ಒಪ್ಪಂದವನ್ನು ನಾವು ಕಾಶ್ಮೀರದ ಜನರೊಂದಿಗೆ ಮಾಡಿಕೊಂಡಿದ್ದೇವೆ. ಮತ್ತು ನಾವು ಆ ಒಪ್ಪಂದಕ್ಕೆ ಬದ್ಧರಾಗಿರಬೇಕು' ಎಂದು ಅವರು ಉತ್ತರಿಸಿದ್ದರು

ಸಂವಿಧಾನ ಸಭೆಗಷ್ಟೇ ಶಿಫಾರಸು ಅಧಿಕಾರ

'ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯ ಅಡಿಯಲ್ಲಿ ನೀಡಲಾಗಿರುವ ವಿಶೇಷ ಸ್ಥಾನವು ತಾತ್ಕಾಲಿಕವಾದುದು' ಎಂದು 370ನೇ ವಿಧಿಯಲ್ಲಿ ಹೇಳಲಾಗಿದೆ. ಆದರೆ, ಅದನ್ನು ತೆಗೆದುಹಾಕಬೇಕು ಎಂದು ಹೇಳುವ ಅಧಿಕಾರ ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಮಿತಿಗಷ್ಟೇ ಇದೆ ಎಂದು ಈ ವಿಧಿ ಹೇಳುತ್ತದೆ.

370ನೇ ವಿಧಿ ಮತ್ತು ಅದರ ಅಡಿಯಲ್ಲಿ ಕೊಡಲಾಗಿರುವ ಅಧಿಕಾರಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಿಷ್ಕ್ರಿಯಗೊಳಿಸುವ ಅಧಿಕಾರವನ್ನು ರಾಷ್ಟ್ರಪತಿಗೆ 370(3)ನೇ ವಿಧಿ ನೀಡುತ್ತದೆ. ಆದರೆ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಮಿತಿಯ ಶಿಫಾರಸಿನ ನಂತರವಷ್ಟೇ 370ನೇ ವಿಧಿಯನ್ನು ರಾಷ್ಟ್ರಪತಿಯು ನಿಷ್ಕ್ರಿಯಗೊಳಿಸಬಹುದು ಎಂದು ಅದೇ ವಿಧಿಯಲ್ಲಿ ವಿವರಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಸಭೆಯು 1957ರ ಸೆಪ್ಟೆಂಬರ್‌ನಲ್ಲಿಯೇ ಬರ್ಖಾಸ್ತು ಆಗಿದೆ. ವಿಶೇಷ ಸ್ಥಾನವನ್ನು ತೆಗೆದುಹಾಕಿ ಎಂದು ಶಿಫಾರಸು ಮಾಡಲು ಸಂವಿಧಾನ ರಚನಾ ಸಮಿತಿಯೇ ಇಲ್ಲದ ಕಾರಣ, ತಾತ್ಕಾಲಿಕ ಸ್ವರೂಪದ ವಿಶೇಷ ಸ್ಥಾನವು ಶಾಶ್ವತ ಕಾನೂನಾಗಿದೆ. ಇದನ್ನು ಭಾರತದ ಸಂಸತ್ತು ತೆಗೆದುಹಾಕಲು ಬರುವುದಿಲ್ಲ ಎಂಬುದು ಅರ್ಜಿದಾರರ ವಾದ.

ಕೇಂದ್ರ ಸರ್ಕಾರ ಮಾಡಿದ್ದೇನು...

ಈ ವಿಧಿಯನ್ನು ನಿಷ್ಕ್ರಿಯಗೊಳಿಸಲು ಕೇಂದ್ರ ಸರ್ಕಾರವು ಕೆಲವು 'ಸಾಂವಿಧಾನಿಕ ಆದೇಶ'ಗಳ ಮೊರೆ ಹೋಗಿದೆ. '370ನೇ ವಿಧಿಯಲ್ಲಿ ಇರುವ 'ಸಂವಿಧಾನ ರಚನಾ ಸಮಿತಿ' ಎಂಬ ಪದಗಳನ್ನು 'ಶಾಸನ ಸಭೆ' ಎಂದು ಓದಿಕೊಳ್ಳಬೇಕು' ಎಂದು 2019ರ ಆಗಸ್ಟ್ 5ರಂದು ಸಾಂವಿಧಾನಿಕ ಆದೇಶವನ್ನು (ಸಂಖ್ಯೆ 272) ಹೊರಡಿಸಿದೆ.

ಆದರೆ, 2019ರ ಆಗಸ್ಟ್‌ನಲ್ಲಿ ಜಮ್ಮು–ಕಾಶ್ಮೀರದಲ್ಲಿ ವಿಧಾನಸಭೆಯೇ ಇರಲಿಲ್ಲ. ವರ್ಷದ ಹಿಂದೆಯೇ ವಿಧಾನಸಭೆಯನ್ನು ವಿಸರ್ಜಿಸಿ, ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು. ಹೀಗಾಗಿ ವಿಶೇಷ ಸ್ಥಾನವನ್ನು ತೆಗೆದುಹಾಕಿ ಎಂದು ಶಿಫಾರಸು ಮಾಡಲು ಶಾಸನಸಭೆಯೂ ಅಸ್ತಿತ್ವದಲ್ಲಿ ಇರಲಿಲ್ಲ. ಈ ತೊಡಕನ್ನು ನಿವಾರಿಸಿಕೊಳ್ಳಲು ಕೇಂದ್ರ ಸರ್ಕಾರವು ಇನ್ನೊಂದು ಸಾಂವಿಧಾನಿಕ ಆದೇಶವನ್ನು ಹೊರಡಿಸಿತು.

2019ರ ಆಗಸ್ಟ್ 5ರಂದೇ ಹೊರಡಿಸಿದ್ದ ಈ ಆದೇಶದಲ್ಲಿ, '370ನೇ ವಿಧಿಯ ಅಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಅಧಿಕಾರವನ್ನು ಸಂಸತ್ತಿನ ಶಿಫಾರಸಿನ ಆಧಾರದ ಮೇಲೆ ರಾಷ್ಟ್ರಪತಿಯು ನಿಷ್ಕ್ರಿಯಗೊಳಿಸಿದ್ದಾರೆ' ಎಂದು ಘೋಷಿಸಿತು.

ಈ ಮೂಲಕ ವಿಸೇಷ ಸ್ಥಾನವನ್ನು ವಾಪಸ್ ಪಡೆಯಿತು. ಜಮ್ಮು–ಕಾಶ್ಮೀರದ ಪ್ರತ್ಯೇಕ ಸಂವಿಧಾನ ಅನ್ವಯವಾಗುವುದಿಲ್ಲ ಎಂದು ಘೋಷಿಸಿತು. ಆದರೆ, 370ನೇ ವಿಧಿಯನ್ನು ಭಾರತ ಸಂವಿಧಾನದಲ್ಲಿ ಉಳಿಸಿಕೊಳ್ಳಲಾಯಿತು.



ಬೇರೆ ರಾಜ್ಯಗಳಿಗೂ ಇದೆ ವಿಶೇಷ ಸ್ಥಾನ

ಸಂವಿಧಾನದ 371ನೇ ವಿಧಿ ಮತ್ತು ಉಪವಿಧಿಗಳಲ್ಲಿ ಕೆಲವು ರಾಜ್ಯಗಳ ಕೆಲವು ಪ್ರದೇಶಗಳಿಗೆ ವಿಶೇಷ ಸ್ಥಾನಮಾನಗಳನ್ನು ನೀಡಲಾಗಿದೆ. ಮಹಾರಾಷ್ಟ್ರದ ವಿದರ್ಭ ಮತ್ತು ಮರಾಠವಾಡಾ, ಗುಜರಾತ್‌ನ ಕಛ್ ಮತ್ತು ಸೌರಾಷ್ಟ್ರ (371), ನಾಗಾಲ್ಯಾಂಡ್ (371ಎ), ಅಸ್ಸಾಂ (371ಬಿ), ಮಣಿಪುರ (371ಸಿ), ಆಂಧ್ರ ಪ್ರದೇಶ ಅಥವಾ ತೆಲಂಗಾಣ (371ಡಿ), //ಧ್ರ ಪ್ರದೇಶದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ (371ಇ)// ಸಿಕ್ಕಿಂ (371ಎಫ್), ಮಿಜೋರಾಂ (371ಜಿ), ಅರುಣಾಚಲ ಪ್ರದೇಶ (371ಎಚ್), ಗೋವಾ (371ಐ), ಕರ್ನಾಟಕದ ಹೈದರಾಬಾದ್–ಕರ್ನಾಟಕ ಪ್ರದೇಶ (371ಜೆ) – ಈ ಎಲ್ಲಾ ಪ್ರದೇಶಗಳಿಗೆ ಈ ಎಲ್ಲಾ ವಿಧಿ-ಉಪವಿಧಿಗಳ ಅನ್ವಯ ಆಯಾ ರಾಜ್ಯಗಳ ಹುಟ್ಟು, ಅವಶ್ಯಕತೆಗೆ ಅನುಗುಣವಾಗಿ ವಿಶೇಷ ಅವಕಾಶ, ಸ್ಥಾನಮಾನಗಳನ್ನು ನೀಡಲಾಗಿದೆ.

ಭಾರತದ ಈಶಾನ್ಯ ದಿಕ್ಕಿನಲ್ಲಿರುವ ರಾಜ್ಯಗಳಾದ ಅಸ್ಸಾಂ, ಮಣಿಪುರ, ಮಿಜೋರಾಂಗಳ ಆಯ್ದ ಪ್ರದೇಶಗಳಿಗೆ ಈ ವಿಧಿಗಳ ಮೂಲಕ ಸ್ವಾಯತ್ತೆ ನೀಡಲಾಗಿದೆ. ಈ ರಾಜ್ಯಗಳಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿರುವ ಕಾರಣ ಈ ಅನುಕೂಲಗಳನ್ನು ಮಾಡಿಕೊಡಲಾಗಿದೆ. ಈ ರಾಜ್ಯಗಳಲ್ಲಿ ಬುಡಕಟ್ಟು ಸಮುದಾಯಗಳು ಪ್ರಾಬಲ್ಯ ಹೊಂದಿರುವ ಜಿಲ್ಲೆಗಳಲ್ಲಿ ಆಯಾ ಪ್ರದೇಶದ ಚುನಾಯಿತರು ಹಾಗೂ ಕೆಲವು ಸದಸ್ಯರನ್ನು ಒಳಗೊಂಡ ಮಂಡಳಿಗಳನ್ನು ರಚಿಸಿಕೊಳ್ಳಲು ಸಂವಿಧಾನ ಅವಕಾಶ ಮಾಡಿಕೊಟ್ಟಿದೆ. ಈ ಮಂಡಳಿಗಳು, ಈ ಪ್ರದೇಶಗಳ ಆಡಳಿತವು ನೇರವಾಗಿ ಆಯಾ ರಾಜ್ಯಗಳ ರಾಜ್ಯಪಾಲರಿಗೆ ಸಂಬಂಧಿಸಿದವಾಗಿರುತ್ತವೆ. ಈ ರಾಜ್ಯಗಳ ಸಂಬಂಧ ಅಲ್ಲಿನ ಸರ್ಕಾರ ಯಾವುದೇ ಕಾನೂನು ಅಥವಾ ತೀರ್ಮಾನ ತೆಗೆದುಕೊಳ್ಳಬೇಕಿದ್ದರೂ ಈ ಮಂಡಳಿಗಳೊಂದಿಗೆ ಚರ್ಚಿಸಿ, ಒಪ್ಪಿಗೆ ಪಡೆದುಕೊಂಡ ನಂತರವಷ್ಟೇ ಜಾರಿ ಮಾಡಬೇಕಾಗುತ್ತವೆ.

ನಾಗಾಲ್ಯಾಂಡ್ ಹಾಗೂ ಮಿಜೋರಾಂಗಳಲ್ಲಿರುವ ಬುಡಕಟ್ಟು ಸಮುದಾಯಗಳ ಧಾರ್ಮಿಕ ಸಾಮಾಜಿಕ, ಅಲ್ಲಿನ ಸಾಂಪ್ರದಾಯಿಕ ಕಾನೂನುಗಳಿಗೆ ದೇಶದ ಇತರೆ ಕಡೆಗಳಲ್ಲಿ ಇರುವ ಕಾನೂನುಗಳು ಅನ್ವಯವಾಗುವುದಿಲ್ಲ. ಇಂಥ ವಿಷಯಗಳಲ್ಲಿ ಕೇಂದ್ರ ಸರ್ಕಾರವು ಯಾವುದೇ ಬದಲಾವಣೆಗಳನ್ನು ಮಾಡಬೇಕೆಂದಿದ್ದರೆ, ಅಲ್ಲಿನ ಶಾಸನಸಭೆಯು ಒಪ್ಪಿಗೆ ನೀಡಬೇಕಿದೆ.

ಆಧಾರ: ಭಾರತ ಸಂವಿಧಾನದ 370ನೇ ವಿಧಿ, ಸಂವಿಧಾನ ಆದೇಶ 272 ಮತ್ತು 273, ಜಮ್ಮು–ಕಾಶ್ಮೀರ ಸಂವಿಧಾನ, ಸಂವಿಧಾನ ರಚನಾ ಸಭೆಯ ಚರ್ಚೆಗಳು, ಪಿಐಬಿ, ಪಿಟಿಐ

ಅನಂತಾಭಿನಯಕ್ಕೆ 50 ವಸಂತ

ಅನಂತ ನಾಗ್

ಕನ್ನಡ ಚಿತ್ರರಂಗದ ಹಿರಿಯ ನಟ ಅನಂತ ನಾಗ್ ಚಿತ್ರರಂಗದಲ್ಲಿ 50 ವರ್ಷಗಳನ್ನು ಪೂರೈಸಿದ್ದು, ಚಿತ್ರರಂಗದ ಅನೇಕ ಗಣ್ಯರು ಅವರಿಗೆ ಶುಭ ಹಾರೈಸಿದ್ದಾರೆ.

ರಂಗಭೂಮಿ ಹಿನ್ನೆಲೆಯಿಂದ ಬಂದ ಅನಂತ ನಾಗ್ 'ಸಂಕಲ್ಪ' (1973) ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದರು. ನಟ ಶಿವರಾಜ್ ಕುಮಾರ್, ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ ಸೇರಿದಂತೆ ಚಿತ್ರರಂಗದ ಅನೇಕರು ಅವರಿಗೆ ಶುಭಾಶಯ ಕೋರಿದ್ದಾರೆ.

ಅನಂತ ನಾಗ್ ಜೊತೆ ಇರುವ ಚಿತ್ರವೊಂದನ್ನು ತಮ್ಮ ಸಾಮಾಜಿಕ ಜಾಲತಾಣ ಪುಟದಲ್ಲಿ ಹಂಚಿಕೊಂಡಿರುವ ಶಿವರಾಜ್‌ಕುಮಾರ್, 'ಚಿತ್ರರಂಗದಲ್ಲಿ 50 ವರ್ಷ ಯಶಸ್ವಿಯಾಗಿ ಪೂರೈಸಿದ ನಿಮಗೆ ಹೃತ್ಪೂರ್ವಕ ಅಭಿನಂದನೆ. ನಿಮ್ಮ ಪ್ರತಿಭೆ, ವರ್ಚಸ್ಸು ತಲೆಮಾರುಗಳವರೆಗೆ ಪ್ರೇರಣೆ' ಎಂದು ಬರೆದುಕೊಂಡಿದ್ದಾರೆ.

ಗೋಧಿ ಬಣ್ಣ ಸಾಧಾರಣ ಮೈಕಟ್ಟಿನ ಈ ನಟ ಕನ್ನಡ ಪ್ರೇಕ್ಷಕನ ಮನಸಿನಿಂದ ಎಂದೂ ಕಾಣೆಯಾಗೋದಿಲ್ಲ. ಬಯಲುದಾರಿಯ ಹೆಲಿಕಾಪ್ಟರಿನೊಳಗೆ, 'ನಾರದ ವಿಜಯ'ದ ತಂಬೂರಿ ಜೊತೆಗೆ, 'ಗಣೇಶನ ಮದುವೆ'ಯ ವಠಾರದಲ್ಲಿ, 'ಬೆಳದಿಂಗಳ ಬಾಲೆ'ಯ ಕನಸಿನೊಳಗೆ, 'ಮುಂಗಾರುಮಳೆ'ಯ ಕಣ್ಣೀರಿನಲ್ಲಿ ಅವರ ಜೊತೆ ಒದ್ದೆಯಾದವರೆಷ್ಟೋ.

ನಟ ರಿಷಬ್ ಶೆಟ್ಟಿ ತಮ್ಮ ಸಾಮಾಜಿಕ ಜಾಲತಾಣದ ಪುಟದಲ್ಲಿ ಅನಂತ್‌ನಾಗ್ ಅಭಿನಯದ ಚಿತ್ರಗಳ ವಿಶೇಷ ವಿಡಿಯೊ ಮಾಡಿ ಹಂಚಿಕೊಂಡಿದ್ದಾರೆ. 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಚಿತ್ರದ ಅನಂತ ಪದ್ಮನಾಭರಿಗೆ ಅನಂತ ಶುಭಾಶಯಗಳು' ಎಂದು ಶುಭ ಹಾರೈಸಿದ್ದಾರೆ.

ಡಾನ್ಸು, ಫೈಟು ಮಾಡದೆಯೂ ಹೆಣ್ಣುಮಕ್ಕಳ ಹೃದಯ ಗೆಲ್ಲಬಹುದು ಅಂತ ತೋರಿಸಿಕೊಟ್ಟ ಹೀರೋ ಅನಂತ ನಾಗ್. ಇಂಥ ಅದ್ವಿತೀಯ ನಟನಿಗೆ 'ಪ್ರಜಾವಾಣಿ'ಯ ಚೊಚ್ಚಲ 'ಸಿನಿ ಸಮ್ಮಾನ'ದಲ್ಲಿ 'ಜೀವಮಾನ ಶ್ರೇಷ್ಠ ಸಾಧನೆ' ಪುರಸ್ಕಾರ ನೀಡಿ ಗೌರವಿಸಿತ್ತು.

ರಾಜೀವ್‌ಗೆ ಕಿಚ್ಚ ಸುದೀಪ್ ಸಾಥ್

ಶ್ರೀಜಿತ

'ಬಿಗ್‌ಬಾಸ್' ಖ್ಯಾತಿಯ ನಟ ರಾಜೀವ್ ನಾಯಕರಾಗಿ ನಟಿಸಿರುವ 'ಉಸಿರೇ ಉಸಿರೇ' ಚಿತ್ರದಲ್ಲಿ ಕಿಚ್ಚ ಸುದೀಪ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಚಿತ್ರಕ್ಕಾಗಿ ಕೆ.ಕಲ್ಯಾಣ್ ಬರೆದಿರುವ 'ಉಸಿರೇ ನನ್ನ ಉಸಿರೇ' ಹಾಡು ಇತ್ತೀಚೆಗಷ್ಟೆ ಬಿಡುಗಡೆಯಾಯಿತು. ವಿವೇಕ್ ಚಕ್ರವರ್ತಿ ಸಂಗೀತ ನೀಡಿರುವ ಗೀತೆಗೆ ವಾಸುಕಿ ವೈಭವ್ ಧ್ವನಿಯಿದೆ.

'ಇದು ನನ್ನ ಮೊದಲ ನಿರ್ಮಾಣದ ಚಿತ್ರ. ಈ ಚಿತ್ರ ನಿರ್ಮಾಣ ಮಾಡಲು ಕಿಚ್ಚ ಸುದೀಪ್ ಸ್ಫೂರ್ತಿ. ಕ್ಲೈಮ್ಯಾಕ್ಸ್‌ನಲ್ಲಿ ಸುದೀಪ್ ಸುಮಾರು 18 ನಿಮಿಷ ಕಾಣಿಸಿಕೊಳ್ಳುತ್ತಾರೆ' ಎಂದರು ಎಂದರು ನಿರ್ಮಾಪಕ ಪ್ರದೀಪ್ ಯಾದವ್.

'ಚಿತ್ರೀಕರಣ ಮುಕ್ತಾಯವಾಗಿದ್ದು, ನಂತರದ ಕೆಲಸಗಳು ನಡೆಯುತ್ತಿವೆ. ಸೆಪ್ಟೆಂಬರ್‌ನಲ್ಲಿ ಚಿತ್ರ ತೆರೆಗೆ ತರಲು ಆಲೋಚಿಸಿದ್ದೇವೆ. ರಾಜೀವ್ ಅವರಿಗೆ ನಾಯಕಿಯಾಗಿ ಶ್ರೀಜಿತ ನಟಿಸಿದ್ದಾರೆ. ತೆಲುಗಿನ ಅಲಿ ಹಾಗೂ ಬ್ರಹ್ಮಾನಂದಂ ನಮ್ಮ ಚಿತ್ರದಲ್ಲಿ ಒಟ್ಟಾಗಿ ನಟಿಸಿದ್ದಾರೆ. ಡೈನಾಮಿಕ್ ಸ್ಟಾರ್ ದೇವರಾಜ್, ಸಾಧುಕೋಕಿಲ, ಮಂಜು ಪಾವಗಡ, ತಾರಾ, ಸುಚೇಂದ್ರ ಪ್ರಸಾದ್, ರಾಜೇಶ್ ನಟರಂಗ, ಶೈನಿಂಗ್ ಸೀತಾರಾಮು, ಜಗಪ್ಪ, ಸುಶ್ಮಿತಾ ಇನ್ನೂ ಮುಂತಾದವರಿದ್ದಾರೆ' ಎಂದರು ನಿರ್ದೇಶಕ ಸಿ.ಎಂ.ವಿಜಯ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ದಿ ರಾಕ್' ಖ್ಯಾತಿಯ ಪ್ರಸಿದ್ಧ ಹಾಲಿವುಡ್ ನಟ ಡ್ವೈನ್ ಜಾನ್ಸನ್ ಅವರು ಸನಾತನ ಧರ್ಮಕ್ಕೆ ಮತಾಂತರಗೊಂಡಿದ್ದಾರೆ' ಎಂಬಂಥ ಬರಹವು ಜಾನ್ಸನ್ ಅವರು ಅರ್ಚಕನ ವೇಷದಲ್ಲಿರುವ ಫೋಟೊದೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆ ಆಗುತ್ತಿದೆ. ಸಚ್ಚಿದಾನಂದ (ಬ್ಲೂ ಟಿಕ್) ಎಂಬ ಟ್ವಿಟರ್ ಖಾತೆಯಲ್ಲಿ ಈ ಫೋಟೊ ಇದೇ ವರ್ಷದ ಮೇ 28ರಂದು ಹಂಚಿಕೆಯಾಗಿದ್ದು, 69 ಸಾವಿರ ಮಂದಿ ಈ ಟ್ವೀಟ್ ಅನ್ನು ವೀಕ್ಷಿಸಿದ್ದಾರೆ. ಆದರೆ, ಈ ಫೋಟೊವನ್ನು ಕೃತಕ ಬುದ್ಧಿಮತ್ತೆಯ ಸಹಾಯದಿಂದ ಸೃಷ್ಟಿಸಲಾಗಿದೆ.

✓ ಏಪ್ರಿಲ್ 22ರಂದು ಫೇಸ್‌ಬುಕ್‌ನಲ್ಲಿ ವ್ಯಕ್ತಿಯೊಬ್ಬರು, 'ಅರ್ಚಕರಾಗಿ ಡ್ವೈನ್ ಜಾನ್ಸನ್ ಅವರು ಮಂದಿರದಲ್ಲಿ ಪೂಜೆ ಸಲ್ಲಿಸುತ್ತಿದ್ದಾರೆ. ಹೇಗಿದೆ ಚಿತ್ರ? ಇದನ್ನು ಕೃತಕ ಬುದ್ಧಿಮತ್ತೆ ಸಹಾಯದಿಂದ ಸೃಷ್ಟಿಸಿದ್ದು' ಎಂದು ಈ ಫೋಟೊವನ್ನು ಪೋಸ್ಟ್ ಮಾಡಿದ್ದರು. 'ಇದು ನಿಜವಾಗಿಯೂ ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಿದ ಚಿತ್ರವೇ?' ಎಂದು ಒಬ್ಬರು ಈ ಪೋಸ್ಟ್‌ಗೆ ಕಮೆಂಟ್ ಮಾಡಿದ್ದರು. ಆಗ ಇದು 'ನಿಜ' ಎಂದು ವ್ಯಕ್ತಿಯು ಕಮೆಂಟ್ ಮಾಡಿದ್ದರು. ಇದಲ್ಲದೆ, ಇನ್ನೂ ಇತರ ಹಾಲಿವುಡ್ ನಟ, ನಟಿಯರು ಪೂಜೆ ಮಾಡುತ್ತಿರುವ ಫೋಟೊಗಳನ್ನು ಇದೇ ವ್ಯಕ್ತಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದರು. 'ನನ್ನ ಕಲಾಕುಸುರಿಯು ಎಲ್ಲೆಡೆ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ' ಎಂದು ಮೇ 28ರಂದು ಸಂಭ್ರಮ ಹಂಚಿಕೊಂಡಿದ್ದರು. ಆದ್ದರಿಂದ, ಡ್ವೈನ್ ಜಾನ್ಸನ್ ಸನಾತನ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎನ್ನುವುದು ಸುಳ್ಳು ಸುದ್ದಿ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ದೈವವೇ ಕಾಪಿಡಬೇಕು

ಹರಸುವುದದೇನ ನೀಂ? ವರವದೇನೆಂದರಿವೆ?।
ಸರಿಯೆಂದು ತೋರುವುದು ನಾಳೆ ಸರಿಯಿಹುದೆ?॥
ನಿರುಕಿಸುವುದೆಂತು ಚಿರಕಾಲದೊಳ್ಳಿತನಿಂದು?।
ಅರಿವ ದೈವವೆ ಪೊರೆಗೆ – ಮಂಕುತಿಮ್ಮ ॥ 942 ॥

ಪದ-ಅರ್ಥ: ಹರಸುವುದದೇನ = ಹರಸುವುದು + ಅದು + ಏನ, ವರವದೇನೆಂದರಿವೆ = ವರವು + ಅದು + ಏನೆಂದು + ಅರಿವೆ, ನಿರುಕಿಸುವುದೆಂತುನಿರುಕಿಸುವುದು(ನಿರೀಕ್ಷಿಸುವುದು) + ಎಂತು, ಪೊರೆಗೆ = ಕಾಪಾಡುತ್ತದೆ.

ವಾಚ್ಯಾರ್ಥ: ನೀನು ಅದೇನು ಹರಸುತ್ತೀ? ವರ ಎಂದರೇನು ತಿಳಿದಿದೆಯೆ? ಇಂದು ಸರಿ ಎಂದು ಕಂಡದ್ದು ನಾಳೆ ಸರಿಯಾಗಲಿಕ್ಕಿಲ್ಲ. ಸದಾಕಾಲವೂ ಒಳ್ಳೆಯದಾಗುವುದನ್ನು ನಿರೀಕ್ಷಿಸುವುದು ಹೇಗೆ? ಎಲ್ಲವನ್ನೂ ತಿಳಿದ ದೈವವೇ ಕಾಪಾಡಬೇಕು.

ವಿವರಣೆ: ಮತ್ತೊಬ್ಬರಿಗೆ ಏನೆಂದು ಹರಸುವುದು ಮತ್ತು ಬೇರೆಯವರಿಂದ ಯಾವುದನ್ನು ಬೇಡುವುದು ಎಂಬುದರ ಸರಿಯಾದ ಅರಿವು ನಮಗಿಲ್ಲ. ನಾವು ಮಕ್ಕಳಿಗೆ ಒಳ್ಳೆಯದಾಗಲಿ ಎಂದು ಹರಸುತ್ತೇವೆ. ಆದರೆ ಅದರಿಂದ ಅವರಿಗೆ ಒಳ್ಳೆಯದಾದೀತೆ? ತನ್ನ ಮಗ ಭರತ ಚಕ್ರವರ್ತಿಯಾಗಲಿ ಎಂದು ಬಯಸಿ, ಅದಕ್ಕಾಗಿ ರಾಮನ ವನವಾಸಕ್ಕೆ ಯೋಜನೆ ಮಾಡಿದಳು ಕೈಕೇಯಿ. ಆದರೆ ಏನಾಯಿತು? ಮಗ ಚಕ್ರವರ್ತಿಯಾಗದೆ, ಅಣ್ಣ ಬರುವವರೆಗೆ ಹದಿನಾಲ್ಕು ವರ್ಷ ಸನ್ಯಾಸಿಯಂತೆ ಊರ ಹೊರಗೇ ಬದುಕಿದ. ವರವೆಂದದ್ದು ಶಾಪವಾಗಿತ್ತು.

ಕುಂತಿಗೆ ದುರ್ವಾಸರು ವರ ನೀಡಿದರು. ಆದರೆ ಪುಟ್ಟ ಹುಡುಗಿಗೆ ಯಾವ ವರ ಕೊಡಬೇಕೆಂಬುದು ತಿಳಿಯದೆ ಹೋಯಿತೇ? ಇನ್ನೂ ಆಟವಾಡುವ ವಯಸ್ಸಿನ ಹುಡುಗಿಗೆ, ನೀನು ಯಾರನ್ನು ನೆನೆಯುತ್ತೀಯೋ, ಅವನಿಂದ ಮಗ ಹುಟ್ಟುತ್ತಾನೆ ಎಂಬ ಐದು ವರ ನೀಡಿದರು. ಪರಿಣಾಮವಾಗಿ ಮದುವೆಗಿಂತ ಮೊದಲೇ ಕರ್ಣನಿಗೆ ಜನ್ಮವಿತ್ತು ಅಸಹಾಯಕತೆ, ಭಯ, ಅಪರಾಧೀ ಭಾವದಿಂದ ಬದುಕಿನುದ್ದಕ್ಕೂ ಶಾಪಗ್ರಸ್ತಳಂತೆ ಬದುಕಬೇಕಾಯಿತು.

ಕಗ್ಗ ಈ ಮಾತನ್ನು ಕೇಳುತ್ತದೆ, ಇಂದು ನಮಗೆ ಸರಿ ಎಂದದ್ದು ಯಾವಾಗಲೂ ಸರಿಯಾದೀತೇ? ಅಣು ವಿಭಜನೆ ಮಾಡಿದಾಗ ಅಪಾರ ಶಕ್ತಿಯನ್ನು ಪರಮಾಣುವಿನಿಂದ ಪಡೆಯಬಹುದೆಂದು ವಿಜ್ಞಾನಿಗಳು ಸಂಭ್ರಮಪಟ್ಟರು. ಅದೊಂದು ಸರ್ವಶ್ರೇಷ್ಠ ಅವಿಷ್ಕಾರ ಎಂದರು. ಆದರೆ ಪರಮಾಣು ಬಾಂಬ್ ಜಪಾನನ್ನು ಉಧ್ವಸ್ಥಗೊಳಿಸಿಬಿಟ್ಟಿತು. ವರವಾಗಬೇಕಾಗಿದ್ದ ಪರಮಾಣು ಶಕ್ತಿ ಮಹಾ ಶಾಪವಾಗಿತ್ತು. ಮೊದಲ ಬಾರಿಗೆ ಪ್ಲಾಸ್ಟಿಕ್ ಕಂಡುಹಿಡಿದಾಗ ಅದೊಂದು ಮಹಾನ್ ವರವಾಗಿತ್ತು ಅಂದು. ಇಂದು ಅದು ಪೆಡಂಭೂತವಾಗಿ ಕಾಡುತ್ತಿದೆ. ವಿಜ್ಞಾನಿಗಳು ಕೃತಕ ಗೊಬ್ಬರಗಳನ್ನು ರಸಾಯನಿಕ ಪದಾರ್ಥಗಳಿಂದ ಸಿದ್ಧಪಡಿಸಿದಾಗ ಪ್ರಪಂಚ ಬೆರಗಾಗಿತ್ತು. ಇನ್ನೇನು ಕೃಷಿಕ್ರಾಂತಿ ಬಂದೇಬಂತು ಎಂದು ರೈತರೆಲ್ಲ ಹಿಗ್ಗಿ ಬೇಕಾದ ಹಾಗೆ ಬಳಸತೊಡಗಿದರು. ಈಗ ಅದೇ ಗೊಬ್ಬರ ನೆಲವನ್ನು ಬರಡು ಮಾಡಿದೆ. ಮತ್ತೆ ಜನ ಸಾವಯವ ಗೊಬ್ಬರಗಳ ಕಡೆಗೆ ಮನನೀಡುವಂತಾಗಿದೆ.

ಹೀಗೆಂದರೇನಾಯಿತು? ನಮಗೆ ಏನು ಹರಸಬೇಕು, ಏನು ವರ ಬೇಡಬೇಕು ಎಂಬುದು ತಿಳಿದಿಲ್ಲ. ಇಂದು ಸರಿಯಾದದ್ದು ಎಂದೆಂದಿಗೂ ಸರಿಯಾದೀತೇ ಎಂಬುದೂ ಗೊತ್ತಿಲ್ಲ. ಸದಾಕಾಲ ಒಳ್ಳೆಯದನ್ನು ಪಡೆಯುವುದು ಹೇಗೆಂದು ನಿರೀಕ್ಷಿಸುವುದು ಹೇಗೆ? ಅದಕ್ಕೆ ಕಗ್ಗ ಹೇಳುತ್ತದೆ, ಅದು ನಮ್ಮನ್ನು ಮೀರಿದ್ದು. ಎಲ್ಲವನ್ನೂ ತಿಳಿದ ಭಗವಂತನೇ ಕಾಪಿಡುತ್ತಾನೆ ಎಂಬ ಭರವಸೆಯೇ ಸಾಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಶುಕ್ರವಾರ ಆಗಸ್ಟ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ತೃತೀಯ ಗಂ. 12-46 ನಕ್ಷತ್ರ: ಶತಭಿಷಾ ಗಂ. 07-08 ನಂತರ ಪೂರ್ವಾಭಾದ್ರಾ ಗಂ. 28-45 ಯೋಗ: ಶೊಭನಾ ಗಂ. 06-13 ನಂತರ ಅತಿಗಂಡ ಗಂ. 26-29 ಕರಣ: ವಿಷ್ಟಿ ಗಂ. 12-46, ಕರ್ಕಾಟಕ ಮಾಸದ 18 ನೇ ದಿನ, ಮಳೆನಕ್ಷತ್ರ: ಆಶ್ಲೇಷ 1, ರಾಹುಕಾಲ: ಬೆಳಿಗ್ಗೆ 10-30 - 12-00, ಸೂರ್ಯೋದಯ: 06-20 ಸೂರ್ಯಾಸ್ತ: 06-54, ಮುಸ್ಲಿಂ ದಿನಾಂಕ: 16 ಮೊಹರಮ್, ದಿನ ವಿಶೇಷ: ಸಂಕಷ್ಟಹರ ಚತುರ್ಥಿ ಚಂದ್ರೋದಯ: ರಾತ್ರಿ 9-12 ಅದೃಷ್ಟ ಸಂಖ್ಯೆ: 8, 11

ಮೇಷ: ಅತಿಯಾದ ಆತ್ಮವಿಶ್ವಾಸದಿಂದಾಗಿ ತಪ್ಪು ನಿರ್ಧಾರಗಳನ್ನು ಕೈಗೊಳ್ಳುವಿರಿ. ಹಾಗಾಗಿ ಮನೆಯವರನ್ನು ಕೇಳದೆ ಯಾವುದೇ ನಿರ್ಧಾರ ತೆಗೆದುಕೊಳ್ಳಬೇಡಿ. ಆತ್ಮೀಯರಿಂದ ವ್ಯವಹಾರದಲ್ಲಿ ಲಾಭವಾಗುವುದು.

ವೃಷಭ: ಹೈನುಗಾರಿಕೆ ಆರಂಭಿಸುವ ಯೋಚನೆ ಬರುವುದು. ಸೋದರಿಯ ಕುಟುಂಬದ ವಿವಾದಗಳು ಇತ್ಯರ್ಥಗೊಳ್ಳುವುದು. ಉತ್ತಮವಾದ ರೀತಿ ನೀತಿಗಳನ್ನು ಬೆಳೆಸಿಕೊಳ್ಳುವ ಮೂಲಕ ಶ್ರೇಯಸ್ಸನ್ನು ಕಾಣುವಿರಿ.

ಮಿಥುನ: ಉದ್ಯೋಗದಲ್ಲಿ ನಿಮ್ಮೊಂದಿಗೆ ಸೆಣಸಾಡಲು ಬಂದವರ ಜೊತೆ ಕ್ರೀಡಾ ಸ್ಫೂರ್ತಿಯಂತೆ ಸ್ವೀಕರಿಸಿ ಸೆಣಸಾಡಿ. ವಿದ್ಯಾರ್ಥಿಗಳು ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವರು.

ಕರ್ಕಾಟಕ: ನೀವು ಎಷ್ಟೇ ಸಣ್ಣ ತಪ್ಪನ್ನು ಮಾಡಿದರೂ ನಿಮ್ಮ ನಿರ್ಮಲ ಮನಸ್ಸು ಅಧಿಕವಾಗಿ ಪಶ್ಚಾತಾಪ ಪಡುವುದು. ದುಡುಕಿನ ಮಾತು ಇತರರ ಮನಸ್ಸನ್ನು ನೋಯಿಸದಿರಲಿ. ಹೆಂಡತಿಯ ಆರೋಗ್ಯದಲ್ಲಿ ಸುಧಾರಣೆ ಕಾಣುವಿರಿ.

ಸಿಂಹ: ಇತರರನ್ನು ನಂಬದಿರುವ ಪರಿಸ್ಥಿತಿ ಬರುವುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ. ಸಾಧ್ಯವಾದ ಮಟ್ಟಿಗೆ ಶಾಂತವಾಗಿರಿ. ತೋಟದ ಬೆಳೆಗಳಿಂದ ಉತ್ತಮ ಆದಾಯವಿರುವುದು. ಶನೇಶ್ವರನ ಆರಾಧನೆ ಮಾಡಿ.

ಕನ್ಯಾ: ವೈದ್ಯ ವೃತ್ತಿಯಲ್ಲಿನ ನಿಮ್ಮ ಸಾಧನೆಗೆ ಸಾಮಾಜಿಕವಾಗಿ ಗೌರವ ಪಡೆದುಕೊಳ್ಳುವಿರಿ. ರೇಷ್ಮೆ ಬೆಳೆಗಾರರಿಗೆ ಈ ಬಾರಿಯ ಬೆಳೆಯಿಂದ ಹೆಚ್ಚಿನ ಸಂತಸ ಮತ್ತು ಆದಾಯ. ಬಿಳಿ ಬಣ್ಣ ಶುಭವನ್ನು ಉಂಟುಮಾಡಲಿದೆ.

ತುಲಾ: ತಾರ್ಕಿಕ ಹಾದಿಯಲ್ಲಿ ಬರುವ ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ. ಗುರಿ ಸಾಧಿಸಲು ಕೆಲ ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ಸಾಫ್ಟ್‌ವೇರ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳಿಗೆ ನೌಕರಿ ಸಿಗುವ ಲಕ್ಷಣವಿದೆ.

ವೃಶ್ಚಿಕ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದ ಸಹಾಯ ಹಸ್ತ ದೊರಕಲಿದೆ. ಹೊಸ ಕೆಲಸಕ್ಕೆ ಪ್ರಯತ್ನಿಸುವಿರಿ. ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಲಭಿಸುವುದು.

ಧನು: ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಮಕ್ಕಳ ಓದಿಗಾಗಿ ಹೆಚ್ಚಿನ ಗಮನ ಹರಿಸಬೇಕಾಗುವುದು. ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದರೂ ಮುಂದೂಡುವುದು ಉತ್ತಮವೆನಿಸಲಿದೆ.

ಮಕರ: ವೃತ್ತಿರಂಗದಲ್ಲಿ ನಿಮ್ಮ ತಿಳುವಳಿಕೆಯಂತೆಯೇ ನಡೆಯಿರಿ. ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ. ಷೇರು ಖರೀದಿಸುವಾಗ ಎಚ್ಚರವಹಿಸಿ. ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷವಿರುವುದು.

ಕುಂಭ: ನಿಮ್ಮ ಜವಾಬ್ದಾರಿಯ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರವನ್ನು ಮಾಡುವವರಿಗೆ ತಾಪತ್ರಯಗಳು ಕಾಣಿಸಿಕೊಳ್ಳಲಿದೆ. ಶ್ರೀ ವಿನಾಯಕನ ಸ್ತುತಿಯನ್ನು ಮಾಡಿ.

ಮೀನ: ನಿಮ್ಮ ಅಚ್ಚುಕಟ್ಟಾದ ಕೆಲಸಗಳಿಂದ ಅಧಿಕಾರಿ ವರ್ಗದವರಲ್ಲಿ ನಿಮ್ಮ ಮೇಲಿನ ವಿಶ್ವಾಸವನ್ನು ಇಮ್ಮಡಿಗೊಳಿಸಿಕೊಳ್ಳುವಿರಿ. ದುಡುಕು ನಿರ್ಧಾರದಿಂದ ಹಣಕಾಸು ಸಂಸ್ಥೆಗಳನ್ನು ನಡೆಸುವವರಿಗೆ ನಷ್ಟ ಸಂಭವಿಸಲಿದೆ.

ಪದಬಂಧ 5400

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಬಂದಿರುವ ಬಿಂದು ರೂಪದ ವರ್ಣ (4)
3.ಹೊಟ್ಟೆಯೊಳಗಿನ ಭ್ರೂಣದ ಚೀಲ (4)
5.ಕನ್ನ ಹಾಕಿ ಕದ್ದಿರುವ ದರ್ಪಣ (3)
6.ಒನಪು ತೋರಿದಾಗ ಬಂದಿರುವ ಸ್ಮರಣೆ (3)
8.ಸಂಕಲನ ಮಾಡುವಾಗ ನಡೆದ ಜಗಳ (3)
9.ಈ ಪರಿ ಓಡಿಹೋಗುವಿಕೆ! (3)
10.ವರನಿಗೆ ನೀಡಿದ ಚಿನ್ನದ ನಾಣ್ಯ (3)
12.ಹಾಡಿನ ವಿಸ್ತಾರಗೊಳ್ಳುವ ಭಾಗ (3)
14.ರತ್ನಗಳನ್ನು ಅಡಗಿಸಿಟ್ಟುಕೊಂಡಿರುವ ಸಮುದ್ರ (4)
15.ಅನೇಕ ಜನರ ಭೀಕರ ಕೊಲೆ (4)

ಮೇಲಿಂದ ಕೆಳಕ್ಕೆ
1.ರಾಜನ ಗೃಹ (4)
2.ವಿಷಯಾಸಕ್ತನಿವನು (3)
3.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
4.ಮಲಗುವ ಮನೆಯಿದು (4)
7.ಪುರಿಯೊಳಗಿರುವ ರಾಜಕೀಯ ಮುಂದಾಳು! (3)
8.ಈತ ಪೆದ್ದನೇ ಬಿಡಿ! (3)
9.ನಮ್ಮ ಸುತ್ತಲಿನ ಪ್ರದೇಶ (4)
11.ಬಯಕೆಯನ್ನು ಹೀಗೂ ಹೇಳುವರು (4)
12.ಕೊನೆಗೆ ಬೆಲೆಯಿಟ್ಟಾಗ ಕಾಣಿಸಿದ ಮಡಿಕೆ! (3)
13.ವಿವಾದವಿಲ್ಲದೆ ನಡೆದಿರುವ ಮದುವೆ (3)



5399ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಮಾನ 3.ಬಾಲಂಗೋಚಿ
5.ಗುಡಾಣ 6.ತಿಲಕ
8.ಪುಳಕ 9.ಕಾಸು
10.ಲಾಭ 11.ನಗರ
12.ಸುಗಮ 14.ಸ್ವಗತ
16.ಬಡಿವಾರ 17.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ಅದಿತಿ 2.ನಗು
3.ಬಾಣ 4.ಸಿಡುಕ
7.ಕನಸುಗಾರ 8.ಪುಸಲಾಯಿಸು
11.ನವಾಬ 13.ಮಕರ
14.ಸ್ವರ 15.ತಮ

ಸುಡೊಕು 5786

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						
6			4			5		9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5785 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು 542



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,526
ಇಂದಿನ ಅಂತ್ಯ	19,381
▼	145
ದಿನದ ಕನಿಷ್ಠ	19,296

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹470

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹256-510
ದ್ವಿತಳಿ (ಬಿ.ವಿ)	₹263-648

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹142.50
ಗುಡ್ ಲಾಟ್	₹126

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1840)
ಸೋಯಾ (ರಿಫೈನ್ಡ್)	₹960 (965)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹865 (875)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7900-7900
ಗುಬ್ಬಿ	---
ತುರುವೇಕೆರೆ	₹9350-9350

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1246-1400
ಸಣ್ಣ	₹800-1200

ಮುಂಬೈ ಧಾರಣೆ

ಶೇಂಗಾ

3-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1850)
ಒಂದು ವಾರದ ಡೆಲಿವರಿ	1865(1845)
ಸೋಯಾ ಕಚ್ಚಾ	920(920)
ಪಾಮ್ ವಾರದ ಡೆಲಿವರಿ	863(873)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,100 (59,350)
ಬೆಳ್ಳಿ ಕೆ.ಜಿ 72,300 (74,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ಜಯರಾಮ್ ಬಿ.ಸಿ
ನೀವು ತೋರಿಸಿದ ದಾರಿಯಲ್ಲಿ ನಡೆಯುತ್ತ ಪ್ರತಿಕ್ಷಣ ನಿಮ್ಮನ್ನು ನೆನೆಯುತ್ತ, ಭಗವಂತ ನಿಮ್ಮ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುವ
ದುಃಖತಪ್ತ ಪತ್ನಿ: ದೇವಿಕಾ
ಮಗಳು: ತನುಶ್ರೀ ಜಯರಾಮ್,
ಮುರುಗೇಶ್ ಪಾಳ್ಯ,
ಎನ್.ಆರ್. ಕಾಲೋನಿ, ಬೆಂಗಳೂರು.

ಸುಧಾರಿಸಿದ ಬೇಡಿಕೆ • ಅಂತರರಾಷ್ಟ್ರೀಯ ಮಾರಾಟದಲ್ಲಿ ಹೆಚ್ಚಳ: ಎಸ್ ಆ್ಯಂಡ್ ಪಿ

ಸೇವಾ ವಲಯ: 13 ವರ್ಷಗಳ ಗರಿಷ್ಠ

ಮುಖ್ಯಾಂಶಗಳು

- ಸತತ 24ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ
- ದೇಶಿ, ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಾದ ಮಾರಾಟ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆಯು ಜುಲೈನಲ್ಲಿ 13 ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಬೇಡಿಕೆ ಸುಧಾರಿಸಿರುವುದು ಹಾಗೂ ಅಂತರರಾಷ್ಟ್ರೀಯ ಮಾರಾಟ ಹೆಚ್ಚಾಗಿರುವ ಕಾರಣಗಳಿಂದಾಗಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಗುರುವಾರ ಹೇಳಿದೆ.

ಸೇವಾ ವಲಯದ ಚಟುವಟಿಕೆಯನ್ನು ತಿಳಿಸುವ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಜೂನ್‌ನಲ್ಲಿ 58.5ರಷ್ಟು ಇದ್ದಿದ್ದು ಜುಲೈನಲ್ಲಿ 62.3ಕ್ಕೆ ಏರಿಕೆ ಕಂಡಿದೆ. 2010ರ ಜೂನ್ ನಂತರದ ವೇಗದ ಬೆಳವಣಿಗೆ ಇದಾಗಿದೆ.

ಸೇವಾ ವಲಯದ ಚೇತರಿಕೆ ಗುಣವು ದೇಶದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವಲ್ಲಿ ತನ್ನ ಪಾತ್ರವನ್ನು ಒತ್ತಿ ಹೇಳುತ್ತಿದೆ. ಜುಲೈ ತಿಂಗಳ ಬೆಳವಣಿಗೆಯು ಜಿಡಿಪಿಗೆ ಈ ವಲಯ ಗುರುತರ ಕೊಡುಗೆ ನೀಡಲಿದೆ ಎನ್ನುವುದನ್ನು ಸೂಚಿಸುತ್ತಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ಹೊಸ ವಹಿವಾಟುಗಳು ಮತ್ತು ಬೇಡಿಕೆ ಹೆಚ್ಚಾಗಿರುವುದೇ ಜುಲೈ ತಿಂಗಳ ಪ್ರಗತಿಗೆ ಕಾರಣ ಎನ್ನುವುದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರ ಅಭಿಪ್ರಾಯ. ಸಮೀಕ್ಷೆಯಲ್ಲಿ ಭಾಗವಹಿಸಿದ್ದವರಲ್ಲಿ ಶೇ 29ರಷ್ಟು ಮಂದಿ ಹೊಸ ವಹಿವಾಟುಗಳು ಬೇಡಿಕೆಗೆ ಮುಖ್ಯ ಕಾರಣ ಎಂದು ಹೇಳಿದ್ದಾರೆ.

ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟವು ಹೆಚ್ಚಾಗಿರುವುದು ಒಳ್ಳೆಯ ಬೆಳವಣಿಗೆ. ಅದರಲ್ಲಿಯೂ ಮುಖ್ಯವಾಗಿ ಸವಾಲಿನಿಂದ ಕೂಡಿರುವ ಸದ್ಯದ ಜಾಗತಿಕ ಆರ್ಥಿಕ ಪರಿಸ್ಥಿತಿಯಲ್ಲಿ ಈ ಬೆಳವಣಿಗೆ ಮುಖ್ಯವಾಗಿದೆ. ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ ಮತ್ತು ಯುಎಇ ಸೇರಿದಂತೆ ಹಲವು ದೇಶಗಳಿಗೆ ಸೇವೆಗಳ ರಫ್ತಿನಲ್ಲಿ ಏರಿಕೆ ಕಂಡುಬಂದಿದೆ ಎಂದು ಲಿಮಾ ಮಾಹಿತಿ ನೀಡಿದ್ದಾರೆ.

ವೆಚ್ಚದ ಒತ್ತಡವು ತೀವ್ರಗೊಂಡಿದೆ. ಆಹಾರ, ಕಾರ್ಮಿಕರು ಮತ್ತು ಸಾರಿಗೆಗೆ ಮಾಡುತ್ತಿರುವ ವೆಚ್ಚಗಳು ಏರಿಕೆ ಕಾಣುತ್ತಿವೆ ಎಂದು ಕಂಪನಿಗಳು ಹೇಳಿವೆ. ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ, ಅರೆಕಾಲಿಕ, ಪೂರ್ಣಾವಧಿ, ತಾತ್ಕಾಲಿಕ ಹಾಗೂ ಪೂರ್ಣಾವಧಿ ಉದ್ಯೋಗಿ... ಹೀಗೆ ಕಂಪನಿಗಳು ನೇಮಕ ಮಾಡಿಕೊಳ್ಳುವುದನ್ನು ಮುಂದುವರಿಸಿವೆ. ಜುಲೈನಲ್ಲಿ ಸೇವಾ ವಲಯದಲ್ಲಿ ಆಗಿರುವ ನೇಮಕವು ಬಹುತೇಕ ಮೇ ಮತ್ತು ಜೂನ್ ತಿಂಗಳಿಗೆ ಸಮನಾಗಿದೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟು ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಇಂಡೆಕ್ಸ್ ಜೂನ್‌ನಲ್ಲಿ 59.4ರಷ್ಟು ಇದ್ದಿದ್ದು ಜುಲೈನಲ್ಲಿ 61.9ಕ್ಕೆ ಏರಿಕೆ ಕಂಡಿದೆ.



ಪ್ರಜಾವಾಣಿ ಗ್ರಾಫಿಕ್ಸ್

ಕರ್ನಾಟಕ ಬ್ಯಾಂಕ್ ನಿವ್ವಳ ಲಾಭ ₹370.70 ಕೋಟಿಗೆ ಏರಿಕೆ

ಸುದ್ದಿ 2 ನಿಮಿಷ

ಮಂಗಳೂರು: ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹370.70 ಕೋಟಿ ನಿವ್ವಳ ಲಾಭ ದಾಖಲಿಸಿರುವುದಾಗಿ ಕರ್ಣಾಟಕ ಬ್ಯಾಂಕ್ ಘೋಷಿಸಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ (₹114.18 ಕೋಟಿ) ಈ ವರ್ಷ ಲಾಭದಲ್ಲಿ ಶೇ 224.66ರಷ್ಟು ಏರಿಕೆ ಆಗಿದೆ.

ಮೊದಲ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ನಿರ್ವಹಣಾ ಲಾಭವು ₹601.17 ಕೋಟಿಗೆ ಹಾಗೂ ನಿವ್ವಳ ಬಡ್ಡಿ ಆದಾಯ ₹814.68 ಕೋಟಿಗೆ ತಲುಪಿದೆ.

ಬ್ಯಾಂಕ್‌ನ ಒಟ್ಟು ವ್ಯವಹಾರವು ಶೇ 6.85ರಷ್ಟು ಏರಿಕೆಯಾಗಿ ₹1.48 ಲಕ್ಷ ಕೋಟಿಗೆ ತಲುಪಿದೆ (ಕಳೆದ ವರ್ಷ ₹1.38 ಲಕ್ಷ ಕೋಟಿ). ಠೇವಣಿಗಳ ಮೊತ್ತವು ಶೇ 7.92ರಷ್ಟು ಏರಿಕೆಯಾಗಿ ₹86,959.86 ಕೋಟಿಗೆ ಹಾಗೂ ಮುಂಗಡಗಳು ಶೇ 5.36ರಷ್ಟು ವೃದ್ಧಿಯಾಗಿ ₹61,489.41 ಕೋಟಿಗೆ ತಲುಪಿದೆ.

ನಿವ್ವಳ ಅನುತ್ಪಾದಕ ಆಸ್ತಿ ಶೇ 1.43ಕ್ಕೆ ಇಳಿಕೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಫಲಿತಾಂಶದ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್., 'ಗ್ರಾಹಕರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬ್ಯಾಂಕ್ ಪ್ರಗತಿಯ ಪಥದಲ್ಲಿ ದೃಢ ಹೆಜ್ಜೆಯನ್ನು ಇಡುತ್ತಿದೆ. ನವೀನ ತಂತ್ರಜ್ಞಾನ ಅಳವಡಿಕೆಗೆ ಬ್ಯಾಂಕ್ ವಿಶೇಷ ಗಮನ ಹರಿಸುತ್ತಿದೆ' ಎಂದಿದ್ದಾರೆ.

'ಸಂಘಿ ಇಂಡಸ್ಟ್ರೀಸ್' ಖರೀದಿಸಿದ ಅಂಬುಜಾ ಸಿಮೆಂಟ್ಸ್

ನವದೆಹಲಿ (ಪಿಟಿಐ): ಗೌತಮ್ ಅದಾನಿ ಮಾಲೀಕತ್ವದ ಅಂಬುಜಾ ಸಿಮೆಂಟ್ಸ್, ಸಂಘಿ ಇಂಡಸ್ಟ್ರೀಸ್‌ನ ಬಹುಪಾಲು ಷೇರುಗಳನ್ನು ₹5,000 ಕೋಟಿಗೆ ಖರೀದಿಸಿದೆ. ಅದಾನಿ ಸಮೂಹದ ವಿರುದ್ಧ ಹಿಂಡನ್‌ಬರ್ಗ್ ರಿಸರ್ಚ್ ಕೆಲವು ಆರೋಪಗಳನ್ನು ಹೊರಿಸಿದ ನಂತರದಲ್ಲಿ, ಅದಾನಿ ಸಮೂಹದ ಪ್ರಮುಖ ಸ್ವಾಧೀನ ಪ್ರಕ್ರಿಯೆ ಇದಾಗಿದೆ.

ಈ ಖರೀದಿಯ ನಂತರದಲ್ಲಿ ಸಂಘಿ ಇಂಡಸ್ಟ್ರೀಸ್ ಲಿಮಿಟೆಡ್‌ನಲ್ಲಿ ಅಂಬುಜಾ ಸಿಮೆಂಟ್ಸ್‌ನ ಪಾಲು ಶೇ 56.74 ಆಗಲಿದೆ. ಇದಲ್ಲದೆ, ಸಂಘಿ ಇಂಡಸ್ಟ್ರೀಸ್‌ನ ಷೇರುದಾರರಿಂದ ಒಟ್ಟು 6.71 ಕೋಟಿ ಷೇರುಗಳ ಖರೀದಿಗೆ ಅಂಬುಜಾ ಸಿಮೆಂಟ್ಸ್ ಮುಂದಾಗಲಿದೆ. ಈ ಷೇರುಗಳನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲಿದೆ. ಸಂಘಿ ಇಂಡಸ್ಟ್ರೀಸ್ ಲಿಮಿಟೆಡ್ ಸಿಮೆಂಟ್ ತಯಾರಿಕೆಯಲ್ಲಿ ತೊಡಗಿದೆ.

2031ಕ್ಕೆ ಭಾರತದ ಜಿಡಿಪಿ ದುಪ್ಪಟ್ಟು

ನವದೆಹಲಿ (ಪಿಟಿಐ): ಭಾರತದ ಅರ್ಥವ್ಯವಸ್ಥೆಯ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇಕಡ 6.7ರಷ್ಟು ಇದ್ದರೆ, ಜಿಡಿಪಿ ಗಾತ್ರವು 2031ರ ವೇಳೆಗೆ ಈಗಿನ ಮಟ್ಟಕ್ಕಿಂತ ಎರಡು ಪಟ್ಟು ಹೆಚ್ಚಾಗಬಲ್ಲದು ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆಯ ವರದಿಯೊಂದು ಹೇಳಿದೆ.

ದೇಶದ ಜಿಡಿಪಿ ಈಗ 3.4 ಟ್ರಿಲಿಯನ್ ಡಾಲರ್ (ಅಂದಾಜು ₹281 ಲಕ್ಷ ಕೋಟಿ). ವಾರ್ಷಿಕ ಆರ್ಥಿಕ ಬೆಳವಣಿಗೆ ದರವು ಶೇ 6.7ರಷ್ಟು ಇದ್ದಲ್ಲಿ, 2031ರ ವೇಳೆಗೆ ದೇಶದ ಜಿಡಿಪಿ ಗಾತ್ರವು 6.7 ಟ್ರಿಲಿಯನ್ ಡಾಲರ್ (554 ಲಕ್ಷ ಕೋಟಿ) ಆಗಲಿದೆ ಎಂದು ವರದಿಯು ಅಂದಾಜು ಮಾಡಿದೆ.

2022-23ನೆಯ ಸಾಲಿನಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 7.2ರಷ್ಟು ಆಗಿದೆ. ಜಾಗತಿಕ ಆರ್ಥಿಕ ಬೆಳವಣಿಗೆ ಕುಸಿಯುವುದು ಹಾಗೂ ರೆಪೊ ದರ ಹೆಚ್ಚಳದ ಪರಿಣಾಮದಿಂದಾಗಿ ದೇಶದ ಜಿಡಿಪಿ ಬೆಳವಣಿಗೆಯು ಈ ವರ್ಷ ಶೇ 6ಕ್ಕೆ ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಜೊಮಾಟೊ ಲಾಭ ₹2 ಕೋಟಿ

ನವದೆಹಲಿ (ಪಿಟಿಐ): ಜೊಮಾಟೊ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹2 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹186 ಕೋಟಿ ನಿವ್ವಳ ನಷ್ಟ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನವು ಜೂನ್ ತ್ರೈಮಾಸಿಕದಲ್ಲಿ ₹1,414 ಕೋಟಿಯಿಂದ ₹2,416 ಕೋಟಿಗೆ ಏರಿಕೆ ಕಂಡಿದೆ. ಇದು ಲಾಭಕ್ಕೆ ಕಾರಣವಾಗಿದೆ ಎಂದು ಹೇಳಿದೆ.

ಷೇರುಪೇಟೆಯಲ್ಲಿ ತಗ್ಗದ ಅಮೆರಿಕದ ರೇಟಿಂಗ್ ಇಳಿಕೆ ಪರಿಣಾಮ

ಮುಂಬೈ (ಪಿಟಿಐ): ಫಿಚ್ ರೇಟಿಂಗ್ಸ್ ಸಂಸ್ಥೆಯು ಅಮೆರಿಕದ ಕ್ರೆಡಿಟ್ ರೇಟಿಂಗ್ ತಗ್ಗಿಸಿರುವುದರ ಪ್ರತಿಕೂಲ ಪರಿಣಾಮವು ಭಾರತದ ಷೇರುಪೇಟೆಗಳ ವಹಿವಾಟಿನಲ್ಲಿ ಗುರುವಾರವೂ ಕಂಡುಬಂತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 542 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 145ಅಂಶ ಇಳಿಕೆ ಕಂಡವು.

ಮೂರು ದಿನಗಳ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 1,287 ಅಂಶ, ನಿಫ್ಟಿ 372 ಅಂಶಗಳಷ್ಟು ಇಳಿಕೆ ಕಂಡಿವೆ.

ಅಮೆರಿಕದ ರೇಟಿಂಗ್ ತಗ್ಗಿಸಿರುವುದರ ಪರಿಣಾಮವು ಜಾಗತಿಕ ಮಾರುಕಟ್ಟೆಗಳ ಮೇಲೆ ಆಗಿದ್ದು, ಬಾಂಡ್ ಗಳಿಕೆ ಹೆಚ್ಚಾಗಿರುವುದು ಮತ್ತು ಡಾಲರ್ ಮೌಲ್ಯ ವೃದ್ಧಿಸಿರುವುದು ಸಹ ಭಾರತದ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಟೈಟನ್ ಕಂಪನಿಯ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 4.3ರಷ್ಟು ಇಳಿಕೆ ಕಂಡು, ₹756 ಕೋಟಿಗೆ ತಲುಪಿದೆ. ಹೀಗಾಗಿ ಸೆನ್ಸೆಕ್ಸ್‌ನಲ್ಲಿ ಕಂಪನಿಯ ಷೇರು ಮೌಲ್ಯ ಶೇ 2.56ರಷ್ಟು ನಷ್ಟ ಕಂಡಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000 - 1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು	610
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48000
ಕುಮಟಾ	
ಚಿಪ್ಪು	31600-36565
ಕೋಕ	19060-36099
ಹಳೆಚಾಲಿ	38211-42000
ಹೊಸಚಾಲಿ	36371-42569
ಪುತ್ತೂರು	
ಹೊಸತು	34000-45000
ಸಾಗರ	
ಬಿಳಿಗೋಟು	12869-34809
ಚಾಲಿ	34969-40999
ಕೋಕ	17869-37499
ಕೆಂಪುಗೋಟು	27869-42849
ರಾಶಿ	37869-54299
ಸಿಪ್ಪೆಗೋಟು	13019-24253
ಶಿವಮೊಗ್ಗ	
ಗೊರಬಲು	17009-43259
ರಾಶಿ	40159-55089
ಸಿದ್ದಾಪುರ	
ಬಿಳಿಗೋಟು	31899-35500
ಚಾಲಿ	40599-43400
ಕೋಕ	30700-33319
ಕೆಂಪುಗೋಟು	36199-36199
ರಾಶಿ	46099-51399
ತಟ್ಟಿಬೆಟ್ಟೆ	46509-46509
ಶಿರಸಿ	
ಬೆಟ್ಟೆ	41499-47999
ಬಿಳಿಗೋಟು	28099-37409
ಚಾಲಿ	38518-44001
ಕೆಂಪುಗೋಟು	32685-40199
ರಾಶಿ	48299-52719
ಯಲ್ಲಾಪುರ	
ಬಿಳಿಗೋಟು	26899-38199
ಚಾಲಿ	39519-43699
ಕೋಕ	23118-35509
ಕೆಂಪುಗೋಟು	30899-36499
ರಾಶಿ	49319-55009
ತಟ್ಟಿಬೆಟ್ಟೆ	41890-48712

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14100	14050	166.95ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10200	10400	10300	ಲಂಡನ್
ಆರ್‌ಸಿ	6230	6000	6075	2674ಡಾಲರ್ಸ್

ಲ್ಯಾಪ್‌ಟಾಪ್ ಆಮದಿಗೆ ನಿರ್ಬಂಧ

ಒಂದನೇ ಪುಟದಿಂದ

'ಸುರಕ್ಷತೆಯು ನಮ್ಮ ಅತಿಮುಖ್ಯ ಆದ್ಯತೆ' ಎಂದು ಹೇಳಿರುವ ಅಧಿಕಾರಿ, ಈ ಕ್ರಮವು ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ನಿಯಮಗಳಿಗೆ ಅನುಗುಣವಾಗಿಯೇ ಇದೆ ಎಂದಿದ್ದಾರೆ.

ಆಮದು ನಿರ್ಬಂಧಗಳಿಗೆ ಕೆಲವು ವಿನಾಯಿತಿಗಳು ಕೂಡ ಇವೆ ಎಂದು ವಿದೇಶ ವ್ಯಾಪಾರ ಮಹಾನಿರ್ದೇಶನಾಲಯವು (ಡಿಜಿಎಫ್‌ಟಿ) ಹೇಳಿದೆ. 'ಲ್ಯಾಪ್‌ಟಾಪ್, ಟ್ಯಾಬ್, ಆಲ್-ಇನ್-ವನ್ ಕಂಪ್ಯೂಟರ್, ಯುಎಸ್‌ಎಫ್‌ಎಫ್ ಕಂಪ್ಯೂಟರ್, ಸರ್ವರ್... ಇವೆಲ್ಲವುಗಳ ಆಮದಿನ ಮೇಲೆ ತಕ್ಷಣದಿಂದ ನಿರ್ಬಂಧ ವಿಧಿಸಲಾಗಿದೆ' ಎಂದು ಡಿಜಿಎಫ್‌ಟಿ ಹೇಳಿದೆ.

ಈ ಉಪಕರಣಗಳನ್ನು ಆಮದು ಮಾಡುವವರು ಶುಕ್ರವಾರದಿಂದ (ಆಗಸ್ಟ್ 4) ಪರವಾನಗಿ ಪಡೆದುಕೊಳ್ಳಬೇಕು. ಪರವಾನಗಿ ಪಡೆಯಬೇಕು ಎಂದಾದರೆ ಆ ವರ್ತಕ, ಮೊದಲಿನಿಂದಲೂ ಆಮದು ವಹಿವಾಟಿನಲ್ಲಿ ತೊಡಗಿಸಿಕೊಂಡವ ಆಗಿರಬೇಕು.

'ಆಮದನ್ನು ನಿಷೇಧಿಸುವ ಉದ್ದೇಶ ನಮ್ಮದಲ್ಲ. ಆದರೆ ಈ ಉಪಕರಣಗಳ ಆಮದಿನ ಮೇಲೆ ನಿಯಂತ್ರಣ ವಿಧಿಸುವ ಉದ್ದೇಶ ಇದೆ' ಎಂದು ಅಧಿಕಾರಿ ಹೇಳಿದ್ದಾರೆ. ಈ ಕ್ರಮದಿಂದ ದೇಶಿ ಮಾರುಕಟ್ಟೆಯಲ್ಲಿ ಈ ಉಪಕರಣಗಳ ಬೆಲೆಯ ಮೇಲೆ ಪರಿಣಾಮ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಆದರೆ ಉದ್ಯಮದ ತಜ್ಞರು ಬೆಲೆ ಏರಿಕೆಯ ಅಪಾಯ ಇದೆ ಎಂದಿದ್ದಾರೆ.

ಲ್ಯಾಪ್‌ಟಾಪ್, ಟ್ಯಾಬ್, ಪರ್ಸನಲ್ ಕಂಪ್ಯೂಟರ್ ಅಥವಾ ಯುಎಸ್‌ಎಫ್‌ಎಫ್ ಕಂಪ್ಯೂಟರ್‌ಅನ್ನು ಒಂದಕ್ಕಿಂತ ಹೆಚ್ಚಿಲ್ಲದಂತೆ ಇ-ವಾಣಿಜ್ಯ ವೇದಿಕೆಗಳಿಂದ ಅಂಚೆ ಅಥವಾ ಕೊರಿಯರ್ ಮೂಲಕ ವಿದೇಶಗಳಿಂದ ತರಿಸಿಕೊಳ್ಳುವುದಿದ್ದರೆ ಅದಕ್ಕೆ ಪರವಾನಗಿಯ ಅಗತ್ಯ ಇರುವುದಿಲ್ಲ.

ಮುಖ್ಯಾಂಶಗಳು

- ದೇಶದಲ್ಲಿ ಲ್ಯಾಪ್‌ಟಾಪ್, ಕಂಪ್ಯೂಟರ್ ಬೆಲೆ ಏರಿಕೆ ಸಾಧ್ಯತೆ
- ಪರವಾನಗಿ ಇಲ್ಲದೆ ಆಮದಿಗೆ ಅವಕಾಶವಿಲ್ಲ
- ಡಬ್ಲ್ಯುಟಿಒ ನಿಯಮಗಳಿಗೆ ಅನುಗುಣವಾಗಿ ಆಮದು ನಿರ್ಬಂಧ: ಕೇಂದ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68960971

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH ಪ್ರಜಾವಾಣಿ

ವೈಯಕ್ತಿಕ

Lost

DOCUMENT LOST
I, S.Ramesh R/a No.02 Kodigehalli Main Road, Hosahalli Gollarapalya, Bangalore have lost my document Site No.182, Sy No.135/1 and 136, Katha No. 252 while travelling in Bus.
Finders please contact: 72599 13756 or inform near by Police Station

ಭವಿಷ್ಯ

Astrology

ಚೌಡೇಶ್ವರಿ ದೇವಿ ಕೃಪೆಯಿಂದ ಪ್ರೀತಿಯಲ್ಲಿ ನಂಬಿಮೋಸ ಹೋಗಿದ್ದೀರಾ, ಇಷ್ಟಪಟ್ಟವರು ನಿಮ್ಮಂತಾಗಲು ಯಾವುದೇ ಗುಪ್ತ ನಿಗೂಢ ಸಮಸ್ಯೆಗಳಿಗೆ ಕೇವಲ ರೂ. 1750ರಲ್ಲಿ ಪರಿಹಾರ. 9945566330 ಶ್ರೀಕಾಂತ್ ರಾವ್.

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

ಪ್ರವಾಸ

Travel

12.8.2023 ರಿಂದ ರಾಮೇಶ್ವರ-ಕನ್ಯಾಕುಮಾರಿ, ತಿವೇಂಡ್ರಂ-ಅಲಪಿ ಭೋಟಿಂಗ್, ಕೊವಲಂಬೀಚ್-ಗುರುವಾಯೂರು. 12.8.2023 ರಿಂದ 9ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ-ತಾಜಾವೂರು ಕುಂಭಕೋಣಂ-ಚಿದಂಬರಂ. 14.8.2023ರಿಂದ ಕಾಶಿ-ಗಯಾ, ಅಲಹಾಬಾದ್-ಅಯೋಧ್ಯ, ಬುದ್ಧಗಯಾ. 25.9.2023 ರಿಂದ ಚಾರ್ದಾಮ್ ಪ್ರವಾಸ ಕೇದಾರನಾಥ- ಗಂಗೋತ್ರಿ-ಬದರಿನಾಥ-ಯಮುನೋತ್ರಿ, ದೆಹಲಿ, ಹರಿದ್ವಾರ. 8.10.2023 ರಿಂದ ವೈಷ್ಣೋದೇವಿ. ವಾಘಬಾರ್ಡರ್, ದೆಹಲಿ, ಅಮೃತ್ಸರ್, ಧರ್ಮಶಾಲಾ, ಹರಿದ್ವಾರ-ಆಗ್ರಾ.ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್-9449652555, 9611082432, 8123099913

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5 ದಿನಗಳು. 26.08.2023 ನವಗ್ರಹ ದರ್ಶನ ತಿರುನಲ್ಲರ್,ಕುಂಭಕೋಣಂ ತಂಜಾವೂರು ಇತ್ಯಾದಿ 18ಕ್ಷೇತ್ರಗಳು 6600/-. 9448390735 9449721678

20.9.2023 ರೈಲಿನಲ್ಲಿ 6 ದಿನಗಳು ಕಾಶಿ, ಗಯಾ, ಬುದ್ಧಗಯಾ, ಅಯೋಧ್ಯ, ತ್ರಿವೇಣಿ ಸಂಗಮ ರೂ.10,000. ದೀಕ್ಷಿತ್‌ಟ್ರಾವೆಲ್ಸ್. 9742108991, 7795238951.

ದೆಹಲಿ ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 27.09.2023 02.10.2023 04.10.2023 ರಿಂದ 14 ದಿನಗಳು. ಪುರಿ,ಕೋನಾರ್ಕ್ ಕಾಶಿ,ಗಯಾ, ಪ್ರಯಾಗ,ನೈಮಿಶಾರಣ್ಯ 27.09.202302.10.2023 04.10.2023 26.10.2023 ರಿಂದ 10 ದಿನಗಳು. ಸೋಮನಾಥ್,ದ್ವಾರಕಾ ಉಜ್ಜಯಿನಿ,ಓಂಕಾರೇಶ್ವರ ಮಾತೃಗಯಾ,ಬೀಮಾಶಂಕರ್ ತ್ರಯಂಬಕೇಶ್ವರ 02.10.2023 26.10.2023 22.11.2023 ರಿಂದ 15/10 ದಿನಗಳು. ವಿಜಯವಾಡ,ವಾಸವಿಪೆನುಗೊಂಡ ಅನ್ನಾವರಂ,ಬುರ್ರಾಕೇವ್ಸ್ ವಿಶಾಖಪಟ್ಟಣ 01.10.202330.10.2023 22.11.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಶ್ರೀಶಿವನಂದಿ ಟೂರ್ಸ್ 8792104518, 8147311578 ಚಾರ್ ಧಾಮ್ 13ದಿನ 22-09-2023, ಗುಜರಾತ್ 12ದಿನ, 28-10-2023, ನೇಪಾಳ 12ದಿನ 18-11-2023, ಕಾಶಿಯಾತ್ರೆ 9ದಿನ 01-12-2023.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶೆಲ್ ದಾಳಿ, ಚರ್ಚ್‌ಗೆ ಹಾನಿ

ಕೀವ್ (ಎ.ಪಿ): ಉಕ್ರೇನ್‌ನ ಹರ್ಸನ್ ನಗರವನ್ನು ಗುರಿಯಾಗಿಸಿ ರಷ್ಯಾದ ಸೇನೆಯು ಗುರುವಾರ ಶೆಲ್ ದಾಳಿ ನಡೆಸಿದೆ. ಇದರಿಂದ ಪುರಾತನ ಚರ್ಚ್ ತೀವ್ರ ಜಖಂಗೊಂಡಿದೆ. ಕಳೆದ ವಾರ ಕ್ಷಿಪಣಿ ದಾಳಿಯಿಂದಾಗಿ ಈ ಚರ್ಚ್ ಭಾಗಶಃ ಹಾನಿಗೊಂಡಿತ್ತು.

ಇಲ್ಲಿನ ಸೇಂಟ್ ಕ್ಯಾಥೆಡ್ರೈನ್ ಕ್ಯಾಥೆಡ್ರಲ್ ಮೇಲೆ ದಾಳಿ ನಡೆದಿದ್ದು, ತುರ್ತು ಸೇವೆಯ ನಾಲ್ವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಾರಂಪರಿಕ ಕಟ್ಟಡಗಳನ್ನು ಗುರಿಯಾಗಿಸಿ ಈಗ ದಾಳಿ ನಡೆಸಲಾಗುತ್ತಿದೆ ಎಂದು ಉಕ್ರೇನ್ ಹೇಳಿದೆ.

ಈಗ ಹಾನಿಗೊಂಡಿರುವ ಚರ್ಚ್ 1781ರಲ್ಲಿ ನಿರ್ಮಾಣವಾಗಿತ್ತು. ಇದು, ನಗರದ ಪ್ರಮುಖ ನಿರ್ಮಾಣಗಳಲ್ಲಿ ಒಂದಾಗಿತ್ತು.

ಉಕ್ರೇನ್ ಅಧ್ಯಕ್ಷರ ಕಚೇರಿಯು ಹೇಳಿಕೆ ನೀಡಿದ್ದು ರಷ್ಯಾ ಸೇನೆಯ ದಾಳಿಯಿಂದಾಗಿ ಡೊನೆಟ್ಸ್ಕ ಮತ್ತು ಝಪೋರಿಝಿಯಾ ಪ್ರಾಂತ್ಯದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ತಿಳಿಸಿದೆ.

ರಷ್ಯಾದ ಸೇನೆಯು 15 ಡ್ರೋನ್ ಗಳನ್ನು ಕೀವ್ ವಲಯವನ್ನು ಗುರಿಯಾಗಿಸಿ ಪ್ರಯೋಗಿಸಿತ್ತು. ಎಲ್ಲವನ್ನು ಹೊಡೆದು ಉರುಳಿಸಲಾಗಿದೆ. ಯಾವುದೇ ಆಸ್ತಿ ಹಾನಿ ಅಥವಾ ಪ್ರಾಣಹಾನಿ ಸಂಭವಿಸಿಲ್ಲ ಎಂದು ವಾಯುಪಡೆ ಹೇಳಿಕೆಯಲ್ಲಿ ತಿಳಿಸಿದೆ.

ಯುದ್ಧದ ಆರಂಭದಲ್ಲಿ ಹರ್ಸನ್ ನಗರವನ್ನು ರಷ್ಯಾ ಸೇನೆಯು ವಶಕ್ಕೆ ಪಡೆದಿತ್ತು. ಉಕ್ರೇನ್ ಪಡೆಗಳು ಇದನ್ನು ಕಳೆದ ನವೆಂಬರ್‌ಲ್ಲಿ ಮರು ಸ್ವಾಧೀನ ಪಡೆದಿದ್ದವು. ಈ ಮೂಲಕ ರಷ್ಯಾಗೆ ಹಿನ್ನಡೆಯಾಗಿತ್ತು. ಜೂನ್ ಆರಂಭದಲ್ಲಿ ರಷ್ಯಾದ ದಾಳಿಯಿಂದಾಗಿ ಕಖೋವಾ ಅಣೆಕಟ್ಟು ತೀವ್ರವಾಗಿ ಜಖಂಗೊಂಡಿದ್ದು, ಅಚ್ಚುಕಟ್ಟು ಪ್ರದೇಶಗಳು ಜಲಾವೃತವಾಗಿದ್ದವು. ಜನರನ್ನು ಸ್ಥಳಾಂತರಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಐಐಟಿ ಮದ್ರಾಸ್ ಜಂಜಿಬಾರ್ ಕ್ಯಾಂಪಸ್ ಒಪ್ಪಂದ

ಲಂಡನ್ (ಪಿಟಿಐ): ಬ್ರಿಟನ್‌ನ ಬರ್ಮಿಂಗ್‌ಹ್ಯಾಂ ವಿಶ್ವವಿದ್ಯಾಲಯವು, ತಾಂಜಾನಿಯಾದ ದ್ವೀಪ ನಗರದಲ್ಲಿರುವ ಐಐಟಿ ಮದ್ರಾಸ್‌ನ ಜಂಜಿಬಾರ್ ಕ್ಯಾಂಪಸ್ ಜೊತೆಗೆ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಡಿ ಒಪ್ಪಂದ ಮಾಡಿಕೊಂಡಿದೆ.

ಐಐಟಿ ಮದ್ರಾಸ್ ಜಂಜಿಬಾರ್ ಕ್ಯಾಂಪಸ್ ಭಾರತದ ಹೊರಗಿನ ಮೊದಲ ಐಐಟಿ ಆಗಿದೆ. ಇದು, ಜಂಜಿಬಾರ್ ಮೂಲದ ಪದವಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಅಂದರೆ ಬರ್ಮಿಂಗ್‌ಹ್ಯಾಂ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಕಲಿಯುವ ಅವಕಾಶ ಕಲ್ಪಿಸಲಿದೆ ಎಂದು ಕುಲಾಧಿಪತಿ ಪ್ರೊ. ರಾಬಿನ್ ಮ್ಯಾಸನ್ ತಿಳಿಸಿದ್ದಾರೆ.

ವಿಕಿಪೀಡಿಯಗೆ ರಷ್ಯಾ ಕೋರ್ಟ್ ದಂಡ

ಮಾಸ್ಕೊ (ಎ.ಪಿ): ಉಕ್ರೇನ್ ಬಿಕ್ಕಟ್ಟು ಕುರಿತಂತೆ ತಪ್ಪು ಮಾಹಿತಿಯನ್ನು ಪ್ರಸಾರ ಮಾಡಲಾಗಿದೆ ಎಂಬ ಪ್ರಕರಣದ ಸಂಬಂಧ ವಿಕಿಪೀಡಿಯ ಮತ್ತು ಆ್ಯಪಲ್‌ಗೆ ರಷ್ಯಾದ ಮ್ಯಾಜಿಸ್ಟ್ರೇಟ್ ಕೋರ್ಟ್ ದಂಡ ವಿಧಿಸಿದೆ.

ವಿಕಿಪೀಡಿಯ ಸಂಸ್ಥೆಗೆ ಸುಮಾರು ₹ 27.32 ಲಕ್ಷ (33 ಸಾವಿರ ಡಾಲರ್) ಹಾಗೂ ಪಾಡ್‌ಕಾಸ್ಟ್ ಅನ್ನು ಕೈಬಿಡದ ಆರೋಪಕ್ಕಾಗಿ ಆ್ಯಪಲ್ ಸಂಸ್ಥೆಗೆ ₹ 3.64 ಲಕ್ಷ (4,400 ಡಾಲರ್) ಅನ್ನು ದಂಡ ವಿಧಿಸಿದೆ.

ರಷಿಯನ್ ಭಾಷೆಯ ವಿಕಿಪೀಡಿಯ ಪುಟದಲ್ಲಿ ರಷ್ಯಾದ ಸೇನೆ ಕುರಿತು ಹಾಗೂ ಉಕ್ರೇನ್ ಬಿಕ್ಕಟ್ಟು ಕುರಿತಂತೆ ತಪ್ಪು ಮಾಹಿತಿಯನ್ನು ಪ್ರಸಾರ ಮಾಡಲಾಗಿತ್ತು ಎಂದು ಇಂಟರ್‌ಫ್ಯಾಕ್ಸ್ ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

ಪ್ರಸ್ತಾವಕ್ಕೆ ಪಾಕಿಸ್ತಾನ ಸಚಿವ ಸಂಪುಟ ಅನುಮೋದನೆ

ಅಮೆರಿಕ ಜೊತೆ ರಕ್ಷಣಾ ಒಪ್ಪಂದಕ್ಕೆ ಅಸ್ತು

ಇಸ್ಲಾಮಾಬಾದ್ (ಪಿಟಿಐ): ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಮೆರಿಕದ ಜೊತೆ ಒಪ್ಪಂದಕ್ಕೆ ಸಹಿ ಹಾಕುವ ಪ್ರಸ್ತಾವಕ್ಕೆ ಪಾಕಿಸ್ತಾನ ಸಚಿವ ಸಂಪುಟ ಸಮ್ಮತಿಸಿದೆ. ಇದು, ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯುವ ಇಂಗಿತವನ್ನು ನೀಡಿದೆ.

ಸಂವಹನ ಮತ್ತು ಭದ್ರತೆಗೆ ಸಂಬಂಧಿಸಿದ ಸಿಐಎಸ್-ಎಂಒಎ ಒಪ್ಪಂದಕ್ಕೆ ಸಹಿ ಹಾಕಲು ಸಂಪುಟ ಅನುಮೋದಿಸಿದೆ. ಇದು, ಅಮೆರಿಕದಿಂದ ಸೇನಾ ಪರಿಕರಗಳ ಖರೀದಿಗೆ ನೆರವಾಗಲಿದೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಆದರೆ, ಪಾಕಿಸ್ತಾನ ಅಥವಾ ಅಮೆರಿಕ ಅಧಿಕೃತವಾಗಿ ಈ ಬಗ್ಗೆ ಯಾವುದೇ ಹೇಳಿಕೆ ಬಿಡುಗಡೆ ಮಾಡಿಲ್ಲ. ವಾರ್ತಾ ಸಚಿವರಾದ ಮರ್ರಿಯುಮ್ ಔರಂಗಜೇಬ್ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ ಎಂದು ವರದಿ ತಿಳಿಸಿದೆ.

ಅಮೆರಿಕದ ಸೆಂಟ್ರಲ್ ಕಮಾಂಡ್‌ನ ಮುಖ್ಯಸ್ಥ ಜನರಲ್ ಮೈಖೇಲ್ ಎರ್ರಿಕ್ ಕುರಿಲ್ಲಾ ಮತ್ತು ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಆಸಿಂ ಮುನೀರ್ ನಡುವಿನ ಸಭೆಯಲ್ಲಿ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಒಲವು ವ್ಯಕ್ತವಾಗಿತ್ತು.

ಉಭಯ ದೇಶಗಳ ನಡುವೆ ಹಿಂದೆ 2005ರಲ್ಲಿ ಒಪ್ಪಂದವಾಗಿದ್ದು, 2000ರಲ್ಲಿ ಮುಗಿದಿತ್ತು. ಒಪ್ಪಂದದ ಅನುಸಾರ, ಅಮೆರಿಕ ಸೇನಾ ಪರಿಕರಗಳ ಹಾರ್ಡ್‌ವೇರ್‌ಗಳನ್ನು ಪಾಕಿಸ್ತಾನಕ್ಕೆ ಮಾರಾಟ ಬಹುದಾಗಿದೆ ಎಂದು ವಾಷಿಂಗ್ಟನ್ ಮೂಲಗಳು ತಿಳಿಸಿವೆ.

ಅಮೆರಿಕದ ಜೊತೆಗಿನ ಒಪ್ಪಂದದ ವೇಳೆ ಹಿಂದೆ ಭಾಗಿಯಾಗಿದ್ದ ನಿವೃತ್ತ ಸೇನಾ ಅಧಿಕಾರಿಯೊಬ್ಬರು, ಭಾರತ-ಅಮೆರಿಕ ಬಾಂಧವ್ಯವನ್ನು ಉಲ್ಲೇಖಿಸಿದ ಅವರು, ದೀರ್ಘಾವಧಿಯಲ್ಲಿ ಅಮೆರಿಕದ ಆಸಕ್ತಿ ಇಸ್ಲಾಮಾಬಾದ್ ಜೊತೆಗೆ ಇರುವುದಿಲ್ಲ. ಕೆಲ ವಲಯಗಳಿಗೆ ಸಂಬಂಧಿಸಿ ಅಮೆರಿಕಕ್ಕೆ ಪಾಕ್‌ನ ಅಗತ್ಯವಿದೆ. ಹೀಗಾಗಿ, ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಅಫ್ಗಾನಿಸ್ತಾನ ಕುರಿತು ಪಾಕ್ ಮತ್ತು ಅಮೆರಿಕದ ನಡುವೆ ಭಿನ್ನಾಭಿಪ್ರಾಯ ಆರಂಭವಾಗಿತ್ತು. ಅಲ್‌ಖೈದಾ ನಾಯಕ ಒಸಾಮಾ ಬಿನ್ ಲಾಡೆನ್‌ನನ್ನು ಅಮೆರಿಕ ಸೇನೆಯು ಪಾಕಿಸ್ತಾನದ ನೆಲದಲ್ಲಿಯೇ ಹತ್ಯೆ ಮಾಡಿದ ನಂತರ ಸಂಬಂಧ ಇನ್ನಷ್ಟು ಹದಗೆಟ್ಟಿತ್ತು.

'ಭಾರತ-ಪಾಕಿಸ್ತಾನ ನೇರ ಚರ್ಚೆಗೆ ಬೆಂಬಲ'; (ವಾಷಿಂಗ್ಟನ್): ಭಾರತ ಮತ್ತು ಪಾಕಿಸ್ತಾನ ನಡುವೆ ನೇರವಾಗಿ ಮಾತುಕತೆ ನಡೆಯುವುದನ್ನು ಅಮೆರಿಕ ಬೆಂಬಲಿಸಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಾವು ಇದನ್ನು ಈ ಹಿಂದೆಯೇ ಹೇಳಿದ್ದೆವು. ಇದು, ನಮ್ಮ ದೀರ್ಘ ಕಾಲದ ನಿಲುವಾಗಿದೆ' ಎಂದು ಅಮೆರಿಕದ ವಿದೇಶಾಂಗ ವಕ್ತಾರ ಮ್ಯಾಥ್ಯೂ ಮಿಲ್ಲರ್ ಅವರು ಪ್ರತಿಕ್ರಿಯೆ ನೀಡಿದರು.

ಪೂರ್ಣ ಅಧಿಕಾರ ಚಲಾಯಿಸಬಾರದೇ: 'ಸುಪ್ರೀಂ' ಪ್ರಶ್ನೆ

ನವದೆಹಲಿ: ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ಗುರುವಾರವೂ ಮುಂದುವರಿಯಿತು.

'ಜಮ್ಮು–ಕಾಶ್ಮೀರಕ್ಕೆ ತಾತ್ಕಾಲಿಕವಾಗಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಲು ತನಗಿರುವ ಪೂರ್ಣ ಅಧಿಕಾರವನ್ನು ಸಂಸತ್ ಚಲಾಯಿಸಬಾರದಿತ್ತು ಎಂದು ಹೇಗೆ ಹೇಳಬಹುದು' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ನ್ಯಾಯಪೀಠವು ಅರ್ಜಿದಾರರನ್ನು ಪ್ರಶ್ನಿಸಿತು.

ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮೊಹಮ್ಮದ್ ಅಕ್ಬರ್ ಲೋನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸಬಾರದಿತ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಯಾವುದೋ ಒಂದು ಕಾಲಘಟ್ಟದಲ್ಲಿ ಈ ವಿಶೇಷ ಸವಲತ್ತನ್ನು ಹಿಂಪಡೆಯಬಹುದಿತ್ತು. ಆದರೆ, ಸಾಂವಿಧಾನಿಕ ಮಾರ್ಗ ಅನುಸರಿಸಿಯೇ ಇಂತಹ ನಿರ್ಧಾರ ಕೈಗೊಳ್ಳಬೇಕು' ಎಂದು ಪ್ರತಿಪಾದಿಸಿದರು.

'370ನೇ ವಿಧಿಯಡಿ ನೀಡಲಾದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿ ತಿದ್ದುಪಡಿ ತರಲು ಸಂಸತ್ ತನಗಿರುವ ಅಧಿಕಾರವನ್ನು ಚಲಾಯಿಸಬಾರದು ಎಂದು ನೀವು ಹೇಗೆ ಹೇಳುತ್ತೀರಿ' ಎಂದು ನ್ಯಾಯಪೀಠ ಮತ್ತೆ ಪ್ರಶ್ನಿಸಿತು.

ತಮ್ಮ ವಾದವನ್ನು ಪುನರುಚ್ಚರಿಸಿದ ಸಿಬಲ್ ಅವರು, 'ಕೇಂದ್ರ ಸರ್ಕಾರದ್ದು ರಾಜಕೀಯ ನಡೆಯಾಗಿತ್ತು. ಆ ರೀತಿಯಲ್ಲಿ ನಿರ್ಧಾರ ಕೈಗೊಳ್ಳಲು ಸಂವಿಧಾನದಲ್ಲಿ ಅವಕಾಶ ಇಲ್ಲ' ಎಂದರು.

ಇದೇ ವಿಚಾರವಾಗಿ 20 ಅರ್ಜಿಗಳು ಸಲ್ಲಿಕೆಯಾಗಿದ್ದು, ಮಂಗಳವಾರ ವಿಚಾರಣೆ ಮುಂದುವರಿಯಲಿದೆ.

ಸಾಮೂಹಿಕ ಅಂತ್ಯಕ್ರಿಯೆ ಮುಂದಕ್ಕೆ

ಮಣಿಪುರ: ಬೆಳಿಗ್ಗೆ 6 ಗಂಟೆಗೆ ಪಿಐಎಲ್ ವಿಚಾರಣೆ ನಡೆಸಿದ ಹೈಕೋರ್ಟ್ • ಯಥಾಸ್ಥಿತಿಗೆ ಆದೇಶ

ಪ್ರಜಾವಾಣಿ ವಾರ್ತೆ/ ಪಿಟಿಐ

ಇಂಫಾಲ್: ಮಣಿಪುರದ ಜನಾಂಗೀಯ ಹಿಂಸಾಚಾರದಲ್ಲಿ ಮೃತಪಟ್ಟ ಕುಕಿ ಬುಡಕಟ್ಟಿನ 35 ಜನರ ಸಾಮೂಹಿಕ ಅಂತ್ಯಕ್ರಿಯೆ ನಡೆಸಲು ಉದ್ದೇಶಿಸಿರುವ ವಿವಾದಾತ್ಮಕ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಇಲ್ಲಿನ ಹೈಕೋರ್ಟ್ ಗುರುವಾರ ಆದೇಶಿಸಿದೆ. ಈ ಕುರಿತ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಂತೆ ಹೈಕೋರ್ಟ್ ಸೂಚಿಸಿದೆ.

ಅಂತ್ಯಕ್ರಿಯೆ ಕಾರ್ಯಕ್ಕೂ ಕೆಲ ಗಂಟೆಗಳ ಮುನ್ನ ಈ ಆದೇಶ ಹೊರಬಿದ್ದಿದೆ. ಇದರ ಬೆನ್ನಲ್ಲೇ, ಸಾಮೂಹಿಕ ಅಂತ್ಯಕ್ರಿಯೆ ಕಾರ್ಯವನ್ನು ಮುಂದೂಡಿರುವುದಾಗಿ ಕುಕಿ ಸಮುದಾಯದ ಸಂಘಟನೆ ಐಟಿಎಲ್‌ಎಫ್ ಪ್ರಕಟಿಸಿದೆ.

ಚುರಚಂದಪುರ ಜಿಲ್ಲೆಯ ಹಾವೋಲೈ ಖೋಪಿ ಗ್ರಾಮದ 'ಶಾಂತಿ ಮೈದಾನ'ದಲ್ಲಿ ಗುರುವಾರ ಸಾಮೂಹಿಕ ಅಂತ್ಯಕ್ರಿಯೆ ನಡೆಸಲು ಸಂಘಟನೆ ಯೋಜಿಸಿತ್ತು.

ಬೆಳಿಗ್ಗೆ 6ಕ್ಕೆ ನಡೆದ ವಿಚಾರಣೆ: ವಿವಾದಿತ ಭೂ ಪ್ರದೇಶದಲ್ಲಿ ಸಾಮೂಹಿಕ ಅಂತ್ಯಕ್ರಿಯೆ ನಡೆಯುವ ವಿಚಾರವಾಗಿ ರಾಜ್ಯದ ಹಲವೆಡೆ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಹೀಗಾಗಿ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎಂ.ವಿ. ಮುರಳೀಧರನ್ ನೇತೃತ್ವದ ಪೀಠವು ಗುರುವಾರ ಬೆಳಿಗ್ಗೆ 6 ಗಂಟೆಗೆ ಈ ಕುರಿತ ಪಿಐಎಲ್‌ನ ತುರ್ತು ವಿಚಾರಣೆ ಕೈಗೆತ್ತಿಕೊಂಡಿತು.

ಈ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಕುಕಿ, ಮೈತೇಯಿ ಸಮುದಾಯದವರಿಗೆ, ರಾಜ್ಯ, ಕೇಂದ್ರ ಸರ್ಕಾರ ಮತ್ತು ಕಾನೂನು ಜಾರಿ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕರಿಗೆ ನಿರ್ದೇಶನ ನೀಡಿದ ಪೀಠ, ಮುಂದಿನ ವಿಚಾರಣೆಯನ್ನು ಇದೇ 9ಕ್ಕೆ ನಿಗದಿಪಡಿಸಿತು.

ಈ ಸ್ಥಳದಲ್ಲಿ ಸಾಮೂಹಿಕ ಅಂತ್ಯಕ್ರಿಯೆ ನಡೆಸುವುದನ್ನು ವಿರೋಧಿಸಿ ಅಂತರರಾಷ್ಟ್ರೀಯ ಮೈತೇಯಿ ವೇದಿಕೆ ಬುಧವಾರ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿತ್ತು. ಇದನ್ನು ನ್ಯಾಯಮೂರ್ತಿಗಳಾದ ಎ.ಬಿಮೋಲ್ ಸಿಂಗ್ ಮತ್ತು ಎ.ಗುಣೇಶ್ವರ್ ಶರ್ಮಾ ಅವರಿದ್ದ ವಿಶೇಷ ಪೀಠ ವಿಚಾರಣೆ ನಡೆಸಬೇಕಿತ್ತು. ಆದರೆ ಬಿಮೋಲ್ ಸಿಂಗ್ ಅವರು ವೈಯಕ್ತಿಕ ಕಾರಣದಿಂದ ಹಿಂದೆ ಸರಿದರು. ಹೀಗಾಗಿ ಇದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎಂ.ವಿ. ಮುರಳೀಧರನ್ ಮತ್ತು ಶರ್ಮಾ ಅವರ ಪೀಠಕ್ಕೆ ವರ್ಗಾವಣೆಯಾಯಿತು.

ಗೃಹ ಸಚಿವಾಲಯದ ಭರವಸೆ: ವಿವಾದಿತ ಪ್ರದೇಶದ ಸಮಸ್ಯೆ ಪರಿಹಾರ ಕಂಡುಕೊಳ್ಳುವ ಕುರಿತು ಗೃಹ ಸಚಿವಾಲಯ ಭರವಸೆ ನೀಡಿದ ಕಾರಣ ಸಾಮೂಹಿಕ ಅಂತ್ಯಕ್ರಿಯೆ ಮುಂದೂಡಲು ನಿರ್ಧರಿಸಲಾಯಿತು ಎಂದು ಐಟಿಎಲ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಐಟಿಎಲ್‌ಎಫ್‌ನ ಐದು ಬೇಡಿಕೆಗಳು: ಅಂತ್ಯಕ್ರಿಯೆಗೆ ಉದ್ದೇಶಿಸಿರುವ ಸ್ಥಳವನ್ನು ಕಾನೂನು ಬದ್ಧಗೊಳಿಸಬೇಕು, 'ಇಂಫಾಲ್ ಆಸ್ಪತ್ರೆಯಲ್ಲಿರುವ ಕುಕಿ ಬುಡಕಟ್ಟಿನವರ ಶವಗಳನ್ನು ಹಸ್ತಾಂತರಿಸಬೇಕು, ಮಣಿಪುರದಿಂದ ಸಂಪೂರ್ಣವಾಗಿ ಪ್ರತ್ಯೇಕಗೊಳ್ಳುವ ಪ್ರಕ್ರಿಯೆಯನ್ನು ವೇಗಗೊಳಿಸಬೇಕು ಮತ್ತು ಇಂಫಾಲ್ ಜೈಲಿನಲ್ಲಿರುವ ಕುಕಿ ಕೈದಿಗಳನ್ನು ಇತರ ರಾಜ್ಯಗಳಿಗೆ ವರ್ಗಾಯಿಸಬೇಕು ಎಂಬ ಐದು ಬೇಡಿಕೆಗಳನ್ನು ಕೇಂದ್ರ ಸರ್ಕಾರದ ಮುಂದಿಟ್ಟಿರುವುದಾಗಿ ಐಟಿಎಲ್‌ಎಫ್ ಹೇಳಿದೆ.

ಮಣಿಪುರದ ಜನಾಂಗೀಯ ಹಿಂಸಾಚಾರದಲ್ಲಿ ಮೃತಪಟ್ಟ ಕುಕಿ ಬುಡಕಟ್ಟು ಜನರ ಸಾಮೂಹಿಕ ಅಂತ್ಯಕ್ರಿಯೆಯನ್ನು ವಿರೋಧಿಸಿ ಇಂಫಾಲ್‌ನಲ್ಲಿ ಪ್ರತಿಭಟನೆ ನಡೆಸಿದ ಮಹಿಳೆಯೊಬ್ಬರು ಸೇನಾ ವಾಹನವನ್ನು ತಡೆದರು – ಎಎಫ್‌ಪಿ ಚಿತ್ರ

ಘರ್ಷಣೆ: 19 ಜನರಿಗೆ ಗಾಯ

ಮಣಿಪುರದ ಬಿಷ್ಣುಪುರ ಜಿಲ್ಲೆಯ ಕಾಂಗ್‌ವಾಯಿ ಮತ್ತು ಫೌಗಾಕಚಾವೊ ಪ್ರದೇಶದಲ್ಲಿ ಗುರುವಾರ ಬೀದಿಗಿಳಿದಿದ್ದ ಜನರ ಗುಂಪನ್ನು ಚದುರಿಸಲು ಸೇನೆ ಮತ್ತು ಆರ್‌ಎಎಫ್ ಸಿಬ್ಬಂದಿ ನಡೆಸಿದ ಅಶ್ರುವಾಯು ಶೆಲ್ ದಾಳಿಯಲ್ಲಿ 19 ಜನರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನಾಂಗೀಯ ಹಿಂಸಾಚಾರದಲ್ಲಿ ಮೃತಪಟ್ಟ 35 ಕುಕಿ ಬುಡಕಟ್ಟು ಜನರ ಸಾಮೂಹಿಕ ಅಂತ್ಯಕ್ರಿಯೆಯನ್ನು ಚುರಾಚಾಂದಪುರದಲ್ಲಿ ಆಯೋಜಿಸಿರುವುದನ್ನು ವಿರೋಧಿಸಿ ಹೊರಡಲು ಮಹಿಳೆಯರು ಸೇರಿದಂತೆ ಸಾವಿರಾರು ಜನರು ಬೀದಿಗಿಳಿದಿದ್ದರು.

ಮಹಿಳೆಯರ ನೇತೃತ್ವದ ಗುಂಪು ಸೇನೆ ಮತ್ತು ಆರ್‌ಎಎಫ್ ಸಿಬ್ಬಂದಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸಿದರು. ಮಹಿಳೆಯರು ಭದ್ರತಾ ಪಡೆಗಳ ಮೇಲೆ ಕಲ್ಲು ತೂರಿದರು. ಈ ವೇಳೆ ಗುಂಪನ್ನು ತಡೆಯಲು ಮತ್ತು ಚದುರಿಸಲು ಸೇನೆ, ಆರ್‌ಎಎಫ್ ಸಿಬ್ಬಂದಿ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಇದು, ಮೈತೇಯಿ ಸಮುದಾಯದವರು ಹೆಚ್ಚಿರುವ 'ಇಂಫಾಲ್ ಪೂರ್ವ' ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಿಸಿತು.

ಈ ಜಿಲ್ಲೆಗಳಲ್ಲಿ ಘೋಷಿಸಲಾಗಿದ್ದ ಕರ್ಫ್ಯೂ ಸಡಿಲಿಕೆಯನ್ನು ಘರ್ಷಣೆ ಬೆನ್ನಲ್ಲೇ ಜಿಲ್ಲಾಧಿಕಾರಿಗಳು ಹಿಂಪಡೆದಿದ್ದಾರೆ. ರಾಜ್ಯದ ವಿವಿಧೆಡೆ ಪೊಲೀಸರು 347 ಜನರನ್ನು ವಶಕ್ಕೆ ಪಡೆದಿದ್ದಾರೆ.

₹812 ಕೋಟಿ ಮೌಲ್ಯದ ಬಾಂಡ್‌ಗಳ ಮಾರಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಜುಲೈ 3ರಿಂದ 12ರ ವರೆಗಿನ 27ನೇ ಆವೃತ್ತಿ ಅವಧಿಯಲ್ಲಿ ₹ 812.80 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳು ಮಾರಾಟವಾಗಿವೆ. ಈ ಪೈಕಿ ₹ 5.01 ಲಕ್ಷ ಮೊತ್ತದಷ್ಟು ಹೊರತುಪಡಿಸಿದಂತೆ ರಾಜಕೀಯ ಪಕ್ಷಗಳು ಎಲ್ಲ ಬಾಂಡ್‌ಗಳನ್ನು ನಗದೀಕರಿಸಿಕೊಂಡಿವೆ.

ಮಾಹಿತಿ ಹಕ್ಕು ಕಾರ್ಯಕರ್ತ, ಕಮಡೋರ್ (ನಿವೃತ್ತ) ಲೋಕೇಶ್ ಬಾತ್ರ ಅವರ ಆರ್‌ಟಿಐ ಅಡಿ ಈ ಕುರಿತು ಮಾಹಿತಿ ಪಡೆದಿದ್ದಾರೆ.

2018ರಲ್ಲಿ ಚುನಾವಣಾ ಬಾಂಡ್‌ಗಳ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಅಲ್ಲಿಂದ ಈ 27ನೇ ಆವೃತ್ತಿಯವರೆಗೆ ಎಸ್‌ಬಿಐ ಸರಿದಂತೆ ಈ ವರೆಗೆ ₹ 13,791.89 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ.

ಈ ಪೈಕಿ ನಗದೀಕರಣ ಮಾಡಿಕೊಳ್ಳದ ₹ 23.88 ಕೋಟಿ ಮೊತ್ತವನ್ನು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ.

ಕಳೆದ ಏಪ್ರಿಲ್‌ನ 26ನೇ ಆವೃತ್ತಿಯ ಮಾರಾಟ ನಡೆದಿತ್ತು, ₹970.50 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳು ಮಾರಾಟವಾಗಿದ್ದರೆ, ರಾಜಕೀಯ ಪಕ್ಷಗಳು ₹ 15 ಲಕ್ಷ ಮೊತ್ತದಷ್ಟು ಹೊರತುಪಡಿಸಿ ಉಳಿದ ಬಾಂಡ್‌ಗಳನ್ನು ನಗದೀಕರಿಸಿಕೊಂಡಿದ್ದವು.

27ನೇ ಆವೃತ್ತಿಯಲ್ಲಿ ಎಸ್‌ಬಿಐ 1,371 ಬಾಂಡ್‌ಗಳನ್ನು ಮಾರಾಟ ಮಾಡಿದೆ. ಈ ಪೈಕಿ ಶೇ 56.38ರಷ್ಟು ಅಥವಾ 773 ಬಾಂಡ್‌ಗಳ ಮೌಲ್ಯ ಒಂದು ಕೋಟಿ ರೂಪಾಯಿ ಮೌಲ್ಯದ್ದು. ತಲಾ ಒಂದು ಲಕ್ಷ ರೂಪಾಯಿ ಮೌಲ್ಯದ 220 ಬಾಂಡ್‌ಗಳು, ತಲಾ ₹10 ಲಕ್ಷ ಮೌಲ್ಯದ 376 ಹಾಗೂ ₹ 10 ಸಾವಿರ ಮೌಲ್ಯದ ಎರಡು ಬಾಂಡ್‌ಗಳನ್ನು ಎಸ್‌ಬಿಐ ಮಾರಾಟ ಮಾಡಿದ್ದು ಎಂದು ಮಾಹಿತಿ ನೀಡಲಾಗಿದೆ.

ಎಸ್‌ಬಿಐನ ಹೈದರಾಬಾದ್ ಶಾಖೆ ಗರಿಷ್ಠ ₹266.72 ಕೋಟಿ ಮೌಲ್ಯದ ಬಾಂಡ್‌ಗಳನ್ನು ಮಾರಾಟ ಮಾಡಿದ್ದರೆ, ₹143.20 ಕೋಟಿ ಮೌಲ್ಯದ ಬಾಂಡ್‌ಗಳ ಮಾರಾಟ ಮಾಡಿದ್ದ ಕೋಲ್ಕತ್ತ ಶಾಖೆ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಮುಂಬೈ (₹ 135 ಕೋಟಿ ಮೌಲ್ಯದ ಬಾಂಡ್ ಮಾರಾಟ) ಹಾಗೂ ಬೆಂಗಳೂರು (₹ 46 ಕೋಟಿ ಮೌಲ್ಯದ ಬಾಂಡ್‌ಗಳ ಮಾರಾಟ) ಶಾಖೆಗಳಿವೆ.

ಬಾಂಡ್ ನಗದೀಕರಣ ವಿಷಯದಲ್ಲಿ ಬ್ಯಾಂಕಿನ ಭುವನೇಶ್ವರ ಶಾಖೆ ಅಗ್ರಸ್ಥಾನದಲ್ಲಿದೆ. ಈ ಶಾಖೆಯಲ್ಲಿ ₹155.50 ಕೋಟಿ ಮೌಲ್ಯದ ಬಾಂಡ್‌ಗಳ ನಗದೀಕರಣವಾಗಿದೆ. ನಂತರದ ಸ್ಥಾನದಲ್ಲಿರುವ ನವದೆಹಲಿ ಶಾಖೆಯಲ್ಲಿ ₹117.58 ಕೋಟಿ ಮೌಲ್ಯದ ಬಾಂಡ್‌ಗಳನ್ನು ನಗದೀಕರಣಗೊಳಿಸಲಾಗಿದೆ ಎಂದು ಎಸ್‌ಬಿಐ ಉತ್ತರಿಸಿದೆ.

ಚುನಾವಣಾ ಬಾಂಡ್‌ಗಳ ನಗದೀಕರಣ ಉದ್ದೇಶಕ್ಕಾಗಿ 25 ರಾಜಕೀಯ ಪಕ್ಷಗಳು ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಖಾತೆ ತೆರೆದಿವೆ ಎಂದೂ ತಿಳಿಸಿದೆ.

ಆರ್‌ಎಸ್‌ಎಸ್ ಕಚೇರಿ ಬಳಿ ಮೂತ್ರ ವಿಸರ್ಜನೆ: ಮೂವರ ಸೆರೆ

ಶಹಜಹಾನ್‌ಪುರ (ಪಿಟಿಐ): ಆರ್‌ಎಸ್‌ಎಸ್‌ನ ಇಲ್ಲಿಯ ಸ್ಥಳೀಯ ಕಚೇರಿಯ ದ್ವಾರದ ಬಳಿ ಮೂತ್ರ ವಿಸರ್ಜನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಆತನ ಇಬ್ಬರು ಸಹಚರರನ್ನು ಬಂಧಿಸಲಾಗಿದೆ. ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿ ಬುಧವಾರ ರಾತ್ರಿ ಈ ಪ್ರಕರಣ ನಡೆದಿದೆ.

ಮೂತ್ರ ವಿಸರ್ಜಿಸಿದ ವ್ಯಕ್ತಿ ಮತ್ತು ಆತನ ಸ್ನೇಹಿತರನ್ನು ಆರ್‌ಎಸ್‌ಎಸ್ ಕಾರ್ಯಕರ್ತರು ತಡೆದಾಗ ವಾಗ್ವಾದ ನಡೆದಿದೆ. ಕೂಡಲೇ ಸುಮಾರು 50 ಜನರು ಸ್ಥಳದಲ್ಲಿ ಸೇರಿದ್ದರು. ಆಗ ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿದ್ದು, ಇಟ್ಟಿಗೆ ತೂರಾಟ ಮತ್ತು ಗುಂಡು ಹಾರಿಸಿದ ಘಟನೆಗಳೂ ನಡೆದಿವೆ ಎಂದು ಪೊಲೀಸರು ಹೇಳಿದ್ದಾರೆ.

ಶಶಾಂಕ್ ಗುಪ್ತಾ, ಶಿವಾಂಕ್ ಗುಪ್ತಾ ಮತ್ತು ಮುಖೇಶ್ ಗುಪ್ತಾ ಬಂಧನಕ್ಕೊಳಗಾಗಿರುವ ಆರೋಪಿಗಳು.

'ಆರೋಪಿಗಳು ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ದಾಳಿ ನಡೆಸಿದ್ದರಿಂದ ಚಿಕ್ಕಪುಟ್ಟ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಐವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಸಂಬಂಧಪಟ್ಟ ಸೆಕ್ಷನ್‌ಗಳ ಅಡಿ 40ರಿಂದ 50 ಮಂದಿ ಅಪರಿಚಿತರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಇತರ ಆರೋಪಿಗಳನ್ನು ಪತ್ತೆ ಮಾಡಲು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಅಲ್ಲದೆ ಅವರ ಬಂಧನಕ್ಕೆ ನಾಲ್ಕು ತಂಡಗಳನ್ನು ರಚಿಸಲಾಗಿದೆ. ಆರ್‌ಎಸ್‌ಎಸ್ ಕಚೇರಿಗೆ ಭದ್ರತೆ ಕಲ್ಪಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿದೇಶಿ ವಿದ್ಯಾರ್ಥಿಗಳ ಪ್ರವೇಶ ಇನ್ನು ಮುಂದೆ ಸರಳ

ಎಸ್‌ಐಐ ಪೋರ್ಟಲ್ ಆರಂಭ

ನವದೆಹಲಿ (ಪಿಟಿಐ): ಭಾರತದಲ್ಲಿ ಶಿಕ್ಷಣ ಪಡೆಯುವ ವಿದೇಶಿ ವಿದ್ಯಾರ್ಥಿಗಳ ಪ್ರವೇಶ ಸರಳಗೊಳಿಸಲು ಮತ್ತು ಒಂದೇ ವೇದಿಕೆಯಡಿ ಎಲ್ಲ ಮಾಹಿತಿ ಒದಗಿಸುವ ಸ್ಟಡಿ ಇನ್ ಇಂಡಿಯಾ (ಎಸ್‌ಐಐ) ಪೋರ್ಟಲ್ ಅನ್ನು ಕೇಂದ್ರ ಸರ್ಕಾರ ಆರಂಭಿಸಿದೆ

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಪೋರ್ಟಲ್ ಅನ್ನು ಬುಧವಾರ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೈಶಂಕರ್, 'ನೋಂದಣಿಯಿಂದ ವೀಸಾ ಅನುಮೋದನೆಯವರೆಗೆ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಬಳಕೆದಾರ ಸ್ನೇಹಿ ಅಪ್ಲಿಕೇಶನ್ ಈ ಪೋರ್ಟಲ್‌ನಲ್ಲಿ ಲಭ್ಯವಿದೆ. ಇದು ವಿದೇಶಿ ವಿದ್ಯಾರ್ಥಿಗಳ ಪ್ರಯಾಣ, ಪ್ರವೇಶವನ್ನು ಸಂಪೂರ್ಣ ಸರಳಗೊಳಿಸಲಿದೆ. ಅವರು ಬಯಸಿದ ಸಂಸ್ಥೆಗಳಲ್ಲಿ ಆಯ್ಕೆಯ ಕೋರ್ಸ್‌ಗಳಿಗೆ ಸುಲಭವಾಗಿ ಪ್ರವೇಶ ಪಡೆಯಲು ಸಾಧ್ಯವಾಗಲಿದೆ' ಎಂದು ಹೇಳಿದರು.



ಎಸ್. ಜೈಶಂಕರ್

'ಭಾರತವನ್ನು ಜಾಗತಿಕ ಶೈಕ್ಷಣಿಕ ಕೇಂದ್ರವನ್ನಾಗಿ ಮಾಡುವ ಗುರಿಯೊಂದಿಗೆ ಈ ಪೋರ್ಟಲ್ ಆರಂಭಿಸಿರುವುದು. ಇದು ಶಿಕ್ಷಣ ಕ್ಷೇತ್ರದಲ್ಲಿ ಭಾರತದ ಬ್ರ್ಯಾಂಡ್‌ನ ಬಲವಾದ ಅಂತರರಾಷ್ಟ್ರೀಯ ಹೆಜ್ಜೆಗುರುತು ಮೂಡಿಸಲು ನಮಗೆ ನೆರವಾಗಲಿದೆ' ಎಂದಿದ್ದಾರೆ.

'ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಉಪಸ್ಥಿತಿಯು ಸ್ಥಳೀಯ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ನಮ್ಮ ವಿದ್ಯಾರ್ಥಿಗಳನ್ನು ಜಾಗತೀಕರಣದ ಜಗತ್ತಿಗೆ ಹೆಚ್ಚು ನಿಕಟವಾಗಿ ಬೆಸೆಯುತ್ತದೆ. ಜತೆಗೆ ಜಾಗತಿಕ ಕೆಲಸದ ಬೇಡಿಕೆಗೆ ತಕ್ಕಂತೆ ಸ್ಥಳೀಯ ವಿದ್ಯಾರ್ಥಿಗಳನ್ನೂ ಸಜ್ಜುಗೊಳಿಸುತ್ತದೆ. ಭಾರತೀಯ ದೃಷ್ಟಿಕೋನದಲ್ಲಿ, ವಿದೇಶಿ ವಿದ್ಯಾರ್ಥಿಗಳು ಸ್ಥಳೀಯ ವಿದ್ಯಾರ್ಥಿಗಳೊಂದಿಗೆ ಅಧ್ಯಯನ ಮಾಡುವುದರಿಂದ ಅವರ ಸಂಸ್ಕೃತಿ, ಜೀವನ ಪದ್ಧತಿ, ಸಂಪ್ರದಾಯಗಳು ಮತ್ತು ಚಿಂತನೆಯ ಬಗ್ಗೆ ಪರಸ್ಪರ ಉತ್ತಮ ತಿಳಿವಳಿಕೆಯೂ ಉಂಟಾಗುತ್ತದೆ' ಎಂದು ಹೇಳಿದರು.

'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ರೂಪಿಸಿರುವ ಎಸ್‌ಐಐ ಪೋರ್ಟಲ್ ಭಾರತವನ್ನು ಆದ್ಯತೆಯ ಶೈಕ್ಷಣಿಕ ತಾಣವನ್ನಾಗಿ ಮಾಡುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಸಮೃದ್ಧ ಭವಿಷ್ಯವನ್ನು ರೂಪಿಸಲು ಸಹಕಾರಿಯಾಗಲಿದೆ' ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಮಾತ್ರ)
ಬೆವಿಕಂ ವಿಚಾರಣಾ ಸಂಖ್ಯೆ: ಬೆವಿಕಂ/ಪ್ರವ್ಯ(ಡಾಸ್ ಮತ್ತು ಎಸ್‌ಜಿ)/ಬಿಸಿ-19/2023-24/ಓಎಫ್‌ಸಿ/17 ದಿನಾಂಕ: 03.08.2023 ರ ಅನ್ವಯ ಬೆವಿಕಂನ ಬೆಂ.ಮ.ಕ್ಷೇತ್ರ ವಲಯ ವ್ಯಾಪ್ತಿಯಲ್ಲಿನ ಓಎಫ್‌ಸಿ ನೆಟ್‌ವರ್ಕ್ ಲೀಸ್‌ಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಬಿಡ್ ದಾಖಲೆಗಳು ದಿನಾಂಕ: 07.08.2023, 15.00 ಗಂಟೆಗಳ ನಂತರ ಲಭ್ಯವಿರುತ್ತದೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ
ಸಹಿ/-
ಪ್ರಧಾನ ವ್ಯವಸ್ಥಾಪಕರು,
(ಡಾಸ್, ಎಸ್‌ಜಿ ಮತ್ತು ಟಿ.ಐ.ಸಿ)
ಬೆವಿಕಂ, ಬೆಂಗಳೂರು.

ವನ್ಯಜೀವಿ ವಿಭಾಗ, ಶಿವಮೊಗ್ಗ.
Phone No; 08182-222983
ಸಂ:ಬಿ1/ಆನೆಆಹಾರ/ಸಿಆರ್–1/2023–24 ದಿನಾಂಕ: 01.08.2023
ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2023–24ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ ಸಕ್ರೆಬೈಲು ಆನೆ ಬಿಡಾರದಲ್ಲಿ ಸಲಹುತ್ತಿರುವ ಇಲಾಖಾ ಆನೆಗಳಿಗೆ ಆಹಾರ ಸರಬರಾಜು ಮಾಡುವ ಬಗ್ಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:16.08.2023 ಸಂಜೆ 4.30 ಘಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.ktpp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/121/08/23–24/269

ಜ್ಞಾನವಾಪಿ: ಸಮೀಕ್ಷೆಗೆ ಅನುಮತಿ

ಒಂದನೇ ಪುಟದಿಂದ...

ವಿಚಾರಣೆ: ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಗೆ ಸೂಚಿಸಿ ವಾರಾಣಸಿ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ತಡೆ ನೀಡಬೇಕು ಎಂದು ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಅರ್ಜಿ ಸಲ್ಲಿಸಿತ್ತು. ಕಳೆದ ವಾರ ವಿಚಾರಣೆ ನಡೆಸಿದ್ದ ಹೈಕೋರ್ಟ್, ತೀರ್ಪನ್ನು ಕಾಯ್ದಿರಿಸಿತ್ತು.

ಗುರುವಾರ ಅರ್ಜಿ ವಿಚಾರಣೆ ವೇಳೆ, 'ನ್ಯಾಯ ನಿರ್ಣಯ ದೃಷ್ಟಿಯಿಂದ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸುವುದು ಅಗತ್ಯ' ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, 'ಮಸೀದಿ ಆವರಣದಲ್ಲಿ ಅಗೆಯುವ ಕಾರ್ಯ ನಡೆಸಬಾರದು. ವಜುಖಾನಾ ಹೊರತುಪಡಿಸಿ ಉಳಿದ ಭಾಗದಲ್ಲಿ ಸಮೀಕ್ಷೆ ನಡೆಸಬೇಕು' ಎಂದು ಸೂಚಿಸಿತು.

ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣುಶಂಕರ್ ಜೈನ್, 'ಮಸೀದಿಗೆ ಧಕ್ಕೆಯಾಗದಂತೆ ಸಮೀಕ್ಷೆ ನಡೆಸಲಾಗುವುದು ಎಂದು ಎಎಸ್‌ಐ ಈ ಹಿಂದೆಯೇ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದು, ಅದರಂತೆಯೇ ಸಮೀಕ್ಷೆ ನಡೆಸಲಾಗುತ್ತದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಈ ಹಿಂದೆ, ನ್ಯಾಯಾಲಯದ ಸೂಚನೆಯಂತೆ ನೇಮಕಗೊಂಡಿದ್ದ ಆಯುಕ್ತರು ಸಮೀಕ್ಷೆ ನಡೆಸಿದ್ದರು. ಮಸೀದಿಯಲ್ಲಿ ಸ್ವಸ್ತಿಕ ಇದ್ದ ಬಗ್ಗೆ ಆಗ ಸಾಕ್ಷ್ಯ ಲಭ್ಯವಾಗಿತ್ತು. ಇದು ಆ ಕಟ್ಟಡ (ಜ್ಞಾನವಾಪಿ) ದೇವಸ್ಥಾನ ಎಂಬುದನ್ನು ಸೂಚಿಸುವಂತಿತ್ತು. ರಾಮ ಜನ್ಮಭೂಮಿ ಪ್ರಕರಣದಂತೆಯೆ, ಈ ವಿಷಯದಲ್ಲಿಯೂ ನಿರ್ಣಾಯಕ ಸಾಕ್ಷ್ಯಗಳು ವೈಜ್ಞಾನಿಕ ಸಮೀಕ್ಷೆಯಿಂದ ಹೊರಬರಲಿವೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಸಮಿತಿ ಪರ ವಕೀಲ ಎಸ್.ಎಫ್.ಎ. ನಕ್ವಿ, 'ನೆಲ ಅಗೆಯಲು ಬಳಸುವ ಹಲವು ಸಲಕರಣೆಗಳನ್ನು ಎಎಸ್‌ಐ ತಂಡ ಮಸೀದಿ ಆವರಣದೊಳಗೆ ತಂದಿದೆ. ಅಗೆಯುವ ಉದ್ದೇಶವನ್ನು ಈ ನಡೆ ತೋರಿಸುತ್ತದೆ. ಸಲಕರಣೆಗಳ ಕುರಿತ ಚಿತ್ರಗಳನ್ನು ಅರ್ಜಿ ಜೊತೆ ಸಲ್ಲಿಸಿದ್ದೇವೆ' ಎಂದರು.

'ಎಎಸ್‌ಐ ಸಿಬ್ಬಂದಿ ಕೆಲ ಸಲಕರಣೆಗಳನ್ನು ತಂದಿದ್ದರೂ, ಅವರು ಅಗೆಯುವ ಉದ್ದೇಶ ಹೊಂದಿದ್ದರು ಎಂದು ತೋರುತ್ತಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ದಿವಾಕರ್ ಅವರು ಪ್ರತಿಕ್ರಿಯಿಸಿದರು.

ಸ್ಪಷ್ಟನೆ: 'ಸಮೀಕ್ಷೆ ನಡೆಸುವ ಸ್ಥಳದಲ್ಲಿನ ಅವಶೇಷಗಳನ್ನು ತೆರವುಗೊಳಿಸುವುದಕ್ಕಾಗಿ ಸಲಕರಣೆಗಳನ್ನು ತರಲಾಗಿದ್ದು, ಅಗೆಯಲು ಅಲ್ಲ' ಎಂದು ಎಎಸ್‌ಐ ಹೆಚ್ಚುವರಿ ನಿರ್ದೇಶಕ ಅಲೋಕ್ ತ್ರಿಪಾಠಿ ಸ್ಪಷ್ಟಪಡಿಸಿದ್ದಾರೆ.

ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ವಾರಾಣಸಿ ನ್ಯಾಯಾಲಯ ಜುಲೈ 21ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಜುಲೈ 26ರ ಸಂಜೆ 5ರ ವರೆಗೆ ಸಮೀಕ್ಷೆಗೆ ತಡೆ ನೀಡಿತ್ತಲ್ಲದೇ, ಜಿಲ್ಲಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಿತ್ತು.

ಜುಲೈ 27ರಂದು ಹಿಂದೂ ಹಾಗೂ ಮುಸ್ಲಿಂ ಅರ್ಜಿದಾರರ ವಾದಗಳನ್ನು ಆಲಿಸಿದ್ದ ಅಲಹಾಬಾದ್ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ದಿವಾಕರ್, ತೀರ್ಪು ಕಾಯ್ದಿರಿಸಿದ್ದರು. ಗುರುವಾರದ ವರೆಗೆ ಸಮೀಕ್ಷೆಗೆ ತಡೆ ನೀಡಿ ಆದೇಶಿಸಿದ್ದರು.

ಹೈಕೋರ್ಟ್ ಆದೇಶ ಸ್ವಾಗತಿಸಿದ ಬಿಜೆಪಿ

ಜ್ಞಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸಲು ಅನುಮತಿ ನೀಡಿ ಅಲಹಾಬಾದ್ ಹೈಕೋರ್ಟ್ ಆದೇಶಿಸಿರುವುದನ್ನು ಬಿಜೆಪಿಯ ಉತ್ತರಪ್ರದೇಶ ಘಟಕ ಗುರುವಾರ ಸ್ವಾಗತಿಸಿದೆ.

'ಇದು ಕೋಟ್ಯಂತರ ಜನರ ನಂಬಿಕೆಗೆ ಸಂಬಂಧಿಸಿದ ವಿಷಯವಾಗಿದ್ದು, ಸಮೀಕ್ಷೆಯಿಂದ ಸತ್ಯಾಂಶ ಹೊರಬರಲಿದೆ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಭೂಪೇಂದ್ರ ಸಿಂಗ್ ಚೌಧರಿ ಅವರು ಟ್ವೀಟ್ ಮಾಡಿದ್ದಾರೆ.

'ವೈಜ್ಞಾನಿಕ ಸಮೀಕ್ಷೆಗೆ ಎಲ್ಲರೂ ಸಹಕಾರ ನೀಡಬೇಕು. ನಂತರ ನ್ಯಾಯಾಲಯ ನೀಡುವ ತೀರ್ಪನ್ನು ಎಲ್ಲರೂ ಒಪ್ಪಿಕೊಳ್ಳಬೇಕು' ಎಂದು ಹೇಳಿದ್ದಾರೆ.

'ಸುಪ್ರೀಂ' ಮೆಟ್ಟಿಲೇರಿದ ಮಸೀದಿ ಸಮಿತಿ

ಒಂದನೇ ಪುಟದಿಂದ...

ಅರ್ಜಿಯನ್ನು ವಿಚಾರಣಾ ಪಟ್ಟಿಗೆ ಸೇರಿಸಲು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಸಮ್ಮತಿಸಿದೆ.

'ವೈಜ್ಞಾನಿಕ ಸಮೀಕ್ಷೆಯು ಒಡ್ಡುವ ಅಪಾಯಗಳು ದೇಶದಾದ್ಯಂತ ಭಾರಿ ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವನ್ನು ರದ್ದುಗೊಳಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಮಸೀದಿಯ ಸಮೀಕ್ಷೆಗಾಗಿ ಕಳೆದ ವರ್ಷ ಆಯುಕ್ತರನ್ನು ನೇಮಕ ಮಾಡಲಾಗಿತ್ತು. ಈ ವಿಷಯ ಕುರಿತು ಮಾಧ್ಯಮಗಳಲ್ಲಿ ಆಗ ವ್ಯಾಪಕ ಸುದ್ದಿಗಳೂ ಬಿತ್ತರವಾಗಿದ್ದವಲ್ಲದೇ, ಕೋಮು ಸಂಘರ್ಷದ ಆತಂಕ ಮೂಡಿತ್ತು' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ವೈಜ್ಞಾನಿಕ ಸಮೀಕ್ಷೆ ನಡೆಸುವುದು ಪೂಜಾಸ್ಥಳಗಳ (ವಿಶೇಷ ಅವಕಾಶಗಳ) ಕಾಯ್ದೆ–1991ರಲ್ಲಿನ ಅವಕಾಶಗಳಿಗೆ ವಿರುದ್ಧವಾಗಲಿದೆ' ಎಂದೂ ಸಮಿತಿ ಪ್ರತಿಪಾದಿಸಿದೆ.

ಕೇವಿಯಟ್ ಸಲ್ಲಿಕೆ: 'ತಮ್ಮ ವಾದವನ್ನು ಆಲಿಸಿದ ನಂತರವೇ ಈ ವಿಷಯವಾಗಿ ಆದೇಶ ಹೊರಡಿಸಬೇಕು' ಎಂದು ಕೋರಿ, ಹಿಂದೂ ಕಕ್ಷಿದಾರರ ಪೈಕಿ ಒಬ್ಬರು ಸುಪ್ರೀಂಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಿದ್ದಾರೆ.

ಎಂಜಿನಿಯರ್ ಅಮಾನತಿಗೆ ಶಿಫಾರಸು

ಒಂದನೇ ಪುಟದಿಂದ...

ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಪೌರಾಯುಕ್ತ ಶ್ರೀನಿವಾಸ್ ಅವರಿಗೆ ಷೋಕಾಸ್ ನೋಟಿಸ್ ಜಾರಿಗೊಳಿಸಲಾಗಿದೆ.

ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಸಾವು ಸಂಭವಿಸಿದ್ದನ್ನು ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗೆ ಬುಧವಾರ ಸೂಚನೆ ನೀಡಿದ್ದರು.

ಅಸ್ವಸ್ಥರ ಸಂಖ್ಯೆ 149ಕ್ಕೆ ಏರಿಕೆ: ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡವರ ಸಂಖ್ಯೆ ಗುರುವಾರ 149ಕ್ಕೆ ಏರಿಕೆಯಾಗಿದೆ. ಗುರುವಾರ 51 ಜನರು ವಾಂತಿ–ಭೇದಿಯಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದ್ದು, 30 ಜನ ಗುಣಮುಖರಾಗಿ ಮನೆಗೆ ಮರಳಿದ್ದಾರೆ.

ಕವಾಡಿಗರಹಟ್ಟಿಯ 735 ಮನೆಗಳಲ್ಲಿ 220 ಮನೆಗಳಿಗೆ ಕಲುಷಿತ ನೀರು ಪೂರೈಕೆಯಾಗಿದೆ. ಈ ಕುರಿತು ಆರೋಗ್ಯ ಇಲಾಖೆ ತೀವ್ರ ನಿಗಾ ಇರಿಸಿದ್ದು, ಆ ಪ್ರದೇಶದಲ್ಲಿ 24 ಗಂಟೆ ತಾತ್ಕಾಲಿಕ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ.

ಎಫ್‌ಎಸ್‌ಎಲ್ ವರದಿ– ಪತ್ತೆಯಾಗದ ವಿಷ: ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟವರ ದೇಹ ಹಾಗೂ ನೀರಿನಲ್ಲಿ ಯಾವುದೇ ವಿಷ ಪತ್ತೆಯಾಗಿಲ್ಲ ಎಂದು ವಿಧಿವಿಜ್ಞಾನ ಪ್ರಯೋಗಾಲಯ ಗುರುವಾರ ವರದಿ ನೀಡಿದೆ. ಮಹಿಳೆಯ ಮೃತದೇಹ ಹಾಗೂ ನೀರಿನ ಮಾದರಿಗಳನ್ನು ದಾವಣಗೆರೆಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿತ್ತು.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಸಂಶೋಧನಾ ನಿರ್ದೇಶನಾಲಯ, ಕೃಷಿ ನಗರ, ಧಾರವಾಡ
ಸಂ. ಸಸಂನಿ/ಶಿಶಾ–2/410/2023–24 ದಿನಾಂಕ : 24.07.2023
ನೌಕರನ ಅನಧೀಕೃತ ಗೈರು ಹಾಜರಿ ಕುರಿತು
ಈ ಜ್ಞಾಪನಾ ಪತ್ರದ ಮೂಲಕ ತಮಗೆ ತಿಳಿಸುವುದೇನೆಂದರೆ ಶ್ರೀ ಯಲ್ಲಪ್ಪ ಹುಣಸೀಮರದ, ಮೇವು ಸಂಶೋಧನಾ ಮತ್ತು ಉತ್ಪಾದನಾ ವಿಭಾಗ, ಮು.ಕೃ.ಸಂ. ಕೇಂದ್ರ, ಕೃವಿವಿ, ಧಾರವಾಡ ಆದ ನೀವು ದಿನಾಂಕ : 08–05–2019 ರಿಂದ ಇಲ್ಲಿಯವರೆಗೆ ಕೆಲಸಕ್ಕೆ ಗೈರು ಹಾಜರಾಗಿರುವುದು ಕಂಡು ಬಂದಿರುತ್ತದೆ. ಈ ವಿಷಯವಾಗಿ ತಮಗೆ ಹಲವಾರು ಬಾರಿ ಮಾಹಿತಿ ನೀಡಿದರೂ ಕೆಲಸಕ್ಕೆ ಹಾಜರಾಗಿರುವದಿಲ್ಲ. ದಿನಾಂಕ : 28–07–2021 ರಂದು ನಿಮ್ಮ ಇತ್ತೀಚಿನ ಕೊನೆಯ ದಾಖಲೀಕೃತ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ ದೋಷಾರೋಪಣ ಪಟ್ಟಿಯೊಂದಿಗೆ ಬರೆದು ಕಳಿಸಲಾಗಿದ್ದು ಅದನ್ನು ಸ್ವೀಕರಿಸಲಾಗದೆ ಪರತ್ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರ ಪ್ರಕಾರ ಕ್ರಮ ಜರುಗಿಸಬೇಕಾಗಿರುತ್ತದೆ. ಸರ್ಕಾರದ ಕ್ಷೇಮಾಭಿವೃದ್ಧಿ ನೌಕರರ ನಿಯಮಾವಳಿಗಳ ಪ್ರಕಾರ ಈ ಕೆಳಗೆ ಸಹಿ ಮಾಡಿದ ಪ್ರಾಧಿಕಾರದ ಮುಂದೆ ಸದರಿ ಜ್ಞಾಪನಾ ಪ್ರಕಟವಾದ 10 ದಿನಗಳೊಳಗಾಗಿ ಹಾಜರಾಗಿ ಹೇಳಿಕೆ ಏನಾದರೂ ಇದ್ದಲ್ಲಿ ಸಲ್ಲಿಸುವುದು. ಹೇಳಿಕೆ ಸಲ್ಲಿಸಲು ತಪ್ಪಿದಲ್ಲಿ ನಿಯಮಾವಳಿ ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.
ಸಹಿ/– ಸಂಶೋಧನಾ ನಿರ್ದೇಶಕರು
ಹಾಗೂ ಅಧ್ಯಕ್ಷರು, ಶಿಸ್ತು ಪಾಧಿಕಾರ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/134/2023–24 ಕೃವಿವಿ, ಧಾರವಾಡ

ಸಂಕ್ಷಿಪ್ತ ಸುದ್ದಿ

ಸೆಂಥಿಲ್ ಬಾಲಾಜಿ ವಿರುದ್ಧದ ಪ್ರಕರಣ: ಮತ್ತೆ ಇ.ಡಿ ಶೋಧ

ಚೆನ್ನೈ (ಪಿಟಿಐ): 'ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಹಾಗೂ ಇತರರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ಮತ್ತೊಮ್ಮೆ ಶೋಧ ನಡೆಸಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

'ಕೆಲವು ಸಂಸ್ಥೆಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಹಾಗೂ ಕೊಯಮತ್ತೂರು ಮತ್ತು ಕರೂರ್‌ನಲ್ಲಿರುವ ಆಪಾದಿತ ಬೇನಾಮಿದಾರರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ತಮಿಳುನಾಡಿನ ಸಾರಿಗೆ ಇಲಾಖೆಯಲ್ಲಿ ಉದ್ಯೋಗ ಕೊಡಿಸಲು ಹಣ ಪಡೆದ ಆರೋಪದ ಮೇಲೆ ಸೆಂಥಿಲ್ ಅವರನ್ನು ಜೂನ್ 14ರಂದು ಇ.ಡಿ ಬಂಧಿಸಿತ್ತು. ಈ ಕ್ರಮವನ್ನು ಎತ್ತಿ ಹಿಡಿದ ಮದ್ರಾಸ್ ಹೈಕೋರ್ಟ್ ತೀರ್ಪು ಪ್ರಶ್ನಿಸಿ, ಸೆಂಥಿಲ್ ಜುಲೈ 14ರಂದು ಸುಪ್ರಿಂ ಕೋರ್ಟ್ ಮೊರೆ ಹೋಗಿದ್ದರು. ಈ ಕುರಿತು ಬುಧವಾರ ವಿಚಾರಣೆ ನಡೆಸಿ ಕೋರ್ಟ್ ತನ್ನ ತೀರ್ಪು ಕಾಯ್ದಿರಿಸಿರುವುದಾಗಿ ಪ್ರಕಟಿಸಿತ್ತು.

ತೀಸ್ತಾ ಅರ್ಜಿ ವಿಚಾರಣೆ: ಹಿಂದೆ ಸರಿದ ನ್ಯಾಯಮೂರ್ತಿ

ಅಹಮದಾಬಾದ್ (ಪಿಟಿಐ): 2002ರ ಗೋಧ್ರೋತ್ತರ ಗಲಭೆಗೆ ಸಂಬಂಧಿಸಿ ಸಾಕ್ಷ್ಯಗಳನ್ನು ತಿರುಚಿದ ಆರೋಪದಡಿ ತಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ಅನ್ನು ರದ್ದುಪಡಿಸಬೇಕು ಎಂದು ಕೋರಿ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯಿಂದ ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಸಮೀರ್ ದಾವೆ ಹಿಂದೆ ಸರಿದಿದ್ದಾರೆ.

ಅಹಮದಾಬಾದ್ ಕ್ರೈಂ ಬ್ರ್ಯಾಂಚ್ ಪೊಲೀಸರು ತೀಸ್ತಾ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಈ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಿದ ವೇಳೆ ದಾವೆ ಅವರು, 'ನಾನು ವಿಚಾರಣೆ ನಡೆಸುವುದಿಲ್ಲ. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಈ ಅರ್ಜಿ ವಿಚಾರಣೆಗೆ ಹೊಸ ನ್ಯಾಯಮೂರ್ತಿಯನ್ನು ನೇಮಕ ಮಾಡಲಿದ್ದಾರೆ' ಎಂದು ಹೇಳಿದರು.

ಸುಲಿಗೆ ಆರೋಪ: ವೈಟ್‌ಫೀಲ್ಡ್ ಠಾಣೆ ಇನ್‌ಸ್ಪೆಕ್ಟರ್, ಮೂವರು ಸಿಬ್ಬಂದಿ ಅಮಾನತು

'ಆರೋಪಿ ಬಂಧಿಸಲು ಹೋಗಿದ್ದ ಪೊಲೀಸರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರೆಕಾಲಿಕ ಕೆಲಸ ಕೊಡಿಸುವ ಸೋಗಿನಲ್ಲಿ ₹26 ಲಕ್ಷ ಪಡೆದು ವಂಚಿಸಿದ್ದ ಪ್ರಕರಣದ ಆರೋಪಿಗಳನ್ನು ಬಂಧಿಸಲು ವೈಟ್‌ಫೀಲ್ಡ್ ಸೈಬರ್ ಕ್ರೈಂ ಠಾಣೆ ಪೊಲೀಸರ ತಂಡ ಕೇರಳಕ್ಕೆ ಹೋಗಿತ್ತು. ಆರೋಪಿಗಳು ಸ್ಥಳೀಯ ಪೊಲೀಸರಿಗೆ ತಪ್ಪು ಮಾಹಿತಿ ನೀಡಿ ಗೊಂದಲ ಸೃಷ್ಟಿಸಿದ್ದಾರೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಎಸ್. ಗಿರೀಶ್ ತಿಳಿಸಿದರು.

ಆರೋಪಿಯನ್ನು ಪ್ರಕರಣದಿಂದ ಕೈಬಿಡಲು ಹಣಕ್ಕೆ ಬೇಡಿಕೆ ಇರಿಸಿರುವ ಪ್ರಕರಣದಲ್ಲಿ ವೈಟ್‌ಫೀಲ್ಡ್ ಸೈಬರ್ ಕ್ರೈಂ ಠಾಣೆಯ ಇನ್‌ಸ್ಪೆಕ್ಟರ್ ಶಿವಪ್ರಕಾಶ್ ಹಾಗೂ ಸಿಬ್ಬಂದಿಯನ್ನು ಕೊಚ್ಚಿ ಪೊಲೀಸರು ವಶಕ್ಕೆ ಪಡೆದಿರುವ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಡಿಸಿಪಿ, 'ಶಿವಪ್ರಕಾಶ್ ಹಾಗೂ ಸಿಬ್ಬಂದಿಯನ್ನು ಕೇರಳ ಪೊಲೀಸರು ಬಂಧಿಸಿಲ್ಲ. ಆರೋಪಕ್ಕೆ ಸಂಬಂಧಪಟ್ಟಂತೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಬಿಡುಗಡೆ ಮಾಡಿದ್ದಾರೆ' ಎಂದರು.

'ಅರೆಕಾಲಿಕ ಕೆಲಸದ ನೆಪದಲ್ಲಿ ₹26 ಲಕ್ಷ ಪಡೆದು ವಂಚಿಸಿದ್ದ ಬಗ್ಗೆ ಚಂದಕ್ ಶ್ರೀಕಾಂತ್ ಅವರು ಜೂನ್ 14 ರಂದು ದೂರು ನೀಡಿದ್ದರು. ಆರೋಪಿ ನಿತಾ ಸಂಪತ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿತ್ತು' ಎಂದರು.

ಖಾತೆ ವಿವರ ಆಧರಿಸಿ ತನಿಖೆ: 'ದೂರುದಾರ ಚಂದಕ್ ಶ್ರೀನಿವಾಸ್ ಅವರಿಂದ ಹಣ ವರ್ಗಾಯಿಸಿಕೊಂಡಿದ್ದ ಬ್ಯಾಂಕ್ ಖಾತೆಗಳ ವಿವರ ಸಂಗ್ರಹಿಸಲಾಗಿತ್ತು. ಮಡಿಕೇರಿಯ ಇಶಾಕ್ ಖಾತೆಗೆ ₹10,000 ಜಮೆ ಆಗಿದ್ದು ಗೊತ್ತಾಗಿತ್ತು. ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಮತ್ತೊಬ್ಬ ಆರೋಪಿ ರಾಜೇಶ್ ಹೆಸರು ತಿಳಿಸಿದ್ದ. ಆತನನ್ನೂ ವಿಚಾರಿಸಿದಾಗ, ಕೇರಳದ ಪರೇಸ್ ಹಾಗೂ ನಿಶಾಂತ್ ಕೃತ್ಯ ಎಸಗಿರುವುದಾಗಿ ಹೇಳಿದ್ದ' ಎಂದು ಗಿರೀಶ್ ಮಾಹಿತಿ ನೀಡಿದ್ದಾರೆ.

'ಪರೇಸ್, ನಿಶಾಂತ್‌ನನ್ನು ವಿಚಾರಣೆ ನಡೆಸಿದಾಗ, ಕೇರಳದ ಮಲಪ್ಪುರಂ ನಿವಾಸಿ ನೌಶಾದ್ ವಂಚನೆ ಪ್ರಕರಣದ ಪ್ರಮುಖ ಆರೋಪಿ ಎಂಬುದು ಗೊತ್ತಾಗಿತ್ತು. ಹೀಗಾಗಿ, ಇನ್‌ಸ್ಪೆಕ್ಟರ್ ಶಿವಪ್ರಕಾಶ್ ನೇತೃತ್ವದ ತಂಡ ಜುಲೈ 31ರಂದು ಕೇರಳಕ್ಕೆ ಹೋಗಿತ್ತು.'

'ಆಗಸ್ಟ್ 1ರಂದು ಕೇರಳದ ವೆಂಗರ್‌ದಲ್ಲಿ ನೌಶಾದ್‌ನನ್ನು ವಶಕ್ಕೆ ಪಡೆಯಲಾಗಿತ್ತು. ಇದರ ಜೊತೆ, ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪದಡಿ ಎರ್ನಾಕುಲಂನ ನಿಖಿಲ್ ಹಾಗೂ ಅಖಿಲ್‌ನನ್ನೂ ವಶಕ್ಕೆ ಪಡೆದುಕೊಳ್ಳಲಾಗಿತ್ತು. ಈ ಬಗ್ಗೆ ಸ್ಥಳೀಯ ಪಲ್ಲುರ್ತಿ ಠಾಣೆ ಅಧಿಕಾರಿಗಳಿಗೆ ಮಾಹಿತಿ ಸಹ ನೀಡಲಾಗಿತ್ತು' ಎಂದು ಹೇಳಿದರು.

'ಆಗಸ್ಟ್ 2ರಂದು ಇನ್‌ಸ್ಪೆಕ್ಟರ್ ಶಿವಪ್ರಕಾಶ್‌ಗೆ ಕರೆ ಮಾಡಿದ್ದ ಕೇರಳದ ಕಳಮಚ್ಚೇರಿ ಠಾಣೆಯ ಪೊಲೀಸರು, 'ಅಖಿಲ್ ಅವರನ್ನು ಪ್ರಕರಣದಿಂದ ಕೈಬಿಡಲು ₹3 ಲಕ್ಷಕ್ಕೆ ಬೇಡಿಕೆ ಇರಿಸಿರುವ ಬಗ್ಗೆ ದೂರು ಬಂದಿದೆ. ವಿಚಾರಣೆಗೆ ಬನ್ನಿ' ಎಂದಿದ್ದರು. ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ, ಠಾಣೆಗೆ ಹೋಗಿ ವಿಚಾರಣೆ ಎದುರಿಸಿದ್ದಾರೆ. ಬೆಂಗಳೂರಿನಿಂದ ಎಸಿಪಿ ನೇತೃತ್ವದ ತಂಡ ಈಗಾಗಲೇ ಕೊಚ್ಚಿಗೆ ಹೋಗಿದೆ' ಎಂದು ತಿಳಿಸಿದರು.

'ಸುಲಿಗೆ ಆರೋಪದಡಿ ಎಫ್‌ಐಆರ್ ದಾಖಲಾಗಿದೆ. 'ಇನ್‌ಸ್ಪೆಕ್ಟರ್ ಶಿವಪ್ರಕಾಶ್, ಹೆಡ್ ಕಾನ್‌ಸ್ಟೆಬಲ್‌ಗಳಾದ ವಿಜಯ್‌ಕುಮಾರ್, ಶಿವಣ್ಣ, ಕಾನ್‌ಸ್ಟೆಬಲ್ ಸಂದೇಶ ಅವರನ್ನು ಅಮಾನತು ಮಾಡಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ರಾಜ್ಯದ ನಾಲ್ವರು ಪೊಲೀಸರು ವಶಕ್ಕೆ

ಒಂದನೇ ಪುಟದಿಂದ...

ಈ ಕುರಿತು ದೂರು ದಾಖಲಾದ ಹಿನ್ನೆಲೆಯಲ್ಲಿ ಕೊಚ್ಚಿ ಪೊಲೀಸರು ಕರ್ನಾಟಕದ ನಾಲ್ವರನ್ನು ಬುಧವಾರ ಸಂಜೆ ವಶಕ್ಕೆ ಪಡೆದಿದ್ದಾರೆ.

'ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ. ನಮ್ಮ ಪೊಲೀಸರ ವಶದಲ್ಲಿರುವ ಕರ್ನಾಟಕ ಪೊಲೀಸರ ಕುರಿತ ಮಾಹಿತಿ ಕಲೆಹಾಕಲು ಮತ್ತು ಅವರು ಕೇರಳಕ್ಕೆ ಬಂದಿದ್ದ ಉದ್ದೇಶ ಪರಿಶೀಲಿಸುವ ಸಲುವಾಗಿ ಕರ್ನಾಟಕ ಪೊಲೀಸ್ ಇಲಾಖೆ ಜೊತೆ ಸಂಪರ್ಕದಲ್ಲಿದ್ದೇವೆ. ಅವರು ನೀಡುವ ಮಾಹಿತಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಪರಿಶೀಲನೆ ಬಳಿಕವೇ ವಶದಲ್ಲಿರುವ ಪೊಲೀಸರ ಗುರುತು ಬಹಿರಂಗಪಡಿಸಲಾಗುವುದು' ಎಂದು ಸಹಾಯಕ ಪೊಲೀಸ್ ಕಮೀಷನರ್ ಬೇಬಿ ಪಿ.ವಿ. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402. Telephone:08232-224036
GM/AM(C)/Sugar/21/2023-24 Date:03-08-2023
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಸಕ್ಕರೆ ಮತ್ತು ಕಾಕಂಬಿ ಮಾರಾಟ ಮಾಡಲು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕ್ರಮ ಸಂಖ್ಯೆ : 01. ಸಾಮಗ್ರಿ ವಿವರ : ಸಕ್ಕರೆ ಎಸ್–30 ಗ್ರೇಡ್. ಮಾರಾಟದ ಪ್ರಮಾಣ : 440.00 ಕ್ವಿಂಟಾಲ್. ಇ.ಎಂ.ಡಿ ಹಣ (ಪ್ರತಿ ಕ್ವಿಂಟಾಲಿಗೆ) : ರೂ.220/–. ಟೆಂಡರ್ ಫೀ. : ಇ– ಪೋರ್ಟ್‌ಲ್‌ನಿಯಾಮಾವಳಿ.
ಕ್ರಮ ಸಂಖ್ಯೆ : 02. ಸಾಮಗ್ರಿ ವಿವರ : "ಎ" ದರ್ಜೆ ಕಾಕಂಬಿ. ಮಾರಾಟದ ಪ್ರಮಾಣ : 3000.00 MT(ಅಂದಾಜು). ಇ.ಎಂ.ಡಿ ಹಣ (ಪ್ರತಿ ಕ್ವಿಂಟಾಲಿಗೆ) : ರೂ.250/–. ಟೆಂಡರ್ ಫೀ. : ಇ– ಪೋರ್ಟ್‌ಲ್‌ನಿಯಾಮಾವಳಿ.
ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯದ ಗೋದಾಮುಗಳಿಗೆ ಭೇಟಿ ನೀಡಿ, ಸಕ್ಕರೆಯ ಮತ್ತು ಕಾಕಂಬಿಯ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು (https://eproc.Karnataka.gov.in) ಅಥವಾ (https://Kppp.Karnataka.gov.in) ತುಂಬುವುದು. ಇ– ಪೋರ್ಟ್‌ಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿನಾಂಕ:04.08.2023 ಮತ್ತು ಕೊನೆಯ ದಿನಾಂಕ: 12.08.2023 ರ ಮಧ್ಯಾಹ್ನ 03.00 ಗಂಟೆ ಆಗಿರುತ್ತದೆ.(1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿನಾಂಕ:14.08.2023 ಸಮಯ ಬೆಳಿಗ್ಗೆ 10:30 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಾತ್ರ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9844766773/7353328103. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.
ದಿನಾಂಕ:03–08–2023 ಸಹಿ/–ಪ್ರಧಾನ ವ್ಯವಸ್ಥಾಪಕರು.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/130/2023–24

ದಕ್ಷಿಣ ವಲಯಕ್ಕೆ 2ನೇ ಬಾರಿ ಪ್ರಶಸ್ತಿ: ರೋಹನ್ ಶತಕ; ರಿಯಾನ್ ವೀರೋಚಿತ ಹೋರಾಟ

ಮಯಂಕ್ ಪಡೆಗೆ ದೇವಧರ್ ಟ್ರೋಫಿ

ಪುದುಚೇರಿ (ಪಿಟಿಐ): ಮಯಂಕ್ ಅಗರವಾಲ್ ನಾಯಕತ್ವದ ದಕ್ಷಿಣ ವಲಯ ತಂಡವು ದೇವಧರ್ ಟ್ರೋಫಿಗೆ ಮುತ್ತಿಕ್ಕಿತು.

ಈ ಬಾರಿಯ ದೇಶಿ ಕ್ರಿಕೆಟ್ ಋತುವಿನಲ್ಲಿ ದಕ್ಷಿಣ ವಲಯ ಬಳಗವು ಜಯಿಸುತ್ತಿರುವ ಎರಡನೇ ಟ್ರೋಫಿ ಇದಾಗಿದೆ. ಒಂದು ತಿಂಗಳ ಹಿಂದೆ ಹನುಮವಿಹಾರಿ ನಾಯಕತ್ವದ ದಕ್ಷಿಣ ವಲಯವು ದುಲೀಪ್ ಟ್ರೋಫಿ ಜಯಿಸಿತ್ತು. ಆಗ ಉಪನಾಯಕರಾಗಿದ್ದ ಬೆಂಗಳೂರಿನ ಮಯಂಕ್, ಈ ಟೂರ್ನಿಯಲ್ಲಿ ತಂಡವನ್ನು ಮುನ್ನಡೆಸಿದರು. ಗುರುವಾರ ಇಲ್ಲಿ ನಡೆದ ಫೈನಲ್‌ನಲ್ಲಿ ತಂಡವು 45 ರನ್‌ಗಳಿಂದ ಪೂರ್ವ ವಲಯವನ್ನು ಮಣಿಸಿತು. ಒಟ್ಟು ಒಂಬತ್ತನೇ ಸಲ ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ದಕ್ಷಿಣ ಬಳಗದ ಆರಂಭಿಕ ಬ್ಯಾಟರ್ ರೋಹನ್ ಕುನ್ನುಮ್ಮಾಳ್ (107; 75ಎ, 4X11, 6X4) ಮತ್ತು ಮಯಂಕ್ (63; 83ಎ, 4X4) ಮೊದಲ ವಿಕೆಟ್ ಜೊತೆಯಾಟದಲ್ಲಿ 181 ರನ್ ಸೇರಿಸಿದರು. ಇದರೊಂದಿಗೆ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 328 ರನ್ ಗಳಿಸಿತು.

ಪುದುಚೇರಿಯಲ್ಲಿ ಗುರುವಾರ ದೇವಧರ್ ಟ್ರೋಫಿ ಜಯಿಸಿದ ದಕ್ಷಿಣ ವಲಯ ತಂಡದ ಸಂಭ್ರಮ –ಟ್ವಿಟರ್ ಚಿತ್ರ

ಇದಕ್ಕುತ್ತರವಾಗಿ ಪೂರ್ವ ವಲಯವು 46.1 ಓವರ್‌ಗಳಲ್ಲಿ 283 ರನ್ ಗಳಿಸಿತು. ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಆದರೆ ರಿಯಾನ್ ಪರಾಗ್ (95; 65ಎ) ಮತ್ತು ಕುಮಾರ್ ಕುಶಾಗ್ರ (68; 58ಎ) ಗೆಲುವಿನ ಭರವಸೆ ಮೂಡಿಸಿದ್ದರು. ಆರನೇ ವಿಕೆಟ್ ಜೊತೆಯಾಟದಲ್ಲಿ 148 ರನ್ ಗಳಿಸಿದರು. ಇವರಿಬ್ಬರೂ ಕ್ರೀಸ್‌ನಲ್ಲಿರುವವರೆಗೂ ಪೂರ್ವ ತಂಡವು ಜಯದ ಕನಸು ಕಂಡಿತ್ತು. ರಿಯಾನ್ ಐದು ಸಿಕ್ಸರ್ ಸಿಡಿಸಿದರು.

ಆದರೆ, 38ನೇ ಓವರ್‌ನಲ್ಲಿ ವಾಷಿಂಗ್ಟನ್ ಸುಂದರ್ ಅವರು ರಿಯಾನ್ ಪರಾಗ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಜೊತೆಯಾಟ ಮುರಿಯಿತು. ಆದರೆ ಕುಶಾಗ್ರ ಸ್ವಲ್ಪ ಹೊತ್ತು ಹೋರಾಟ ಮುಂದುವರಿಸಿದರು. ಅವರು ಅರ್ಧಶತಕ ಗಳಿಸಿದರು. ಮೂರು ಸಿಕ್ಸರ್ ಮತ್ತು ಆರು ಬೌಂಡರಿಗಳನ್ನು ಹೊಡೆದರು. ಅವರಿಗೂ ವಾಷಿಂಗ್ಟನ್ ಪೆವಿಲಿಯನ್ ದಾರಿ ತೋರಿಸಿದರು.

ಕರ್ನಾಟಕದ 'ತ್ರಿವಳಿ' ಮಧ್ಯಮವೇಗಿಗಳಾದ ವಿದ್ವತ್ ಕಾವೇರಪ್ಪ, ವಾಸುಕಿ ಕೌಶಿಕ್ ಮತ್ತು ವೈಶಾಖ ವಿಜಯಕುಮಾರ್ ತಲಾ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ಅಗ್ರ ಬ್ಯಾಟರ್‌ಗಳು ವಿಫಲರಾದರು.

ಈ ಟೂರ್ನಿಯಲ್ಲಿ ಮಯಂಕ್ ಬಳಗವು ರೌಂಡ್ ರಾಬಿನ್ ಲೀಗ್‌ನಲ್ಲಿ ಎಲ್ಲ ಪಂದ್ಯಗಳನ್ನೂ ಗೆದ್ದು ಫೈನಲ್ ಪ್ರವೇಶಿಸಿತ್ತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ವಲಯ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 328 (ರೋಹನ್ ಕುನ್ನುಮಾಳ್ 107, ಮಯಂಕ್ ಅಗರವಾಲ್ 63, ಎನ್. ಜಗದೀಶನ್ 54, ರೋಹಿತ್ ರಾಯುಡು 26, ಸಾಯಿಕಿಶೋರ್ ಔಟಾಗದೆ 24, ಶಹಬಾಜ್ ಅಹಮದ್ 55ಕ್ಕೆ2, ರಿಯಾನ್ ಪರಾಗ್ 68ಕ್ಕೆ2, ಉತ್ಕರ್ಷ್ ಸಿಂಗ್ 50ಕ್ಕೆ2) ಪೂರ್ವ ವಲಯ: 46.1 ಓವರ್‌ಗಳಲ್ಲಿ 283 (ಸುದೀಪ್ ಕುಮಾರ್ ಘರಮಿ 41, ಸೌರಭ್ ತಿವಾರಿ 28, ರಿಯಾನ್ ಪರಾಗ್ 95, ಕುಮಾರ ಕುಶಾಗ್ರ 68, ವಿದ್ವತ್ ಕಾವೇರಪ್ಪ 61ಕ್ಕೆ2, ವಿ. ಕೌಶಿಕ್ 49ಕ್ಕೆ2, ವೈಶಾಖ ವಿಜಯಕುಮಾರ್ 59ಕ್ಕೆ2, ವಾಷಿಂಗ್ಟನ್ ಸುಂದರ್ 60ಕ್ಕೆ3, ಆರ್. ಸಾಯಿಕಿಶೋರ್ 45ಕ್ಕೆ1) **ಫಲಿತಾಂಶ:** ದಕ್ಷಿಣ ವಲಯ ತಂಡಕ್ಕೆ 45 ರನ್ ಜಯ.

ಮುಖ್ಯಾಂಶಗಳು

- ಒಂಬತ್ತನೇ ಬಾರಿ ಪ್ರಶಸ್ತಿ ಜಯಿಸಿದ ದಕ್ಷಿಣ ವಲಯ
- ಮೊದಲ ವಿಕೆಟ್ ಜೊತೆಯಾಟದಲ್ಲಿ 181 ರನ್ ಸೇರಿಸಿದ ಮಯಂಕ್–ರೋಹನ್
- ಪ್ರಸಕ್ತ ದೇಶಿ ಋತುವಿನ ಎರಡನೇ ಪ್ರಶಸ್ತಿ ಗೆದ್ದ ದಕ್ಷಿಣ ವಲಯ

ಭಾರತಕ್ಕೆ ಸುಲಭ ತುತ್ತಾದ ಚೀನಾ

ಏಷ್ಯನ್ ಚಾಂಪಿಯನ್ಸ್ ಹಾಕಿ: ಮಲೇಷ್ಯಾಕ್ಕೆ ಮಣಿದ ಪಾಕ್

ಚೆನ್ನೈ (ಪಿಟಿಐ): ಗೋಲುಗಳ ಮಳೆಗರೆದ ಭಾರತ ತಂಡ, ಗುರುವಾರ ಆರಂಭವಾದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಚೀನಾ ತಂಡವನ್ನು 7–2 ಗೋಲುಗಳಿಂದ ಸುಲಭವಾಗಿ ಸೋಲಿಸಿತು.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಭಾರತ ತಂಡದ ಪರ ನಾಯಕ ಹರ್ಮನ್‌ಪ್ರೀತ್ ಸಿಂಗ್ (5, 8ನೇ ನಿ.), ವರುಣ್ ಕುಮಾರ್ (19, 30ನೇ), ಸುಖಜೀತ್ ಸಿಂಗ್ (15ನೇ), ಅಕ್ಷದೀಪ್ ಸಿಂಗ್ (16ನೇ) ಮತ್ತು ಮನ್‌ದೀಪ್ ಸಿಂಗ್ (40ನೇ) ಗೋಲುಗಳನ್ನು ಗಳಿಸಿದರು. ಚೀನಾ ಪರ ವೆನ್ ಹುಯಿ (18 ನಿ) ಮತ್ತು ಜೀಷೆಂಗ್ ಗಾವೊ (25ನೇ) ಸೋಲಿನ ಅಂತರ ಕಡಿಮೆ ಮಾಡಿದರು.

ಪಂದ್ಯ ಆರಂಭವಾದ ಐದೇ ನಿಮಿಷಕ್ಕೆ ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್‌ಪ್ರೀತ್ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಮೊದಲ ಕ್ವಾರ್ಟರ್‌ನಲ್ಲಿ 3–0 ಮುನ್ನಡೆಯೊಂದಿಗೆ ಉತ್ತಮ ಪ್ರದರ್ಶನ ನೀಡಿದ ಆತಿಥೇಯ ತಂಡದ ಆಟಗಾರರು ಪಂದ್ಯದುದ್ದಕ್ಕೂ ಹಿಡಿತ ಸಾಧಿಸಿದರು. ಎರಡನೇ ಕ್ವಾರ್ಟರ್‌ನಲ್ಲಿ ಚೀನಾದ ಆಟಗಾರರು ತುಸು ಪ್ರತಿರೋಧ ತೋರಿದರೂ ಭಾರತದ ರಕ್ಷಣಾ ವ್ಯೂಹವನ್ನು ಭೇದಿಸಲು ಪರದಾಡಿದರು.

ಭಾರತವು ಶುಕ್ರವಾರ ಜಪಾನ್ ತಂಡವನ್ನು ಎದುರಿಸಲಿದೆ.

ಮಲೇಷ್ಯಾಕ್ಕೆ ಮಣಿದ ಪಾಕ್: ಫಿರ್ಹಾನ್ ಅಶಾರಿ ಗಳಿಸಿದ ಎರಡು ಗೋಲುಗಲ ನೆರವಿನಿಂದ ಮಲೇಷ್ಯಾ ತಂಡ 3–1 ಗೋಲುಗಳಿಂದ ಪಾಕಿಸ್ತಾನ ತಂಡದ ಮೇಲೆ ಜಯಗಳಿಸಿತು.

ಅಶಾರಿ 28 ಮತ್ತು 29ನೇ ನಿಮಿಷ ಎರಡು ಗೋಲುಗಳನ್ನು ಗಳಿಸಿದರೆ, ಶೆಲ್ಲೊ ಸಿಲ್ವೇರಿಯಸ್ 44ನೇ ನಿಮಿಷ ಅಂತರವನ್ನು 3–0ಗೆ ಹೆಚ್ಚಿಸಿದರು. ಪಾಕಿಸ್ತಾನದ ಪರ ಏಕೈಕ ಗೋಲನ್ನು ಅಬ್ದುಲ್ ರೆಹಮಾನ್ 55ನೇ ನಿಮಿಷ ಗಳಿಸಿದರು.

ಮೊದಲ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳ ನಡುವೆ ಹೋರಾಟ ಕಂಡುಬಂದಿತು. ಎರಡನೇ ಕ್ವಾರ್ಟರ್‌ನಲ್ಲೂ ಇದೇ ಸ್ಥಿತಿ ಮುಂದುವರಿಯಿತು. ಆದರೆ ವಿರಾಮಕ್ಕೆ ಸ್ವಲ್ಪ ಮೊದಲು ಎರಡು ನಿಮಿಷಗಳ ಅಂತರದಲ್ಲಿ ಮಲೇಷ್ಯಾ ಎರಡು ಗೋಲುಗಳನ್ನು ಗಳಿಸಿ ಮೇಲುಗೈ ಸಾಧಿಸಿತು.

ಭಾರತ (ನೀಲಿ) ಮತ್ತು ಚೀನಾ (ಕೆಂಪು) ಆಟಗಾರರ ನಡುವೆ ಪೈಪೋಟಿ–ಪಿಟಿಐ ಚಿತ್ರ

ಮೂರನೇ ಕ್ವಾರ್ಟರ್ ಮುಗಿಯಲು ಕೆಲವೇ ಕ್ಷಣಗಳಿರುವಾಗ ಮಲೇಷ್ಯಾದ ಸಿಲ್ವೇರಿಯಸ್, ಪಾಕ್ ಗೋಲ್‌ಕೀಪರ್ ಅಕ್ಮಲ್ ಹುಸೇನ್ ಅವರನ್ನು ವಂಚಿಸಿ ಗೋಲು ಗಳಿಸಿದರು. ಆದರೆ 55ನೇ ನಿಮಿಷ ಪಾಕಿಸ್ತಾನ ಕೊನೆಗೂ ರೆಹಮಾನ್ ಮೂಲಕ ಮೊದಲ ಗೋಲು ಗಳಿಸುವಲ್ಲಿ ಯಶಸ್ವಿ ಆಯಿತು.

ಕೊರಿಯಾ ಶುಭಾರಂಭ: ಕಳೆದ ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ ತಂಡ 2–1 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಶುಭಾರಂಭ ಮಾಡಿತು. ಆರನೇ ನಿಮಿಷ ಜಪಾನ್ ಆಟಗಾರ್ತಿ ರಿಯೊಮಾ ಊಕಾ ಟೂರ್ನಿಯ ಮೊದಲ ಗೋಲು ಗಳಿಸಿದರು. 26ನೇ ನಿಮಿಷ ಚಿಯೊಲಿಯೊನ್ ಪಾರ್ಕ್ ಸ್ಕೋರ್ ಸಮ ಮಾಡಿದರು. ಮೂರನೇ ಕ್ವಾರ್ಟರ್‌ನಲ್ಲಿ ಜುಂಗ್‌ಹೂ ಕಿಮ್ ಕೊರಿಯಾ ಪರ ನಿರ್ಣಾಯಕ ಗೋಲು ಗಳಿಸಿದರು.

ಮೊದಲ ಟಿ20 ಪಂದ್ಯ: ಭಾರತಕ್ಕೆ 4 ರನ್‌ಗಳ ಸೋಲು

ವಿಂಡೀಸ್‌ಗೆ ರೋಚಕ ಗೆಲುವು

ತರೂಬ, ಟ್ರಿನಿಡಾಡ್ (ಪಿಟಿಐ): ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ಗುರುವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಭಾರತದ ವಿರುದ್ಧ 4 ರನ್‌ಗಳ ರೋಚಕ ಜಯ ಸಾಧಿಸಿದೆ.

ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 149 ರನ್ ಗಳಿಸಿತ್ತು. ಈ ಮೊತ್ತವನ್ನು ಬೆನ್ನು ಹತ್ತಿದ ಭಾರತ ತಂಡ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 145 ರನ್ ಗಳಿಸಲಷ್ಟೇ ಶಕ್ತವಾಯಿತು. ಈ ಮೂಲಕ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಆತಿಥೇಯ ತಂಡ 1–0 ಮುನ್ನಡೆ ಸಾಧಿಸಿತು.

ಭಾರತದ ಆರಂಭಿಕ ಆಟಗಾರರಾದ ಇಶಾನ್ ಕಿಶಾನ್ (6) ಮತ್ತು ಶುಭಮನ್ ಗಿಲ್ (3) ಉತ್ತಮ ಅಡಿಪಾಯ ಹಾಕುವಲ್ಲಿ ಎಡವಿದರು. ಆದರೆ, ಚೊಚ್ಚಲ ಪಂದ್ಯದಲ್ಲಿ ತಿಲಕ್ ವರ್ಮಾ (39; 22ಎ, 4x2, 6x3,) ಮಿಂಚಿದರು. ಸೂರ್ಯಕುಮಾರ್ ಯಾದವ್ (21) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (19) ಅವರು ಮಧ್ಯಮ ಕ್ರಮಾಂಕದಲ್ಲಿ ತುಸು ಬಲ ತುಂಬಿದರೂ ಗೆಲುವಿನ ಗುರಿ ದೂರವಿತ್ತು. ವಿಂಡೀಸ್‌ನ ಒಬೆದ್ ಮೆಕಾಯ್, ಜೇಸನ್ ಹೋಲ್ಡರ್, ರೊಮಾರಿಯೊ ಶೇಫರ್ಡ್ ತಲಾ ಎರಡು ವಿಕೆಟ್ ಪಡೆದು ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಇದಕ್ಕೂ ಮೊದಲು ವಿಂಡೀಸ್ ಪಡೆಗೆ ಯುಜುವೇಂದ್ರ ಚಾಹಲ್ ಆರಂಭದಲ್ಲಿಯೇ ಪೆಟ್ಟು ನೀಡಿದರು. ಐದನೇ ಓವರ್‌ನಲ್ಲಿ ವಿಂಡೀಸ್ ಆರಂಭಿಕ ಬ್ಯಾಟರ್‌ಗಳಾದ ಕೈಲ್ ಮೇಯರ್ಸ್ ಮತ್ತು ಬ್ರೆಂಡನ್ ಕಿಂಗ್ ಅವರಿಬ್ಬರ ವಿಕೆಟ್‌ಗಳನ್ನೂ ಗಳಿಸಿದರು. ಇದರಿಂದಾಗಿ ನಂತರ ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ರನ್ ಗಳಿಕೆಗೆ ತರಾತುರಿ ಮಾಡಲಿಲ್ಲ.

ಐಪಿಎಲ್ ಹೀರೊ ನಿಕೊಲಸ್ ಪೂರನ್ (41; 34ಎ) ಮತ್ತು ನಾಯಕ ರೋವ್ಮನ್ ಪೊವೆಲ್ (48; 32ಎ) ತಂಡಕ್ಕೆ ಬಲ ತುಂಬಿ ಸವಾಲಿನ ಮೊತ್ತವನ್ನು ಕಲೆ ಹಾಕಿದರು. ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಪೂರನ್ ಔಟಾದರು. ಹೆಟ್ಮೆಯರ್ ವೈಫಲ್ಯ ಅನುಭವಿಸಿದರು. ಪೊವೆಲ್ ಅವರನ್ನು ಎಡಗೈ ವೇಗಿ ಅರ್ಷದೀಪ್ ಸಿಂಗ್ ಔಟ್ ಮಾಡಿದರು.

ವಿಕೆಟ್ ಪಡೆದ ಸಂಭ್ರಮದಲ್ಲಿ ವಿಂಡೀಸ್ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 149 (ಬ್ರೆಂಡನ್ ಕಿಂಗ್ 28, ನಿಕೊಲಸ್ ಪೂರನ್ 41, ರೋವ್ಮನ್ ಪೊವೆಲ್ 48, ಅರ್ಷದೀಪ್ ಸಿಂಗ್ 31ಕ್ಕೆ2, ಯಜುವೇಂದ್ರ ಚಾಹಲ್ 24ಕ್ಕೆ2) ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 145 (ಸೂರ್ಯಕುಮಾರ್ 21, ತಿಲಕ್ ವರ್ಮಾ 39, ಹಾರ್ದಿಕ್ ಪಾಂಡ್ಯ 19; ಒಬೆದ್ ಮೆಕಾಯ್ (28ಕ್ಕೆ 2), ಜೇಸನ್ ಹೋಲ್ಡರ್ (19ಕ್ಕೆ 2), ರೊಮಾರಿಯೊ ಶೇಫರ್ಡ್ (33ಕ್ಕೆ 2).

ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 4 ರನ್‌ಗಳ ಜಯ

ಕ್ರಿಕೆಟ್‌ಗೆ ಮನೋಜ್ ತಿವಾರಿ ವಿದಾಯ

ಕೋಲ್ಕತ್ತ (ಪಿಟಿಐ): ಭಾರತದ ಕ್ರಿಕೆಟಿಗ ಮನೋಜ್ ತಿವಾರಿ ಅವರು ಎಲ್ಲಾ ಮಾದರಿಯ ಕ್ರಿಕೆಟ್‌ಗೆ ಗುರುವಾರ ವಿದಾಯ ಹೇಳಿದ್ದಾರೆ.

2008– 2015ರ ನಡುವೆ ಭಾರತ ತಂಡದಲ್ಲಿ 12 ಏಕದಿನ ಮತ್ತು ಮೂರು ಟಿ20 ಪಂದ್ಯಗಳನ್ನು ಆಡಿರುವ ಅವರು, 2021ರಲ್ಲಿ ರಾಜಕಾರಣಕ್ಕೆ ಕಾಲಿಟ್ಟರು. ಪ್ರಸ್ತುತ ಪಶ್ಚಿಮ ಬಂಗಾಳದಲ್ಲಿ ಕ್ರೀಡಾ ಮತ್ತು ಯುವ ವ್ಯವಹಾರಗಳ ಸಚಿವರಾಗಿದ್ದಾರೆ.

12 ಏಕದಿನ ಪಂದ್ಯಗಳಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಶತಕ ಸೇರಿದಂತೆ ಒಟ್ಟು 287 ರನ್ ಗಳಿಸಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 29 ಶತಕದೊಂದಿಗೆ 48.56 ಸರಾಸರಿಯಲ್ಲಿ 9,908 ಕಲೆ ಹಾಕಿದ್ದಾರೆ.

2012ರಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಭಾಗವಾಗಿ ಮನೋಜ್ ಪ್ರಶಸ್ತಿಯ ಸಂಭ್ರಮವನ್ನು ಅನುಭವಿಸಿದ್ದ ಅವರು, ನಂತರ ಡೆಲ್ಲಿ ಡೇರ್ ಡೆವಿಲ್ಸ್, ಕಿಂಗ್ಸ್ ಇಲೆವೆನ್ ಪಂಜಾಬ್ ಮತ್ತು ರೈಸಿಂಗ್ ಪುಣೆ ಸೂಪರ್‌ಜೈಂಟ್ ತಂಡಗಳನ್ನು ಪ್ರತಿನಿಧಿಸಿದ್ದರು. ಒಟ್ಟು 183 ಟಿ20 ಪಂದ್ಯಗಳಲ್ಲಿ 3,436 ರನ್ ಗಳಿಸಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ 'ಕ್ರಿಕೆಟ್‌ಗೆ ಗುಡ್‌ಬೈ' ಎಂದು ಪೋಸ್ಟ್ ಹಾಕುವ ಮೂಲಕ 19 ವರ್ಷಗಳ ಕ್ರಿಕೆಟ್ ವೃತ್ತಿಜೀವನದಿಂದ ನಿವೃತ್ತಿ ಪಡೆದಿದ್ದಾರೆ.

ಎಂಟರ ಘಟ್ಟಕ್ಕೆ ಸಿಂಧು, ಶ್ರೀಕಾಂತ್

ಸಿಡ್ನಿ (ಪಿಟಿಐ): ಭಾರತದ ಪಿ.ವಿ.ಸಿಂಧು, ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಸೂಪರ್ 500 ಟೂರ್ನಿಯಲ್ಲಿ ಗುರುವಾರ ಎಂಟರ ಘಟ್ಟ ಪ್ರವೇಶಿಸಿದರು.

ಐದನೇ ಶ್ರೇಯಾಂಕದ ಸಿಂಧು ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ 21–14, 21–10 ರಲ್ಲಿ ಸ್ವದೇಶದ ಆಕರ್ಷಿ ಕಶ್ಯಪ್ ಅವರನ್ನು ಹಿಮ್ಮೆಟ್ಟಿಸಿದರು.

ಶ್ರೀಕಾಂತ್, ಪುರುಷರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಚೀನಾ ತೈಪೆಯ ಲಿ ಯಾಂಗ್ ಸು ಅವರನ್ನು 21–10, 21–17 ರಿಂದ ಮಣಿಸಿದರು.

ಆದರೆ, ಪ್ರಣಯ್ ಅವರು ಚೀನಾ ತೈಪೆಯ ಯು ಜೆನ್ ಚಿ ಅವರನ್ನು 19–21, 21–19, 21–13 ರಿಂದ ಸೋಲಿಸಲು 74 ನಿಮಿಷ ಹೋರಾಡಬೇಕಾಯಿತು.

ಭಾರತದ ಆಟಗಾರ ಪ್ರಿಯಾಂಶು ರಾಜಾವತ್ 21–8, 13–21, 21–19 ರಿಂದ ಚೀನಾ ತೈಪೆಯ ತ್ಸು ವಿ ವಾಂಗ್ ಮೇಲೆ ಜಯ ಪಡೆದರು.

ಬ್ಯಾಸ್ಕೆಟ್‌ಬಾಲ್: ರಾಜ್ಯದ ತಂಡಗಳಿಗೆ ಕೈತಪ್ಪಿದ ಅವಕಾಶ

• ರೋಷನ್ ತ್ಯಾಗರಾಜನ್

ಬೆಂಗಳೂರು: ಪುದುಚೇರಿಯಲ್ಲಿ ಗುರುವಾರ ಆರಂಭಗೊಂಡ 48ನೇ ಸಬ್ ಜೂನಿಯರ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಕರ್ನಾಟಕದ 13 ವರ್ಷದೊಳಗಿನವರ ಬಾಲಕ– ಬಾಲಕಿಯರ ತಂಡಗಳು ಕಠಿಣ ಅಭ್ಯಾಸದೊಂದಿಗೆ ಸಿದ್ಧತೆ ನಡೆಸಿದ್ದವು. ಆದರೆ, ಕೊನೆಯ ಕ್ಷಣದಲ್ಲಿ ಟೂರ್ನಿಯಲ್ಲಿ ಪಾಲ್ಗೊಳ್ಳುವ ಅವಕಾಶ ಕೈತಪ್ಪಿದ್ದು, ಆಟಗಾರರು ನಿರಾಸೆಗೊಂಡಿದ್ದಾರೆ.

ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಕರ್ನಾಟಕದ ತಂಡಗಳು ಭಾಗವಹಿಸದಿರುವುದು ಇದೇ ಮೊದಲು. ರಾಜ್ಯದ ಬಾಲಕ ಮತ್ತು ಬಾಲಕಿಯರ ತಂಡಗಳು ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಬುಧವಾರ ರಾತ್ರಿ ತಂಡದ ಆಟಗಾರರಿಗೆ ಮತ್ತು ಪೋಷಕರಿಗೆ ಮಾಹಿತಿ ನೀಡಲಾಗಿದೆ.

ಆಶ್ಚರ್ಯವೆಂದರೆ ಕಳೆದ ವರ್ಷದ ಟೂರ್ನಿಯಲ್ಲಿ ಬಾಲಕಿಯರ ತಂಡವು ಚಾಂಪಿಯನ್ ಆಗಿತ್ತು. ಅವರ ಸಾಧನೆಗಾಗಿ ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆ (ಕೆಎಸ್‌ಬಿಬಿಎ) ಆಟಗಾರರನ್ನು ಸನ್ಮಾನಿಸಿತ್ತು. ಈ ಬಾರಿಯ ಟೂರ್ನಿಯ ಪೂರ್ವಸಿದ್ಧತೆಯ ನಿಟ್ಟಿನಲ್ಲಿ ತಂಡದ ಆಟಗಾರರು ಬೆಂಗಳೂರಿನಲ್ಲಿ 15 ದಿನ ಕಠಿಣ ಅಭ್ಯಾಸ ನಡೆಸಿದ್ದರು.

'ಮಂಗಳವಾರ ಅಭ್ಯಾಸ ಶಿಬಿರ ಮುಕ್ತಾಯವಾಯಿತು. ಬುಧವಾರ ಸಂಜೆ ಜೆರ್ಸಿಯನ್ನು ಸಂಗ್ರಹಿಸಲು ನಮಗೆ ತಿಳಿಸಿದ್ದರು. ಅದರಂತೆ, ಜೆರ್ಸಿ ಪಡೆಯಲು ಹೋದ ಸಂದರ್ಭದಲ್ಲಿ 'ನಾವು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಪ್ರಯಾಣಿಸುತ್ತಿಲ್ಲ' ಎಂದು ಉಪಾಧ್ಯಕ್ಷರೊಬ್ಬರು ತಿಳಿಸಿದರು' ಎಂದು ಆಟಗಾರರೊಬ್ಬರ ಪೋಷಕರು ತಿಳಿಸಿದರು.

ರಾಜ್ಯ ಚಾಂಪಿಯನ್‌ಷಿಪ್‌ನ ಆಧಾರದ ಮೇಲೆ ಕಳೆದ ತಿಂಗಳು ಕಂಠೀರವ ಕ್ರೀಡಾಂಗಣದಲ್ಲಿ ಕೆಎಸ್‌ಬಿಬಿಎ ಆಶ್ರಯದಲ್ಲಿ ತಂಡಗಳನ್ನು ಆಯ್ಕೆ ಮಾಡಲಾಗಿತ್ತು.

'ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆಯಿಂದ ಕೊನೆ ಕ್ಷಣದ ಬದಲಾವಣೆಯನ್ನು ನಿರೀಕ್ಷೆ ಮಾಡಿದ್ದೆವು. ಆದರೆ, ಯಾವುದೇ ಬದಲಾವಣೆ ಆಗಲಿಲ್ಲ' ಎಂದು ಭಾರತ ಬ್ಯಾಸ್ಕೆಟ್ ಬಾಲ್ ಫೆಡರೇಷನ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಕೆಎಸ್‌ಬಿಬಿಎ ಸದಸ್ಯರು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಮೋಹನ್ ಬಾಗನ್ ಶುಭಾರಂಭ

ಕೋಲ್ಕತ್ತ (ಪಿಟಿಐ): ಐಎಸ್‌ಎಲ್ ಚಾಂಪಿಯನ್ ಮೋಹನ್‌ಬಾಗನ್ ಸೂಪರ್ ಜೈಂಟ್ಸ್ ತಂಡ, ಗುರುವಾರ ನಡೆದ 132ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಬಾಂಗ್ಲಾದೇಶ ಆರ್ಮಿ ತಂಡವನ್ನು 5–0 ಗೋಲುಗಳಿಂದ ಸೋಲಿಸಿ ಅಭಿಯಾನವನ್ನು ಅಮೋಘ ರೀತಿಯಲ್ಲಿ ಆರಂಭಿಸಿತು.

ಭಾರತ ತಂಡದ ಆಟಗಾರರಾದ ಲಿಸ್ಟನ್ ಕೊಲಾಕೊ (14ನೇ ನಿಮಿಷ), ಮನ್ವೀರ್ ಸಿಂಗ್ (29ನೇ) ಮೊದಲ ಎರಡು ಗೋಲುಗಳನ್ನು ಗಳಿಸಿದರು. ನಂತರ, ಸುಹೇಲ್ ಅಹ್ಮದ್ ಭಟ್ (39ನೇ), ಲಾಲ್‌ರಿನ್ಲಿಯಾನ ನಮ್ಟೆ (59ನೇ) ಮತ್ತು ಕಿಯಾಣ್ ನಾಸಿರಿ (89) ಗೋಲು ಗಳಿಸಿ ಅಂತರ ಹೆಚ್ಚಿಸಿದರು.

21 ವರ್ಷದ ಸುಮಿತ್ ನೇತೃತ್ವದ ಈ ತಂಡ ಪೂರ್ಣ ಪ್ರಮಾಣದಲ್ಲಿ ಆಡಲಿಲ್ಲ. ವಿದೇಶಿ ಆಟಗಾರರಿಗೆ ವಿಶ್ರಾಂತಿ ನೀಡಲಾಯಿತು.

ವಿಶ್ವ ಕುಬ್ಜರ ಕ್ರೀಡಾಕೂಟ; ದೇವಪ್ಪ ಮೋರೆ, ಮಂಜುಳಾಗೆ ಚಿನ್ನ; ಶಾಂತಕುಮಾರ್‌ಗೆ ಕಂಚು

ಹುಬ್ಬಳ್ಳಿ/ಬೆಳಗಾವಿ: ಜರ್ಮನಿಯಲ್ಲಿ ನಡೆದಿರುವ ಕುಬ್ಜರ ಎಂಟನೇ ವಿಶ್ವ ಕ್ರೀಡಾಕೂಟದಲ್ಲಿ ಧಾರವಾಡ ಜಿಲ್ಲೆಯ ದೇವಪ್ಪ ಮೋರೆ ಎರಡು ಚಿನ್ನದ ಪದಕ ಮತ್ತು ಬೆಳಗಾವಿ ಜಿಲ್ಲೆಯ ಮಂಜುಳಾ ಗೊರಗುದ್ದಿ ತಲಾ ಒಂದು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗಳಿಸಿದ್ದಾರೆ.

ದೇವಪ್ಪ 60 ಮೀ. ಓಟವನ್ನು 10.8 ಸೆಕೆಂಡ್ ಮತ್ತು 100 ಮೀ. ಓಟವನ್ನು 18.80 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದಾರೆ.

ಮಂಜುಳಾ ಮಹಿಳೆಯರ ಮುಕ್ತ ವಿಭಾಗದ ಗುಂಡು ಎಸೆತ ಸ್ಪರ್ಧೆಯಲ್ಲಿ ಚಿನ್ನ, ಡಿಸ್ಕಸ್‌ನಲ್ಲಿ ಬೆಳ್ಳಿ ಮತ್ತು ಜಾವೆಲಿನ್ ಎಸೆತದಲ್ಲಿ ಕಂಚಿನ ಪದಕ ಗಳಿಸಿದರು.

ದೇವಪ್ಪ ಮೋರೆ

ಮಂಜುಳಾ

ಶಾಂತಕುಮಾರ್

ಅರಕಲಗೂಡು (ಹಾಸನ): ತಾಲ್ಲೂಕಿನ ಕುಬ್ಜ ಕ್ರೀಡಾಪಟು ಕೆ.ಆರ್. ಶಾಂತಕುಮಾರ್ ಅವರು ಬೊಸಿಯಾ ಕ್ರೀಡೆಯಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ವಿಶ್ವ ಅಂಧರ ಕ್ರೀಡಾಕೂಟಕ್ಕೆ ಭಾರತ ಕ್ರಿಕೆಟ್ ತಂಡಗಳು

ಅಜಯ್, ವರ್ಷಾಗೆ ನಾಯಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜಯ್ ಕುಮಾರ್ ರೆಡ್ಡಿ ಹಾಗೂ ಕರ್ನಾಟಕದ ವರ್ಷಾ ಉಮಾಪತಿ ಅವರು ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್ ಬರ್ಮಿಂಗ್‌ಹ್ಯಾಮ್‌ನಲ್ಲಿ ಆಯೋಜಿಸಿರುವ ವಿಶ್ವ ಅಂಧರ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮ ವಾಗಿ ಭಾರತದ ಪುರುಷ ಹಾಗೂ ಮಹಿಳಾ ತಂಡವನ್ನು ಮುನ್ನಡೆಸಲಿದ್ದಾರೆ.

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ಇದೇ 20 ರಿಂದ 26ರವರೆಗೆ ಟೂರ್ನಿ ನಡೆಯಲಿದೆ. ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಯು ತಂಡಗಳನ್ನು ಆಯ್ಕೆ ಮಾಡಿದೆ.

ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಿಎಬಿಐ ಚೇರ್ಮನ್ ಮಹಾಂತೇಶ ಜಿ ಕಿವುಡಸಣ್ಣವರ್, 'ಇದೇ ಮೊದಲ ಸಲ ಪುರುಷ ಹಾಗೂ ಮಹಿಳಾ ತಂಡಗಳೆರಡೂ ವಿಶ್ವ ಕ್ರೀಡಾಕೂಟಕ್ಕೆ ತೆರಳುತ್ತಿರುವುದು ಸಂತಸದ ವಿಷಯ. ಕಳೆದ ಹತ್ತು ವರ್ಷಗಳಲ್ಲಿ ಭಾರತ ಪುರುಷರ ತಂಡವು ಏಕದಿನ ಕ್ರಿಕೆಟ್‌ನಲ್ಲಿ ಎರಡು ವಿಶ್ವಕಪ್ ಹಾಗೂ ಒಂದು ಏಷ್ಯಾಕಪ್ ಜಯಿಸಿದೆ' ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಅಧ್ಯಕ್ಷ ಬುಸೇಗೌಡ, 'ವಿಶ್ವ ಅಂಧರ ಕ್ರೀಡಾಕೂಟದಲ್ಲಿ ಕ್ರಿಕೆಟ್ ಸೇರ್ಪಡೆ ಮಾಡಿದ ಐಬಿಎಸ್‌ಎ ಕ್ರಮವನ್ನು ಸ್ವಾಗತಿಸುತ್ತೇವೆ. ನಮ್ಮ ತಂಡಗಳಿಗೆ ವಿಶ್ವ ವೇದಿಕೆಯಲ್ಲಿ ದೊಡ್ಡ ಸಾಧನೆ ಮಾಡಲು ಇದೊಂದು ಸುವರ್ಣ ಅವಕಾಶವಾಗಿದೆ' ಎಂದರು.

ಬೆಂಗಳೂರಿನಲ್ಲಿ ಗುರುವಾರ ಭಾರತ ಅಂಧರ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡದವರ ಪೋಷಾಕುಗಳನ್ನು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ (ಎಡದಿಂದ ಎರಡನೇಯವರು) ಬಿಡುಗಡೆ ಮಾಡಿದರು. ಮಹಿಳಾ ತಂಡದ ನಾಯಕಿ ವರ್ಷಾ ಉಮಾಪತಿ, ಮಹಾಂತೇಶ್ ಕಿವಡಸಣ್ಣವರ, ಬುಸೇಗೌಡ, ಮುಖ್ಯ ಕೋಚ್ ಜಾನ್ ಡೇವಿಡ್, ಪುರುಷ ತಂಡದ ನಾಯಕ ಅಜಯಕುಮಾರ್ ರೆಡ್ಡಿ ಇದ್ದಾರೆ

ತಂಡಗಳು: ಪುರುಷರು: ಅಜಯ್ ಕುಮಾರ್ ರೆಡ್ಡಿ (ನಾಯಕ), ವೆಂಕಟೇಶ್ವರ್ ರಾವ್ ದುನ್ನಾ (ಉಪನಾಯಕ), ಬಸಪ್ಪ ವಡ್ಡಗೋಳ, ಮೊಹಮ್ಮದ್ ಜಾಫರ್ ಇಕ್ಬಾಲ್, ಮಹಾರಾಜ ಶಿವಸುಬ್ರಮಣಿಯನ್, ಓಂಪ್ರಕಾಶ್ ಪಾಲ್, ನರೇಶ್ ಭಾಯ್ ಬಾಲುಭಾಯ್ ತುಮ್ಡಾ, ನಿಲೇಶ್ ಯಾದವ್, ಪಂಕಜ್ ಭುಯೆ, ರಾಮ್ಬೀರ್ ಸಿಂಗ್, ನಕುಲಾ ಬಡನಾಯಕ, ಇರ್ಫಾನ್ ದಿವಾನ್, ಪ್ರಕಾಶ್ ಜಯರಾಮಯ್ಯ, ಸುನಿಲ್ ರಮೇಶ್, ದೀಪಕ್ ಮಲಿಕ್, ದುರ್ಗಾರಾವ್ ಟೊಂಪಾಕಿ, ದಿನೇಶ್ ಭಾಯ್ ಚಮಯ್ಯಾಭಾಯಿ ರಾತ್ವಾ.

ಮಹಿಳೆಯರು: ವರ್ಷಾ ಉಮಾಪತಿ (ನಾಯಕಿ), ವಲಸನೈನಿ ರಾವಣಿ, ಸಿಮುದಾಸ್, ಪದ್ಮಿನಿ ಟುಡು, ಕಿಲ್ಲಾಕಾ ಸಂಧ್ಯಾ, ಪ್ರಿಯಾ, ಗಂಗವ್ವ ಹರಿಜನ, ಸಾಂಡ್ರಾ ಡೇವಿಸ್ ಕರಿಮಲಿಕ್ಕಲ್, ಬಸಂತಿ ಹನ್ಸಾ, ಪ್ರೀತಿ ಪ್ರಸಾದ್, ಸುಷ್ಮಾ ಪಟೇಲ್, ಎಂ. ಸತ್ಯವತಿ, ಫುಲಾ ಸಾರೆನ್, ಝಿಲಿ ಬಿರುವಾ, ಗಂಗಾ ಸಂಭಾಜಿ ಕದಂ, ಟಿ.ಸಿ. ದೀಪಿಕಾ.

ಆ.12ರಿಂದ ಈಶ ಗ್ರಾಮೋತ್ಸವ

ಬೆಂಗಳೂರು: ಈಶ ಫೌಂಡೇಷನ್‌ನ ಸಾಮಾಜಿಕ ಅಭಿವೃದ್ಧಿ ಅಂಗವಾದ ಈಶ ಔಟ್‌ರೀಚ್ ವತಿಯಿಂದ ಕರ್ನಾಟಕದ 13 ಜಿಲ್ಲೆಗಳ 3200ಕ್ಕೂ ಹಳ್ಳಿಗಳಲ್ಲಿ 'ಈಶ ಗ್ರಾಮೋತ್ಸವಕ್ಕೆ ಸಿದ್ಧತೆ ನಡೆದಿದ್ದು, ಆ.12ರಂದು ಸ್ಪರ್ಧೆಗಳಿಗೆ ಚಾಲನೆ ದೊರೆಯಲಿದೆ.

ಮೊದಲ ಹಂತದ ಪಂದ್ಯಗಳು ಆ.12 ಮತ್ತು 13ರಂದು ಚಿಕ್ಕಬಳ್ಳಾಪುರ, ವಿಜಯಪುರ, ಕೋಲಾರ, ವಿಜಯನಗರ, ಶಿವಮೊಗ್ಗ, ಮೈಸೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆಯಲಿವೆ. ಆ.19 ಮತ್ತು 20ರಂದು ಬೆಂಗಳೂರು ಗ್ರಾಮಾಂತರ, ತುಮಕೂರು, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ, ಆ.26 ಮತ್ತು 27ರಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯಲಿವೆ. 2ನೇ ಹಂತದ ಪಂದ್ಯಗಳು ಸೆ. 3ರಂದು ಚಿಕ್ಕ ಬಳ್ಳಾಪುರ ಮತ್ತು ಮೈಸೂರಿನಲ್ಲಿ ಆಯೋಜಿಸಲಾಗಿದೆ. ಸೆ.23ರಂದು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಫೈನಲ್ ಹಂತದ ಪಂದ್ಯಗಳು ನಡೆಯಲಿವೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ನಾಕೌಟ್‌ಗೆ ಮೊರಾಕ್ಕೊ, ಕೊಲಂಬಿಯಾ

ಜರ್ಮನಿಗೆ ಕಗ್ಗಂಟಾದ ಕೊರಿಯಾ

ಬ್ರಿಸ್ಬೇನ್ (ಎಎಫ್‌ಪಿ): ಮಹಿಳಾ ವಿಶ್ವಕಪ್ ಫುಟ್‌ಬಾಲ್ ಇತಿಹಾಸದಲ್ಲೇ ಜರ್ಮನಿ ತಂಡ ಮೊದಲ ಬಾರಿ ಗ್ರೂಪ್ ಹಂತದಲ್ಲೇ ಹೊರಬಿದ್ದಿತು. ಗುರುವಾರ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಎದುರು 1–1 ಡ್ರಾಕ್ಕೇ ಸೀಮಿತಗೊಳ್ಳುವ ಮೂಲಕ ಜರ್ಮನಿ ಹತಾಶೆ ಅನುಭವಿಸಿತು.

ಇನ್ನೊಂದೆಡೆ, ವಿಶ್ವಕಪ್‌ನಲ್ಲಿ ಮೊದಲ ಬಾರಿ ಆಡುತ್ತಿರುವ ಮೊರಾಕ್ಕೊ ಪರ್ತ್‌ನಲ್ಲಿ ನಡೆದ ತನ್ನ ಕೊನೆಯ ಪಂದ್ಯದಲ್ಲಿ ಕೊಲಂಬಿಯಾಕ್ಕೆ 1–0 ಯಿಂದ ಸೋಲುಣಿಸಿದ ಕಾರಣ ಜರ್ಮನಿಗೆ ನಾಕೌಟ್ ಬಾಗಿಲು ಸಂಪೂರ್ಣವಾಗಿ ಮುಚ್ಚಿತು. ಮೊರಾಕ್ಕೊ ಪಂದ್ಯ ಡ್ರಾ ಆದರೂ ಜರ್ಮನಿಗೆ ನಾಕೌಟ್ ಅವಕಾಶವಿತ್ತು.

'ಎಚ್' ಗುಂಪಿನಲ್ಲಿ ಕೊಲಂಬಿಯಾ ಮತ್ತು ಮೊರಾಕ್ಕೊ ಮೂರು ಪಂದ್ಯಗಳಿಂದ ತಲಾ ಆರು ಪಾಯಿಂಟ್ಸ್ ಸಂಗ್ರಹಿಸಿ (ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದೊಡನೆ) ನಾಕೌಟ್‌ಗೆ ಮುನ್ನಡೆದವು. ನಾಲ್ಕು ಪಾಯಿಂಟ್ಸ್ ಪಡೆದ ಜರ್ಮನಿ ತವರಿಗೆ ಮರಳಬೇಕಾಗಿದೆ. ಕೊರಿಯಾ (1 ಪಾಯಿಂಟ್) ಕೊನೆಯ ಸ್ಥಾನ ಗಳಿಸಿತು.

2003 ಮತ್ತು 2007ರಲ್ಲಿ ಚಾಂಪಿಯನ್ನರಾಗಿದ್ದ ಜರ್ಮನಿ ವನಿತೆಯರು, ಕಳೆದ ವರ್ಷ ಯುರೋಪಿಯನ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸಿದ್ದು, ಈ ಟೂರ್ನಿಗೆ ಬರುವಾಗ ಪ್ರಶಸ್ತಿಗೆ ನೆಚ್ಚಿನ ತಂಡಗಳಲ್ಲಿ ಒಂದೆನಿಸಿದ್ದರು.

ನಾಕೌಟ್ ಪ್ರವೇಶ ಮಾಡಿದ ಮೊರಾಕ್ಕೊ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ಜರ್ಮನಿ ಮುಂದಿನ ಹಂತಕ್ಕೆ ತೇರ್ಗಡೆ ಆಗಬೇಕಾಗಿದ್ದರೆ ಕೊರಿಯಾ ಮೇಲೆ ಗೆಲ್ಲಲೇಬೇಕಿತ್ತು. ಆದರೆ, ಪಂದ್ಯದ ಆರನೇ ನಿಮಿಷ ಚೊ ಸೂ ಹ್ಯೂನ್ ಗಳಿಸಿದ ಗೋಲಿನ ಮೂಲಕ ಕೊರಿಯಾ ಮುನ್ನಡೆಯಿತು. ನಂತರ ತನ್ನ ಗಮನವನ್ನೆಲ್ಲಾ ರಕ್ಷಣೆಯತ್ತಲೇ ಹರಿಸಿ, ಜರ್ಮನಿ ಆಟಗಾರ್ತಿಯರಿಗೆ ಹತಾಶೆ ಮೂಡಿಸಿತು. ಮಧ್ಯಂತರಕ್ಕೆ ಮೂರು ನಿಮಿಷಗಳಿರುವಾಗ ನಾಯಕಿ ಅಲೆಕ್ಸಾಂಡ್ರಾ ಪೊಪ್ ಮೂಲಕ ಜರ್ಮನಿ ಸ್ಕೋರ್ ಸಮ ಮಾಡಿಕೊಂಡಿತು. ಆದರೆ ಉಳಿದ ಅವಧಿಯಲ್ಲಿ ನಿರ್ಣಾಯಕ ಗೋಲು ಗಳಿಸಲು ಆ ತಂಡಕ್ಕೆ ಸಾಧ್ಯವಾಗಲಿಲ್ಲ.

ಈ ಬಾರಿ ಪ್ರಬಲ ತಂಡಗಳಾದ ಬ್ರೆಜಿಲ್, ಜರ್ಮನಿ, ಇಟಲಿ, ಒಲಿಂಪಿಕ್ ಚಾಂಪಿಯನ್ ಕೆನಡಾ, ನಾಕೌಟ್‌ಗೆ ಮೊದಲೇ ಗಂಟುಮೂಟೆ ಕಟ್ಟಬೇಕಾಯಿತು.

ಕೊಲಂಬಿಯಾ 16ರ ಘಟ್ಟದಲ್ಲಿ ಜಮೈಕಾ ವಿರುದ್ಧ ಆಡಲಿದೆ. ಮೊರಾಕ್ಕೊ ಇನ್ನೊಂದೆಡೆ ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಮೊರಾಕ್ಕೊಗೆ ಜಯ: ಅನಿಸ್ಸಾ ಲಮ್ಹಾರಿ ಅವರು ಪೂರ್ವಾರ್ಧದ ಕೊನೆಯಲ್ಲಿ ಗಳಿಸಿದ ಗೋಲಿನಿಂದ ಮೊರಾಕ್ಕೊ ತಂಡ, ಕೊಲಂಬಿಯಾ ಮೇಲೆ ಜಯಗಳಿಸಿತು.